ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 28 ಬುಧವಾರ 2022

ಸಂಪುಟ: 43 | ಸಂಚಿಕೆ: 251 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

BF.7 ರೂಪಾಂತರಿ ವೈರಸ್ ಸೋಂಕಿತರಿಗೆ ಉಚಿತ ಚಿಕಿತ್ಸೆ: ರಾಜ್ಯ ಸರ್ಕಾರ ಘೋಷಣೆ

ಬೆಂಗಳೂರು, ಡಿ.27– ದೇಶಾದ್ಯಂತ ಮತ್ತೊಂದು ಕೋವಿಡ್ ಅಲೆಯ ಭೀತಿ ಸೃಷ್ಟಿಸಿರುವ ಒಮಿಕ್ರಾನ್ ಬಿಎಫ್.7 ರೂಪಾಂತರಿ ತಳಿ ಸೋಂಕಿತರಿಗೆ ಉಚಿತ ಚಿಕಿತ್ಸೆ ನೀಡಲಾಗುವುದು ಎಂದು ರಾಜ್ಯ ಸರ್ಕಾರ ಸೋಮವಾರ ಘೋಷಿಸಿದೆ. ಈ ಕುರಿತು ನಡೆದ ತಜ್ಞರ ಸಭೆ ಬಳಿಕ ಮಾಧ್ಯಮಗಳಿಗೆ ಮಾಹಿತಿ ನೀಡಿದ ಕಂದಾಯ ಸಚಿವ ▶ 8ನೇ ಪುಟಕ್ಕೆ

ಕಡಕೊಳ ಬಳಿ ಪ್ರಧಾನಿ ಮೋದಿ ಸಹೋದರ

ಪ್ರಹ್ಲಾದ್ ಮೋದಿ, ಕುಟುಂಬ ಸದಸ್ಯರಿದ್ದ ಕಾರು ಅಪಘಾತ


- ಪ್ರಹ್ಲಾದ್ ಬಾಯ್ ದಾಮೋದರ ದಾಸ್ ಮೋದಿ, ಪುತ್ರ ಮೆಹುಲ್ ಪ್ರಹ್ಲಾದ್ ಬಾಯ್ ಮೋದಿ, ಸೊಸೆ ಜಿನಲ್ ಮೋದಿ, ಮೊಮ್ಮಗ ಮಹಾರ್ಥ್ ಮೆಹುಲ್ ಮೋದಿ, ಕಾರು ಚಾಲಕ ಸತ್ಯನಾರಾಯಣರಿಗೆ ಗಾಯ
- ಬೆಂಗಳೂರಿಂದ ಬಂಡೀಪುರಕ್ಕೆ ತೆರಳುತ್ತಿದ್ದಾಗ ಮಧ್ಯಾಹ್ನ 1.30 ಗಂಟೆಯಲ್ಲಿ ಕಡಕೊಳ ಬಳಿ ರೋಡ್ ಡಿವೈಡರ್‌ಗೆ ಡಿಕ್ಕಿ ಹೊಡೆದ ಮರ್ಸಿಡಿಸ್ ಬೆನ್ಜ್ ಕಾರು
- ಮುಂದೆ ಪೈಲಟ್, ಹಿಂದೆ ಎಸ್ಕಾರ್ಟ್ ವಾಹನ ಚಲಿಸುತ್ತಿದ್ದಾಗ ಬೆನ್ಜ್ ಕಾರು ಚಾಲಕನ ನಿದ್ರೆ ಮಂಪರು ಅಪಘಾತಕ್ಕೆ ಕಾರಣ ಶಂಕೆ

ಮೈಸೂರು, ಡಿ.27(ಆರ್‌ಕೆ)–ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸಹೋದರ ಪ್ರಹ್ಲಾದ್ ಬಾಯ್ ದಾಮೋದರ್ ದಾಸ್ ಮೋದಿ ಹಾಗೂ ಅವರ ಪುತ್ರ, ಸೊಸೆ, ಮೊಮ್ಮಗ ಪ್ರಯಾಣಿಸುತ್ತಿದ್ದ ಮರ್ಸಿಡಿಸ್ ಬೆನ್ಜ್ ಕಾರು ಬೆಂಗಳೂರು–ನೀಲಗಿರಿ ರಾಷ್ಟ್ರೀಯ ಹೆದ್ದಾರಿಯಲ್ಲಿ, ಕಡಕೊಳ ಬಳಿ ಇಂದು (ಮಂಗಳವಾರ) ಮಧ್ಯಾಹ್ನ ಅಪಘಾತಕ್ಕೀಡಾಗಿದೆ.

ಘಟನೆಯಲ್ಲಿ ಪ್ರಹ್ಲಾದ್ ಬಾಯ್ ದಾಮೋದರ್ ದಾಸ್ ಮೋದಿ(70), ಮಗ ಮೆಹುಲ್ ಪ್ರಹ್ಲಾದ್ ಬಾಯ್ ಮೋದಿ(40), ಸೊಸೆ ಜಿನಲ್ ಮೋದಿ(35), ಮೊಮ್ಮಗ ಮಹಾರ್ಥ್ ಮೆಹುಲ್ ಮೋದಿ(6) ಹಾಗೂ ಕಾರು ಚಾಲಕ ಸತ್ಯನಾರಾಯಣ(46) ಗಾಯಗೊಂಡಿದ್ದು, ಅವರನ್ನು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಅಹಮದಾಬಾದ್‌ನಿಂದ ವಿಮಾನದಲ್ಲಿ ಬೆಂಗಳೂರಿಗೆ ಬಂದಿದ್ದ ಪ್ರಹ್ಲಾದ್ ಮೋದಿ ಅವರ ಕುಟುಂಬ ಸದಸ್ಯರು, ಬೆನ್ಜ್ (ಕೆಎ 51 ಎಂ.ಎನ್. 5678) ಸೇರಿದಂತೆ ಎರಡು ಕಾರುಗಳಲ್ಲಿ ಇಂದು ಬೆಂಗಳೂರಿನಿಂದ ಮೈಸೂರು ಮಾರ್ಗ ಬಂಡೀಪುರಕ್ಕೆ ಪ್ರಯಾಣಿಸುತ್ತಿದ್ದರು. ▶ 10ನೇ ಪುಟಕ್ಕೆ



ಸುತ್ತೂರು ಶ್ರೀಗಳು ಜೆಎಸ್‌ಎಸ್ ಆಸ್ಪತ್ರೆ ತೀವ್ರ ನಿಗಾ ಘಟಕದಲ್ಲಿದ್ದ ಪ್ರಧಾನಿ ಮೋದಿ ಸಹೋದರ ಪ್ರಹ್ಲಾದ್ ಮೋದಿ ಹಾಗೂ ಕುಟುಂಬದವರ ಆರೋಗ್ಯ ವಿಚಾರಿಸಿದರು. ಈ ವೇಳೆ ಶಾಸಕ ಎಸ್.ಎ.ರಾಮದಾಸ್ ಮತ್ತಿತರರಿದ್ದರು.



ಅಪಘಾತಕ್ಕೀಡಾದ ಬೆನ್ಜ್ ಕಾರು

ಹಾಸನದಲ್ಲಿ ಮಿಕ್ಸಿ ಬ್ಲಾಸ್ಟ್ ಪ್ರಕರಣ: ವೈಯಕ್ತಿಕ ದ್ವೇಷದ ಕೃತ್ಯ

ಹಾಸನ, ಡಿ.27– ಮಿಕ್ಸಿ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವು ಗೊಂದಲಗಳು ಸೃಷ್ಟಿಯಾಗಿವೆ. ಇದು ಯಾವುದೇ ಉಗ್ರಗಾಮಿ ಕೃತ್ಯಕ್ಕೆ ಸಂಬಂಧಿಸಿದ್ದಲ್ಲ. ಬದಲಿಗೆ ವೈಯಕ್ತಿಕ ದ್ವೇಷದಿಂದ ನಡೆದಿರುವ ಘಟನೆ ಎಂದು ಎಸ್‌ಪಿ ಹರಿರಾಂ ಶಂಕರ್ ಸ್ಪಷ್ಟಪಡಿಸಿದರು.

ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಎಸ್‌ಪಿ, ಕೃತ್ಯದಲ್ಲಿ ಯಾವುದೇ ಉಗ್ರ ಸಂಘಟನೆ ಅಥವಾ ಉಗ್ರಗಾಮಿಗಳ ಕೈವಾಡವಿಲ್ಲ. ಯಾರು ಈ ಪಾರ್ಸಲ್ ಅನ್ನು ತೆಗೆದುಕೊಳ್ಳಬೇಕಿತ್ತೋ ಆ ವ್ಯಕ್ತಿಯನ್ನು ಗುರಿಯಾಗಿಸಿ ಕೃತ್ಯ ಎಸಗಲಾಗಿದೆ. ಇದರಲ್ಲಿ ಉಗ್ರರು ನಡೆಸುವ ರೀತಿಯ ಯಾವುದೇ ಸ್ಫೋಟಕ ತಂತ್ರಜ್ಞಾನವನ್ನು ಬಳಸಿಲ್ಲ ಎಂದು ಹೇಳಿದರು.

ಮೈಸೂರಿನಿಂದ ಎಫ್‌ಎಸ್‌ಎಲ್ ತಂಡ ಆಗಮಿಸಿದ್ದು, ಕೆಲವು ಅವಶೇಷಗಳನ್ನು ವಶಕ್ಕೆ ಪಡೆದು ಪರಿಶೀಲನೆ ನಡೆಸಿದ್ದಾರೆ. ಪ್ರಕರಣ ಸಂಬಂಧ ಇಬ್ಬರನ್ನು ವಶಕ್ಕೆ ಪಡೆದು ತನಿಖೆ ನಡೆಸಲಾಗುತ್ತಿದೆ. ಹೆಚ್ಚಿನ ತನಿಖೆ ಮುಂದುವರೆದಿದೆ ಎಂದು ತಿಳಿಸಿದರು.

ಎಲೆಕ್ಟ್ರಾನಿಕ್ ಸರ್ಕ್ಯೂಟ್‌ನಿಂದ ಇಷ್ಟು ದೊಡ್ಡ ಪ್ರಮಾಣದ ಸ್ಫೋಟ ಸಂಭವಿಸಲು ಸಾಧ್ಯವಿಲ್ಲ. ಬದಲಿಗೆ ಸಣ್ಣ ಮಟ್ಟದ ಸ್ಫೋಟಕ ವಸ್ತುಗಳನ್ನು ಬಳಸಿ ಕೃತ್ಯ ಎಸಗಿರುವ ಸಾಧ್ಯತೆ ಇದೆ. ಸಾರ್ವಜನಿಕರು ಯಾವುದೇ ಆತಂಕಕ್ಕೆ ಒಳಗಾಗುವುದು ಬೇಡ.

ಯಾವುದೇ ಊಹಾಪೋಹಗಳನ್ನು ನಂಬಬಾರದು. ಕೊರಿಯರ್ ಪಡೆದು ವಾಪಸ್ ನೀಡಿದವರನ್ನು ಹಾಗೂ ಕೊರಿಯರ್ ಮಾಡಿದವರನ್ನು ವಶಕ್ಕೆ ಪಡೆಯಲಾಗಿದೆ. ಪಾರ್ಸಲ್ ಬಗ್ಗೆ ಹೆಚ್ಚಿನ ಮಾಹಿತಿ ಕಲೆ ಹಾಕಲಾಗುತ್ತಿದೆ ಎಂದು ಎಸ್‌ಪಿ ವಿವರಿಸಿದರು.

ಕೆ.ಎಸ್.ಈಶ್ವರಪ್ಪ, ಕರುಣಾಕರ ರೆಡ್ಡಿ, ಸುರೇಶ್‌ಕುಮಾರ್ ಸೇರಿ

43 ಹಾಲಿ ಶಾಸಕರಿಗೆ ಟಿಕೆಟ್ ಕೈತಪ್ಪುವ ಸಾಧ್ಯತೆ


ಶೇ.40 ಮಂದಿ ಹೊಸಬರಿಗೆ ಅದೃಷ್ಟ ಒಲಿಯುವ ಸಂಭವ

- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ವರಿಷ್ಠರ ಮಾಹಿತಿ
- ಕಾಂಗ್ರೆಸ್, ಜೆಡಿಎಸ್ ಚುನಾವಣಾ ಸಿದ್ಧತೆ ಬಗ್ಗೆ ಸಿಎಂಗೆ ಎಚ್ಚರಿಕೆ
- ಪಂಚಮಸಾಲಿ, ಒಕ್ಕಲಿಗ ಸಮುದಾಯ ಮೀಸಲಾತಿ ಪ್ರಸ್ತಾಪಕ್ಕೆ ಸದ್ಯಕ್ಕೆ ಯಾವುದೇ ನಿರ್ಧಾರವಿಲ್ಲ
- ಚುನಾವಣಾ ಸಿದ್ಧತೆ ವಿಚಾರದಲ್ಲಿ ನಾವು ಹೇಳಿದಂತೆ ಕೇಳಿ
- ಸಂಪುಟ ವಿಸ್ತರಣೆ ಬಗ್ಗೆ ನಾವು ನಿರ್ಧರಿಸುತ್ತೇವೆ





ಅಮಿತ್ ಶಾ



ಜೆ.ಪಿ.ನಡ್ಡಾ



ಬಸವರಾಜ ಬೊಮ್ಮಾಯಿ



ಕೆ.ಎಸ್.ಈಶ್ವರಪ್ಪ



ಕರುಣಾಕರ ರೆಡ್ಡಿ



ಸುರೇಶ್‌ಕುಮಾರ್

ಬೆಂಗಳೂರು, ಡಿ.27(ಕೆಎಂಶಿ)–ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಹಿರಿಯ ಸದಸ್ಯರಾದ ಕೆ.ಎಸ್.ಈಶ್ವರಪ್ಪ, ಕರುಣಾಕರ ರೆಡ್ಡಿ, ಸುರೇಶ್‌ಕುಮಾರ್ ಸೇರಿದಂತೆ ಹಾಲಿ 43 ಸದಸ್ಯರಿಗೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ಕೈತಪ್ಪುವ ಸಾಧ್ಯತೆ ಹೆಚ್ಚಾಗಿದೆ.

2023ರ ಏಪ್ರಿಲ್–ಮೇನಲ್ಲಿ ಜರುಗುತ್ತಿರುವ ವಿಧಾನಸಭೆ ಚುನಾವಣಾ ತಂತ್ರಗಾರಿಕೆಗೆ ಸಂಬಂಧಿಸಿದಂತೆ ದೆಹಲಿಯಲ್ಲಿ ನಿನ್ನೆ ರಾತ್ರಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಒಟ್ಟಿಗೆ ಚರ್ಚೆ ನಡೆಸಿದ ಸಂದರ್ಭದಲ್ಲಿ ಶೇ.40 ಮಂದಿ ಹೊಸ ಮುಖಗಳ ಪರಿಚಯಿಸುವ ಮತ್ತು ಕೆಲವರಿಗೆ ಟಿಕೆಟ್ ಕೈತಪ್ಪುವ ಮಾಹಿತಿಯನ್ನು ನೀಡಿದ್ದಾರೆ.

ರಾಜ್ಯ ಸಚಿವ ಸಂಪುಟ ವಿಸ್ತರಣೆ ಮತ್ತು ಪಂಚಮಸಾಲಿ ಹಾಗೂ ಒಕ್ಕಲಿಗರ ಮೀಸಲಾತಿ ಬೇಡಿಕೆ, ಹಾಗೂ ಚುನಾವಣಾ ಸಿದ್ಧತೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಯವರು ವರಿಷ್ಠರಿಗೆ ಪೂರ್ಣ ಮಾಹಿತಿ ನೀಡಿದರು. ಮಾಹಿತಿ ಪಡೆದ ವರಿಷ್ಠರು ನಾವು ನಿಮಗೆ ತಿಳಿಸುವವರೆಗೂ ವಿಸ್ತರಣೆ ಇಲ್ಲವೇ ಮೀಸಲಾತಿ ವಿಷಯದಲ್ಲಿ ಮುಂದುವರೆಯುವುದು ಬೇಡ ಎಂದು ಕಿವಿಮಾತು ಹೇಳಿದ್ದಾರೆ. ಚುನಾವಣಾ ಪೂರ್ವ ಸಮೀಕ್ಷಾ ವರದಿ ಅನುಸಾರ ಹೊಸ ಮುಖಗಳಿಗೆ ಹೆಚ್ಚಿನ ಅವಕಾಶ ನೀಡಿದರೆ, ಪಕ್ಷಕ್ಕೆ ಲಾಭ ಎಂಬ ಮಾಹಿತಿ ಇದೆ. ಈಗಾಗಲೇ ಯಡಿಯೂರಪ್ಪನವರು ಚುನಾವಣಾ ನಿವೃತ್ತಿ ಘೋಷಿಸಿದ್ದಾರೆ. ಹಾಲಿ ಸದಸ್ಯರಿಗೆ ಟಿಕೆಟ್ ತಪ್ಪಿಸುವ ಪಟ್ಟಿ ನೀಡಿ, ಇವರಿಗೆ ಪರ್ಯಾಯವಾಗಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದರೆ, ಸ್ಥಳೀಯವಾಗಿ ರಾಜಕೀಯ ಬದಲಾವಣೆ ಸಾಧ್ಯತೆಗಳಿವೆ ಎಂಬ ಮಾಹಿತಿಯನ್ನು ಪಡೆದುಕೊಂಡಿದ್ದಾರೆ.

ನೀವು ತಿಳಿದಂತೆ ಪೂರ್ಣ ಬಹುಮತದಿಂದ ಅಧಿಕಾರಕ್ಕೆ ಬರುವುದು ಕಷ್ಟವಿದೆ. ಪ್ರತಿಪಕ್ಷ ಕಾಂಗ್ರೆಸ್ ಹಾಗೂ ಜೆಡಿಎಸ್ ಅನ್ನು ರಾಜ್ಯ ಬಿಜೆಪಿ ನಾಯಕರು ಕಡೆಗಣಿಸಿದಂತೆ ಕಾಣುತ್ತಿದೆ.

ನಿಮ್ಮ ನಡವಳಿಕೆಗಳನ್ನು ಗಮನಿಸಿದರೆ, ಚುನಾವಣೆಯನ್ನು ಬಹಳ ಸುಲಭವಾಗಿ ತೆಗೆದುಕೊಂಡಿದ್ದೀರಿ. ಸದ್ಯಕ್ಕೆ ಅವೆರಡೂ ಪಕ್ಷಗಳು ತಮ್ಮದೇ ಭಾಗಗಳಲ್ಲಿ ನಮಗೆ ಭಾರೀ ಪೈಪೋಟಿ ನೀಡುತ್ತಿವೆ. ಅವರ ವೇಗಕ್ಕೆ ಕಡಿವಾಣ ಹಾಕಿ, ನಾವು ಬಲಿಷ್ಠರಾಗಬೇಕಾಗುತ್ತದೆ. ಹಿಮಾಚಲ ಪ್ರದೇಶ ವಿಧಾನಸಭಾ ಚುನಾವಣೆಯನ್ನು ▶ 8ನೇ ಪುಟಕ್ಕೆ

ಮೈಸೂರು ಜಿಲ್ಲೆಯಲ್ಲಿ ಪ್ರಧಾನಿ ಮೋದಿ ರೋಡ್ ಶೋ



ಬೆಂಗಳೂರು:ವಿಧಾನಸಭಾ ಚುನಾವಣೆ ಪ್ರಚಾರ ವೇಳೆ ಪ್ರಧಾನಿ ನರೇಂದ್ರ ಮೋದಿ ಮೈಸೂರು ನಗರ ಹಾಗೂ ಗ್ರಾಮಾಂತರದಲ್ಲಿ ರೋಡ್ ಶೋ ನಡೆಸಲಿದ್ದಾರೆ. ಮುಂಬರುವ ▶ 8ನೇ ಪುಟಕ್ಕೆ

ಕೊರೊನಾ ಮಾರ್ಗಸೂಚಿ ಅನ್ವಯ ಹೊಸ ವರ್ಷಾಚರಣೆಗೆ ಅವಕಾಶ

ಡಿಜೆ ನಿಷಿದ್ಧ, ರಾತ್ರಿ 1 ಗಂಟೆವರೆಗೆ ಮಾತ್ರ ಅವಕಾಶ

- ಬಲವಂತವಾಗಿ ಶುಭ ಕೋರುವುದು, ರಸ್ತೆಯಲ್ಲಿ ಇತರರಿಗೆ ತೊಂದರೆ ನೀಡಿದರೆ ಕ್ರಮ
- ಪಟಾಕಿ ಸಿಡಿಸುವಂತಿಲ್ಲ; ಸಂಭ್ರಮಾಚರಣೆಗೆ ನಿಗದಿತ ಸಂಖ್ಯೆ ಜನರಿಗೆ ಮಾತ್ರ ಅವಕಾಶ

ಮೈಸೂರು, ಡಿ.27(ಎಸ್‌ಬಿಡಿ)– ಹೊಸ ವರ್ಷದ ಸಂಭ್ರಮಾಚರಣೆಗೆ ಮೈಸೂರಲ್ಲಿ ತಡರಾತ್ರಿ 1 ಗಂಟೆವರೆಗೆ ಅವಕಾಶ ನೀಡಲಾಗಿದ್ದು, ಕೊರೊನಾ ಮಾರ್ಗಸೂಚಿ, ನಿಯಮ ಉಲ್ಲಂಘನೆ ಹಾಗೂ ಕಾನೂನು–ಸುವ್ಯವಸ್ಥೆಗೆ ಭಂಗ ಮಾಡುವವರ ವಿರುದ್ಧ ಶಿಸ್ತು ಕ್ರಮಕ್ಕೆ ಪೊಲೀಸರು ಸಜ್ಜಾಗಿದ್ದಾರೆ.

ಹೊಸ ವರ್ಷಾಚರಣೆ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ನಿಟ್ಟಿನಲ್ಲಿ ಸಾರ್ವಜನಿಕರು, ಹೋಟೆಲ್, ರೆಸ್ಟೋರೆಂಟ್, ಕ್ಲಬ್, ರೆಸಾರ್ಟ್, ಹೋಂ ಸ್ಟೇ, ಸರ್ವಿಸ್ ಅಪಾರ್ಟ್‌ಮೆಂಟ್, ಅಪಾರ್ಟ್‌ಮೆಂಟ್ ಅಸೋಸಿಯೇಷನ್, ಮಾಲ್‌ಗಳು ಮತ್ತು ಸಂಘ ಸಂಸ್ಥೆಗಳಿಗೆ ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಮಂಗಳವಾರ ಹಲವು ಸೂಚನೆಗಳನ್ನು ಪ್ರಕಟಿಸಿ, ಕಟ್ಟುನಿಟ್ಟಾಗಿ ಪಾಲಿಸುವಂತೆ ತಿಳಿಸಿದ್ದಾರೆ. ಹೊಸ ವರ್ಷದ ಸಂಭ್ರಮಾಚರಣೆಯನ್ನು ▶ 8ನೇ ಪುಟಕ್ಕೆ

ಚಾಮುಂಡಿಬೆಟ್ಟಕ್ಕೆ ನಿರ್ಬಂಧ



ಚಾಮುಂಡಿಬೆಟ್ಟಕ್ಕೆ ಡಿ.31ರ ರಾತ್ರಿ 7 ಗಂಟೆ ನಂತರ ಉತ್ತನಹಳ್ಳಿ ಕ್ರಾಸ್ ಗೇಟ್, ದೈವಿವನ ಗೇಟ್, ಚಾಮುಂಡಿಬೆಟ್ಟ ಪಾದದ ಗೇಟ್ ಹಾಗೂ ಲಲಿತಮಹಲ್ ಗೇಟ್ ಮೂಲಕ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ತಾವರೆಕಟ್ಟೆ ಗೇಟ್‌ನಲ್ಲಿ ಮಾತ್ರ ರಾತ್ರಿ 9 ಗಂಟೆವರೆಗೆ ಅವಕಾಶವಿರಲಿದೆ. ಯಾವುದೇ ರೀತಿಯ ಊಟ, ಮದ್ಯದ ಬಾಟಲಿಗಳನ್ನು ತೆಗೆದುಕೊಂಡು ಹೋಗಲು ಅವಕಾಶ ನೀಡುವುದಿಲ್ಲ. ಬೆಟ್ಟದಿಂದ ರಾತ್ರಿ 9 ಗಂಟೆ ಬಳಿಕ ವಾಪಸ್ಸಾಗುವವರು ತಾವರೆಕಟ್ಟೆ ಮಾರ್ಗದಲ್ಲೇ ಬರಬೇಕು. ಚಾಮುಂಡಿಬೆಟ್ಟದ ನಿವಾಸಿಗಳಿಗೆ ಮಾತ್ರ ವಿನಾಯ್ತಿ ಇದೆ.

–ಬಿ.ರಮೇಶ್, ನಗರ ಪೊಲೀಸ್ ಆಯುಕ್ತ

ವಿಶೇಷ ಕಾರ್ಯಪಡೆ; ಎಲ್ಲೆಡೆ ತೀವ್ರ ನಿಗಾ



ಸಾರ್ವಜನಿಕರಿಗೆ ಶುಭ ಕೋರುವ ನೆಪದಲ್ಲಿ ಕೀಟಲೆ ಮಾಡುವುದು, ಅಸಭ್ಯವಾಗಿ ವರ್ತಿಸುವುದನ್ನು ತಡೆಯಲು 18 ವಿಶೇಷ ಕಾರ್ಯಪಡೆ ರಚಿಸಲಾಗಿದೆ. ಮಹಿಳೆಯರ ರಕ್ಷಣೆಗಾಗಿ ಮಹಿಳಾ ಅಧಿಕಾರಿ ಮತ್ತು ಸಿಬ್ಬಂದಿಗಳ 6 ವಿಶೇಷ ತಂಡಗಳು ಹಾಗೂ 4 ಪಿಂಕ್ ಗರುಡಾ ತಂಡಗಳನ್ನು ನಿಯೋಜಿಸಲಾಗಿದೆ. ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರ ಬಗ್ಗೆ ನಿಗಾ ವಹಿಸಲು 5 ಹಾಗೂ ವಾಹನಗಳ ವ್ಹೀಲಿಂಗ್ ಮತ್ತು ಡ್ರ್ಯಾಗ್ ರೇಸ್ ಹಾಗೂ ಕರ್ಕಶ ಶಬ್ದ ಮಾಡುವುದನ್ನು ತಡೆಗಟ್ಟಲು ಸಂಚಾರ ಪೊಲೀಸರು ಮತ್ತು ತಜ್ಞರನ್ನು ಒಳಗೊಂಡ 5 ಕ್ಷಿಪ್ರ ಕಾರ್ಯಪಡೆಗಳನ್ನು ರಚಿಸಲಾಗಿದೆ. ರಿಂಗ್ ರೋಡ್‌ನಲ್ಲಿ ನಿಗಾ ವಹಿಸಲು ಹೈವೇ ಪೆಟ್ರೋಲ್ ವಾಹನ, ಇಂಟರ್‌ಸೆಪ್ಟರ್ ವಾಹನಗಳನ್ನು ನಿಯೋಜಿಸಲಾಗಿದೆ. ರಸ್ತೆಗಳು, ಪಾರ್ಕ್‌ಗಳು, ವಾಹನಗಳಲ್ಲಿ ಕುಳಿತು ಮದ್ಯಪಾನ ಮಾಡುವವರ ವಿರುದ್ಧ ಅಬಕಾರಿ ಕಾಯ್ದೆಯಡಿ ಕ್ರಮ ವಹಿಸಲು ಹಾಗೂ ನಿರ್ಜನ ಪ್ರದೇಶ ಮತ್ತು ಹೊರ ವರ್ತುಲ ಪ್ರದೇಶಗಳಲ್ಲಿ ನಿರಂತರವಾಗಿ ಗಸ್ತು ಮಾಡಲು ಪ್ರತಿಯೊಂದು ಠಾಣೆಯಿಂದ ಒಂದೊಂದು ತಂಡ ರಚಿಸಿ, ನಿಯೋಜಿಸಲಾಗುವುದು. ಯಾವುದೇ ಅಹಿತಕರ ಘಟನೆ ನಡೆಯದಂತೆ ವಿಶೇಷ ಕಾರ್ಯಪಡೆಗಳು ನಗರದೆಲ್ಲೆಡೆ ಸಂಚರಿಸಿ, ನಿಗಾ ವಹಿಸಲಿವೆ. ಅಲ್ಲದೆ ನಗರದ ಪ್ರಮುಖ ವೃತ್ತ, ರಸ್ತೆಗಳಲ್ಲೂ ಪೊಲೀಸರನ್ನು ನಿಯೋಜಿಸಲಾಗುವುದು. ಕಾನೂನು ಉಲ್ಲಂಘಿಸಿದವರ ವಿರುದ್ಧ ಖಂಡಿತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಎಚ್ಚರಿಸಿದ್ದಾರೆ.

ಮೈಸೂರು ಜಿಲ್ಲಾ ಟ್ರ್ಯಾಕ್ ಅಂಡ್ ಫೀಲ್ಡ್ ಅಥ್ಲೆಟಿಕ್ ಕ್ರೀಡಾಕೂಟದ ವಿಜೇತರು

ಮೈಸೂರು, ಡಿ.27(ಆರ್‌ಕೆಬಿ)– ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಮೈಸೂರು ಜಿಲ್ಲಾ ಅಥ್ಲೆಟಿಕ್ ಅಸೋಸಿಯೇಷನ್ ಮಂಗಳವಾರ ಏರ್ಪಡಿಸಿದ್ದ 14 ಮತ್ತು 16 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ಮೈಸೂರು ಜಿಲ್ಲಾ ಟ್ರಾಕ್ ಅಂಡ್ ಫೀಲ್ಡ್ ಕ್ರೀಡಾಕೂಟದ ಫಲಿತಾಂಶ ಹೀಗಿದೆ.

16 ವರ್ಷದೊಳಗಿನ ಬಾಲಕಿಯರ ವಿಭಾಗ: 1600 ಮೀಟರ್: 1. ಮಾನಸ, 2. ಅಂಕಿತಾ, 3. ಜಿ.ಹರ್ಷಿತಾ ಶ್ರೀ. **ಶಾಟ್‌ಪುಟ್:** 1. ಎಂ.ವೈಷ್ಣವಿ, 2.ಎಂ.ಎಸ್.ಲಾವಣ್ಯ, ಎಲ್.ಎಲ್.ನಿಸರ್ಗ. **ಹೈಜಂಪ್:** 1. ಎಸ್.ಸಾಹಿತ್ಯ, 2. ಕೆ.ಎಸ್.ಸಂಜನಾ, 3. ಚಿನ್ನು ಕುಮಾರಿ. **ಡಿಸ್ಕಸ್ ಥ್ರೋ:** 1. ಕೆ.ಪ್ರಾರ್ಥನಾ, 2. ಎಲ್.ಸಿ.ನಿಸರ್ಗ, 3.ಸೈಯೆದಾ ರಿಫಾ. **80 ಮೀ. ಹರ್ಡಲ್ಸ್:** 1.ರಿಷಿಕಾ ಸುದೀಪ್, 2.ಯಶಸ್ವಿನಿ, 3. ಜೆ.ಆರ್.ಅನಿತಾ. **80 ಮೀ.ಓಟ:** 1.ಲೇಖನಾ ಎಸ್.ಪ್ರಸಾದ್, 2. ದಿವ್ಯಾ ಭಾರದ್ವಾಜ್, 3.ಅಪೇಕ್ಷಾ. **600 ಮೀ. ಓಟ:** 1. ಹರ್ಷಿತಾ ಶ್ರೀ, 2. ಡಿ.ಕಾಂಚನಾ, 3. ಜೆ.ಆರ್.ಅನಿತಾ. **ಲಾಂಗ್ ಜಂಪ್:** 1. ಅಪೇಕ್ಷಾ, 2.ಲೇಖನಾ ಎಸ್.ಪ್ರಸಾದ್, 3.ಅನುಶ್ರೀ. **ಜಾವೆಲಿನ್ ಥ್ರೋ:** 1. ಎಲ್.ಪಂಚಮಿ, 2. ಕೆ.ಪ್ರಾರ್ಥನಾ, 3. ಶ್ರದ್ಧಾ.

14 ವರ್ಷದೊಳಗಿನ ಬಾಲಕಿಯರ ವಿಭಾಗ: ಟ್ರೈಥಲಾನ್ ಗ್ರೂಪ್ ಎ: 1. ಎನ್.ನಿಕಿತಾ, 2. ವರ್ಷಾ ಎಸ್.ಗೌಡ, 3. ರಶ್ಮಿ. **ಕಿಡ್ಸ್ ಜಾವೆಲಿನ್:** 1. ಸಿ.ಕೆ.ಯುಧಿ, 2. ಕಷ್ವಿ, 3. ವರ್ಷಾ ಎಸ್.ಗೌಡ. **ಟ್ರೈಥಲಾನ್ ಗ್ರೂಪ್ ಸಿ:** 1. ದೀಪಿಕಾ, 2.ಕಷ್ವಿ, 3. ವರ್ಷಾ. **ಟ್ರೈಥಲಾನ್ ಗ್ರೂಪ್ ಸಿ:** 1.ಸಿ.ಕೆ.ಯುಧಿ, 2.ಎಸ್.ಗೌತಮಿ, 3. ಮಾಣಿಕಾ ಆದ್ಯ

16 ವರ್ಷದೊಳಗಿನ ಬಾಲಕರ ವಿಭಾಗ: 1600 ಮೀಟರ್: 1. ಶಾರ್ವಿಕ್, 2. ಬಿ.ಅಮೋಘ್, 3. ಕೆ.ಯತಿನ್. **ಹೈಜಂಪ್:** 1. ಅಭಿಜ್ಞಾ ಅನಿಲ್ ಗೌಡ, 2.ಅಭಯ್ ಮಂಜುನಾಥ್, ಧ್ರುವ ನಾಗೇಂದ್ರ. **ಶಾಟ್‌ಪುಟ್:** 1. ಹರ್ಷ, 2. ಬಿ.ಎಸ್.ಕನಿಷ್ಕ, 3. ಭುವನ್ ದಕ್ಷ್. **ಜಾವೆಲಿನ್ ಥ್ರೋ:** 1. ಕೆ.ಪುನೀತ್, 2.ಎಂ.ಎ.ಕೀರ್ತನಾ ಗೌಡ, 3. ಎಸ್.ಎ.ಹೇಮಂತ್‌ಕುಮಾರ್. **80 ಮೀ. ಹರ್ಡಲ್ಸ್:** 1. ಎಸ್.ಸೃಜನ್, 2.ಕುಮಾರ್, 3. ಬಿ.ಎಸ್.ಬಾಬು **80 ಮೀ. ಓಟ:** 1.ಚಿರಂತ್, 2.ಡಿ.ಪರ್ವತ್, 3. ಬಿ.ವಿಜಯ್. **600 ಮೀ. ಓಟ:** 1.ಎ.ಪಿ.ಪುಷ್ಯ, 2. ಎಸ್.ಆರ್.ಶಾರ್ವಿಕ್, 3. ಡಿ.ಎ.ಆಕಾಶ್.

ಜ.3ರಿಂದ 9ರವರೆಗೆ ಬೆಂಗಳೂರಲ್ಲಿ ಉಚಿತ ಮೆಗಾ ಜೈಪುರ ಫುಟ್ ಕ್ಯಾಂಪ್

ಮೈಸೂರು,ಡಿ.27(ಪಿಎಂ)–ರೋಟರಿ ಬೆಂಗಳೂರು ಪೀಣ್ಯ (ಆರ್‌ಐ ಡಿಸ್ಟ್ರಿಕ್ 3190) ಮತ್ತು ಭಗವಾನ್ ಮಹಾವೀರ್ ವಿಕಲಾಂಗ ಸಹಾಯತಾ ಸಮಿತಿ ವತಿಯಿಂದ 2023ರ ಜ.3ರಿಂದ 9ರವರೆಗೆ 25ನೇ ಉಚಿತ ಮೆಗಾ ಜೈಪುರ ಫುಟ್ ಕ್ಯಾಂಪ್ ಆಯೋಜಿಸಲಾಗಿದೆ.

ಬೆಂಗಳೂರಿನ ಶಿವಾಜಿನಗರದ ಭಗವಾನ್ ಮಹಾವೀರ್ ರಸ್ತೆಯ ಶ್ರೀ ಎಸ್‌ಎಸ್ ಬಿಎಸ್ ಜೈನ್ ಸಂಘ ಟ್ರಸ್ಟ್‌ನ ಗಣೇಶ್ ಬಾಗ್ ಆವರಣದಲ್ಲಿ ಶಿಬಿರ ನಡೆಯಲಿದೆ. ದೂರದ ಊರುಗಳಿಂದ ಶಿಬಿರಕ್ಕೆ ಆಗಮಿಸುವ ಫಲಾನುಭವಿಗಳಿಗೆ ಶಿಬಿರದ ಅವಧಿಯಲ್ಲಿ ಉಚಿತ ಆಹಾರ ಮತ್ತು ವಸತಿ ಸೌಲಭ್ಯ ಇರಲಿದೆ. ಕೃತಕ ಕೈ–ಕಾಲು, ಊರುಗೋಲು, ವೀಲ್‌ಚೇರ್ ಸೇರಿದಂತೆ ಒಟ್ಟು 2,680 ವಿವಿಧ ರೀತಿಯ ಕೃತಕ ಅಂಗಗಳನ್ನು ಉಚಿತವಾಗಿ ವಿತರಣೆ ಮಾಡಲಾಗುವುದು. ಕೃತಕ ಅಂಗಗಳನ್ನು ಫಲಾನುಭವಿಗಳ ನಿಖರ ಅಳತೆಗೆ ತಕ್ಕಂತೆ ತಯಾರಿಸಲಾಗುವುದು. ಇದಕ್ಕಾಗಿ ಶಿಬಿರದಲ್ಲಿ 20 ತಂತ್ರಜ್ಞರು ಭಾಗವಹಿಸಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 93412 14915, 98450 52554 ಅನ್ನು ಸಂಪರ್ಕಿಸಬಹುದು. ಈ ಹಿಂದೆ ನಡೆದ ಉಚಿತ ಶಿಬಿರಗಳಲ್ಲಿ ಈವರೆಗೆ 49,767 ಮಂದಿ ಪ್ರಯೋಜನ ಪಡೆದಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



ಮುಡಾ ನೂತನ ಅಧ್ಯಕ್ಷ ಯಶಸ್ವಿ ಎಸ್. ಸೋಮಶೇಖರ್ ಅವರನ್ನು ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ಪ್ರಧಾನ ಕಾರ್ಯದರ್ಶಿ ಕೆ.ಆರ್. ಮಿಲ್ ಶಿವಣ್ಣ, ಗೌರವ ಸದಸ್ಯರಾದ ಜಿ.ಎಸ್.ಅಶೋಕ್‌ಕುಮಾರ್, ಪುಟ್ಟಸ್ವಾಮಿಗೌಡ, ಮಧುಸೂದನ್ ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

ನಾಳೆ ರಾಷ್ಟ್ರೀಯ ಗ್ರಾಹಕ ದಿನಾಚರಣೆ

ಮೈಸೂರು,ಡಿ.27–ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯಾಪಾರ ಇಲಾಖೆಯಿಂದ ರಾಷ್ಟ್ರೀಯ ಗ್ರಾಹಕ ದಿನಾಚರಣೆಯನ್ನು ಡಿ.29ರಂದು ವಿದ್ಯಾವರ್ಧಕ ತಾಂತ್ರಿಕ ಮಹಾವಿದ್ಯಾಲಯದ ಎಂಬಿಎ ವಿಭಾಗದಲ್ಲಿ ಹಮ್ಮಿಕೊಳ್ಳಲಾಗಿದೆ. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಬಿ.ನಾರಾಯಣಪ್ಪ ಉದ್ಘಾಟಿಸಲಿದ್ದಾರೆ. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶ ದೇವರಾಜಭೂತೆ ಮತ್ತು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯರಾದ ಎಂ.ಕೆ.ಲಲಿತ, ಮಾರುತಿ ಹೆಚ್.ವಡ್ಡರ್, ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಕಾರ್ಯದರ್ಶಿ ಪಿ.ವಿಶ್ವನಾಥ ಪಾಲ್ಗೊಳ್ಳಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಿಧನ



ಅಪ್ಪನೆರವಂಡ ರಾಣಿ ಮುತ್ತಮ್ಮ

ಮೈಸೂರು, ಡಿ. 27– ದಿವಂಗತ ಎ.ಎಂ.ಬೆಳ್ಳಿಯಪ್ಪ ಅವರ ಪತ್ನಿ ಅಪ್ಪನೆರವಂಡ ರಾಣಿ ಮುತ್ತಮ್ಮ (ಮುಲ್ಲೇರಾ) ಮಂಗಳವಾರ ಬೆಳಗ್ಗೆ ಮೈಸೂರಿನ ರೂಪಾ ನಗರದಲ್ಲಿರುವ ಅವರ ಮಗಳ ನಿವಾಸದಲ್ಲಿ ನಿಧನರಾದರು. ಮೃತರು ಪುತ್ರಿ ಸಬಿತಾ, ಅಳಿಯ ಕೊದಂಡೇರಾ ಮುಖೇಶ್ ತಿಮ್ಮಯ್ಯ, ಮೊಮ್ಮಕ್ಕಳಾದ ಅದ್ವಿತೀಯಾ ಮತ್ತು ಆಕಾಂಕ್ಷಾ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆಟೋ, ಟ್ಯಾಕ್ಸಿ ಚಾಲಕರಿಗೆ ಶೀಘ್ರದಲ್ಲೇ ಡಿಎಲ್ ವಿತರಣಾ ಅಭಿಯಾನ ಆಯೋಜನೆ

ಅಪರಾಧ ತಡೆ, ರಸ್ತೆ ಸುರಕ್ಷತೆ ಜಾಗೃತಿ ಕಾರ್ಯಕ್ರಮದಲ್ಲಿ ನಗರ ಪೋಲೀಸ್ ಆಯುಕ್ತ ಬಿ.ರಮೇಶ್ ಪ್ರಕಟ





> “ಸಾಲ ಸೋಲ ಮಾಡಿ ವಾಹನ ಖರೀದಿಸುವಾಗ ಅದರ ದಾಖಲಾತಿ ಪರಿಶೀಲಿಸಿಕೊಂಡು, ನಿಮ್ಮ ಹೆಸರಿಗೆ ವರ್ಗಾಯಿಸಿಕೊಳ್ಳುವುದನ್ನು ಮರೆಯಬೇಡಿ. ನೀವು ಮಾಡುವ ವೃತ್ತಿ ಕಾನೂನು ಬದ್ಧವಾಗಿದ್ದರೆ ಯಾರೂ ನಿಮಗೆ ತೊಂದರೆ ಕೊಡಲು ಸಾಧ್ಯವಿಲ್ಲ. ನಿಮ್ಮಿಂದಲೂ ಸಾರ್ವಜನಿಕರು, ಪ್ರಯಾಣಿಕರು ಹಾಗೂ ಪ್ರವಾಸಿಗರಿಗೆ ತೊಂದರೆಯಾಗಬಾರದು.
> **–ಬಿ.ರಮೇಶ್, ಪೊಲೀಸ್ ಆಯುಕ್ತ**

ಮೈಸೂರು, ಡಿ. 27(ಆರ್‌ಕೆ)– ಮೈಸೂರಿನ ಆಟೋ ಮತ್ತು ಟ್ಯಾಕ್ಸಿ ಚಾಲಕರಿಗೆ ಶೀಘ್ರ ಚಾಲನಾ ಪರವಾನಗಿ (ಡಿಎಲ್) ವಿತರಿಸುವ ಅಭಿಯಾನ ಆಯೋಜಿಸಲಾಗುವುದು ಎಂದು ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ಇಂದಿಲ್ಲಿ ಪ್ರಕಟಿಸಿದ್ದಾರೆ.

ಮೈಸೂರು ನಗರ ಪೊಲೀಸ್ ಘಟಕದ ವತಿಯಿಂದ ಮೈಸೂರಿನ ಪುರಭವನದಲ್ಲಿ ಅಪರಾಧ ತಡೆ ಮಾಸಾಚರಣೆ ಅಂಗವಾಗಿ ಏರ್ಪಡಿಸಿದ್ದ ಟ್ಯಾಕ್ಸಿ ಹಾಗೂ ಆಟೋ ಚಾಲಕರಿಗೆ ಅಪರಾಧ ಮತ್ತು ರಸ್ತೆ ಸುರಕ್ಷತೆ ಕುರಿತ ಅರಿವು ಕಾರ್ಯಕ್ರಮ ಉದ್ದೇಶಿಸಿ ಮಾತನಾಡುತ್ತಿದ್ದ ಅವರು, ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಡಿಎಲ್ ಪಡೆಯುವ ಪ್ರಕ್ರಿಯೆ ಕ್ಲಿಷ್ಟಕರ ಎಂದು ಭಾವಿಸಿ ಎಷ್ಟೋ ಮಂದಿ ಚಾಲನಾ ಪರವಾನಗಿಯನ್ನೇ ಪಡೆದಿರುವುದಿಲ್ಲ.

ವಾಹನ ಚಾಲನೆ ಮಾಡುವವರಿಗೆ ಡಿಎಲ್, ವಾಹನದ ಇನ್ಶೂರೆನ್ಸ್, ನೋಂದಣಿ ಪ್ರಮಾಣ ಪತ್ರ (ಆರ್‌ಸಿ) ದಾಖಲಾತಿಗಳು ಅತೀ ಮುಖ್ಯವಾಗಿ ಬೇಕಾಗುತ್ತದೆ. ಆದರೆ, ಕೆಲವರು ಅಗತ್ಯ ದಾಖಲೆ ಕ್ರೋಢೀಕರಿಸುವುದು ಕಷ್ಟ ಎಂದು ಭಾವಿಸಿ ಡಿಎಲ್, ಇನ್ಶೂರೆನ್ಸ್ ಇಲ್ಲದೆಯೇ ವಾಹನ ಚಾಲನೆ ಮಾಡುತ್ತಾರೆ. ಇದರಿಂದ ಅಪಘಾತಗಳು ಸಂಭವಿಸಿದಾಗ ಕಾನೂನಿನ ಸಮಸ್ಯೆ ಎದುರಾಗುತ್ತದೆಯಾದ್ದರಿಂದ ಚಾಲಕರು ಮತ್ತು ವಾಹನಗಳಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಹೊಂದಿರುವುದು ಅತೀ ಮುಖ್ಯವಾಗುತ್ತದೆ ಎಂದರು.

ತಾವು ರಾಮನಗರ ಜಿಲ್ಲಾ ಎಸ್ಪಿಯಾಗಿದ್ದಾಗ ಎಷ್ಟೋ ಮಂದಿ ಆಟೋ, ಕ್ಯಾಬ್ ಡ್ರೈವರ್‌ಗಳು ಡಿಎಲ್ ಅನ್ನೇ ಪಡೆಯದೇ ವಾಹನ ಚಾಲನೆ ಮಾಡುತ್ತಿದ್ದುದು ತಿಳಿಯಿತು. ಅಪಘಾತ ಸಂಭವಿಸಿದಾಗ ತಪ್ಪು ಯಾರದೇ ಇದ್ದರೂ ಡಿಎಲ್ ಇಲ್ಲದಿದ್ದವರ ವಿರುದ್ಧ ಕಾನೂನು ಕ್ರಮವಾಗುತ್ತದೆ ಎಂಬುದು ತಿಳಿಯುತ್ತಿದ್ದಂತೆಯೇ ತಾವು ಡಿಎಲ್ ನೀಡುವ ಅಭಿಯಾನವನ್ನು ಅಲ್ಲಿನ ಆರ್‌ಟಿಓ ಕಚೇರಿ ಸಹಯೋಗದೊಂದಿಗೆ ಆಯೋಜನೆ ಮಾಡಿದ್ದೆವು ಎಂದು ಆಯುಕ್ತರು ತಿಳಿಸಿದರು.

ಅಭಿಯಾನದಿಂದಾಗಿ 4ರಿಂದ ನಾಲ್ಕೂವರೆ ಸಾವಿರ ಮಂದಿ ಚಾಲಕರಿಗೆ ಡಿಎಲ್ ವಿತರಿಸಲು ಸಾಧ್ಯವಾಯಿತು. ಕ್ರಮೇಣ ಉಳಿದವರೂ ಮುಂದೆ ಬಂದು ಡಿಎಲ್ ಪಡೆದುಕೊಂಡರು ಎಂದ ಅವರು, ಅದೇ ಮಾದರಿಯಲ್ಲಿ ಶೀಘ್ರ ಮೈಸೂರಿನ ಟ್ಯಾಕ್ಸಿ ಮತ್ತು ಆಟೋ ಡ್ರೈವರ್‌ಗಳಿಗೆ ಆರ್‌ಟಿಓ ಕಚೇರಿ ಸಹಯೋಗದಲ್ಲಿ ಡಿಎಲ್ ವಿತರಿಸುವ ಅಭಿಯಾನ ಮಾಡಲಾಗುವುದು ಎಂದು ರಮೇಶ್ ತಿಳಿಸಿದರು.

ಮೈಸೂರು ಸಾಂಸ್ಕೃತಿಕ ರಾಜಧಾನಿ. ದೇಶ–ವಿದೇಶಗಳಿಂದ ಇಲ್ಲಿಗೆ ಪ್ರವಾಸಿಗರ ದಂಡೇ ಬರುತ್ತದೆ. ಪ್ರವಾಸಿಗರನ್ನು ಅವರು ಕೇಳಿದ ಸ್ಥಳಗಳಿಗೆ ಸುರಕ್ಷಿತವಾಗಿ ಕರೆದೊಯ್ದು ಬಿಡುವ ಮೂಲಕ ಮೈಸೂರು ನಗರದ ಕೀರ್ತಿಯನ್ನು ವಿಶ್ವದಾದ್ಯಂತ ಪಸರಿಸುವಲ್ಲಿ ಆಟೋ, ಕ್ಯಾಬ್, ಟ್ಯಾಕ್ಸಿ ಡ್ರೈವರ್‌ಗಳ ಪಾತ್ರ ಅತೀ ಮುಖ್ಯವಾಗುತ್ತದೆ. ಹಾಗೆಯೇ ಮಹಿಳೆಯರು, ಮಕ್ಕಳು, ವೃದ್ಧರು, ಅಪರಿಚಿತರು ಬಂದಾಗ ಅವರಿಗೆ ಸೂಕ್ತ ಮಾಹಿತಿ ನೀಡಿ, ಸೌಜನ್ಯದಿಂದ ವರ್ತಿಸಿದರೆ ನಿಮ್ಮ ಬಗ್ಗೆ ಸಾರ್ವಜನಿಕರಿಗೆ ನಂಬಿಕೆ, ವಿಶ್ವಾಸ ಮೂಡುತ್ತದೆ ಎಂದು ಆಯುಕ್ತರು ಕಿವಿಮಾತು ಹೇಳಿದರು.

ಆಟೋ, ಟ್ಯಾಕ್ಸಿ ಚಾಲಕರೂ ಪ್ರವಾಸಿ ಮಾರ್ಗದರ್ಶಿಗಳಂತೆ (ಟೂರಿಸ್ಟ್ ಗೈಡ್) ಸೇವೆ ಸಲ್ಲಿಸಬೇಕು. ನೀವು ಮಾಡುವ ವೃತ್ತಿ ಮೇಲೆ ನಿಮಗೆ ಗೌರವವಿರಲಿ. ಪ್ರಯಾಣಿಕರಿಗೆ ನಿಮ್ಮ ಮೇಲೆ ವಿಶ್ವಾಸ ಮೂಡಿದರೆ ನಿಮ್ಮ ವೃತ್ತಿ ಘನತೆಯಂತೆ ಆದಾಯವೂ ಹೆಚ್ಚುತ್ತದೆ. ನಿಷ್ಠೆ, ಪ್ರಾಮಾಣಿಕತೆ ಮೆರೆದು, ಸೌಜನ್ಯದಿಂದ ವರ್ತಿಸಿದರೆ ನೀವು ಮಾಡುವ ಕೆಲಸದ ಬಗ್ಗೆ ಹೆಮ್ಮೆ ಎನ್ನಿಸುತ್ತದೆ ಎಂದು ಆಯುಕ್ತರು ನುಡಿದರು.

ಅಪರಾಧ ತಡೆಗಟ್ಟುವುದು, ಸಂಶಯಾಸ್ಪದ ವ್ಯಕ್ತಿಗಳ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡುವುದು, ಸಂಚಾರ ನಿಯಮ ಪಾಲನೆ ಕುರಿತಂತೆ ಆಟೋ ಮತ್ತು ಟ್ಯಾಕ್ಸಿ ಚಾಲಕರಿಗೆ ಇದೇ ವೇಳೆ ತರಬೇತಿ ನೀಡಲಾಯಿತು.

ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಂ.ಎಸ್.ಗೀತಾ ಪ್ರಸನ್ನ, ಆರ್‌ಟಿಓ (ಪಶ್ಚಿಮ) ಭೀಮನಗೌಡ ಪಾಟೀಲ್, ಎಸಿಪಿಗಳಾದ ಎಂ.ಎನ್. ಶಶಿಧರ್, ಎಸ್.ಇ. ಗಂಗಾಧರಸ್ವಾಮಿ, ಕೆ.ಸಿ. ಅಶ್ವಥ ನಾರಾಯಣ, ಸಂಚಾರ ಠಾಣೆ ಇನ್ಸ್‌ಪೆಕ್ಟರ್‌ಗಳಾದ ಮುನಿಯಪ್ಪ, ಮಂಜುನಾಥ್, ಪ್ರಸನ್ನ, ಸುರೇಶ್ ಕುಮಾರ್, ಯೋಗೇಶ್ ಹಾಗೂ ಸಬ್ ಇನ್ಸ್‌ಪೆಕ್ಟರ್‌ಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಮೈಷುಗರ್ಸ್‌ನಲ್ಲಿ ಎಥೆನಾಲ್ ಘಟಕ ಪ್ರಾರಂಭಕ್ಕೆ ಪ್ರಸ್ತಾವನೆ ಸಲ್ಲಿಸಿದರೆ ಪರಿಶೀಲನೆ

ದಿನೇಶ್ ಗೂಳಿಗೌಡಗೆ ಸಕ್ಕರೆ ಸಚಿವ ಶಂಕರ್ ಪಾಟೀಲ್ ಮುನೇನಕೊಪ್ಪ ಉತ್ತರ



ದಿನೇಶ್ ಗೂಳಿಗೌಡ



ಶಂಕರ್ ಪಾಟೀಲ್

ಬೆಳಗಾವಿ,ಡಿ.27–ಮಂಡ್ಯದ ದಿ.ಮೈಸೂರು ಷುಗರ್ಸ್ ಪ್ರೈ.ಲಿ. ಕಂಪನಿಯಲ್ಲಿ ಎಥೆನಾಲ್ ಘಟಕ ಸ್ಥಾಪನೆ ಸಂಬಂಧ ಆಡಳಿತ ಮಂಡಳಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದಲ್ಲಿ ಪರಿಶೀಲನೆ ನಡೆಸಲಾಗುವುದು ಎಂದು ಕೈಮಗ್ಗ, ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಭರವಸೆ ನೀಡಿದ್ದಾರೆ. ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್ ಸದಸ್ಯ, ಶಾಸಕ ದಿನೇಶ್ ಗೂಳಿಗೌಡ ಅವರ ಪ್ರಶ್ನೆಗೆ ಸಚಿವರು ಈ ಉತ್ತರವನ್ನು ನೀಡಿದ್ದಾರೆ.

ಮಂಡ್ಯದ ಮೈಷುಗರ್ ಸಕ್ಕರೆ ಕಾರ್ಖಾನೆಯಲ್ಲಿ ಎಥೆನಾಲ್ ಘಟಕವನ್ನು ಪ್ರಾರಂಭ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ಎಂಬ ಪ್ರಶ್ನೆಗೆ ಉತ್ತರ ನೀಡಿರುವ ಸಚಿವರು, ಸದ್ಯಕ್ಕೆ ಎಥೆನಾಲ್ ಘಟಕ ಪ್ರಾರಂಭಿಸುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ ಎಂದು ತಿಳಿಸಿದ್ದಾರೆ.

2019–20ನೇ ಸಾಲಿನಲ್ಲಿ ಸ್ಥಗಿತಗೊಂಡಿದ್ದ ಕಬ್ಬು ಅರೆಯುವ ಹಂಗಾಮನ್ನು 2022–23ರ ಆಯವ್ಯಯದಲ್ಲಿ ಘೋಷಿಸಿದಂತೆ ಸೆ.20ರಿಂದ ಪ್ರಾರಂಭಿಸಲಾಗಿದೆ ಎಂದು ಸಚಿವರು ವಿವರಣೆ ನೀಡಿದ್ದಾರೆ. ಮೈಸೂರು ಷುಗರ್ಸ್ ಕಂಪನಿಗೆ 32.58 ಕೋಟಿ ರೂಪಾಯಿ ಅನುದಾನ, 15 ಕೋಟಿ ರೂ. ಸಾಲವನ್ನು ಬಿಡುಗಡೆ ಮಾಡಲಾಗಿದೆ ಎಂದು ಸಚಿವ ಮುನೇನಕೊಪ್ಪ ತಿಳಿಸಿದ್ದಾರೆ.

ಉಪಕರಣಗಳನ್ನು ಮತ್ತು ಅಗತ್ಯ ಕಾಮಗಾರಿಗಳನ್ನು ಕೈಗೊಳ್ಳಲು ಇನ್ನು 23.25 ಕೋಟಿ ರೂ. ಬಿಡುಗಡೆ ಮಾಡುವ ಪ್ರಸ್ತಾಪ ಆರ್ಥಿಕ ಇಲಾಖೆ ಮುಂದಿದೆ ಎಂದು ಸಹ ಸಚಿವರು ಶಾಸಕ ದಿನೇಶ್ ಗೂಳಿಗೌಡ ಅವರಿಗೆ ತಿಳಿಸಿದ್ದಾರೆ. ಇದಲ್ಲದೆ, ದುಡಿಯುವ ಬಂಡವಾಳಕ್ಕೆ ಸಂಬಂಧಪಟ್ಟಂತೆ 50 ಕೋಟಿ ರೂ.ಗೆ ಸರ್ಕಾರ ಗ್ಯಾರಂಟಿ ನೀಡುವ ಬಗ್ಗೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಮೈಸೂರು ಷುಗರ್ಸ್‌ಗೆ ಈ ವರ್ಷದ ಆದಾಯಲ್ಲಿ ಯಂತ್ರೋಪಕರಣಗಳ ದುರಸ್ತಿಗಾಗಿ 50 ಕೋಟಿ ರೂ. ಅನುದಾನ ಘೋಷಿಸಲಾಗಿತ್ತು. ಅದರಲ್ಲಿ 32.58 ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗಿದೆ. 17.42 ಕೋಟಿ ರೂ. ರೂ. ಅನುದಾನ ಬಿಡುಗಡೆಗೆ ಬಾಕಿ ಇದೆ. ಅದರ ಬಿಡುಗಡೆಗೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಕಳಿಸಲಾಗಿದೆ ಎಂದು ಸಚಿವರು ಉತ್ತರ ನೀಡಿದ್ದಾರೆ.

ಗ್ರಾಮಸ್ಥರಿಗೆ ಕಿರುಕುಳ ನೀಡುತ್ತಿದ್ದ ಚಿರತೆ ಸೆರೆ



ಮೈಸೂರು,ಡಿ.27(ಎಂಟಿವೈ)–ತಾಲೂಕಿನ ಕೀಳನಪುರ ಸುತ್ತಮುತ್ತಲಿನ ಗ್ರಾಮಗಳಲ್ಲಿ ಜನರಿಗೆ ಉಪಟಳ ನೀಡುತ್ತಿದ್ದ ಚಿರತೆ ಮಂಗಳವಾರ ಮುಂಜಾನೆ ಸೆರೆ ಸಿಕ್ಕಿದೆ. ವರುಣಾ ಹೋಬಳಿಯ ಕೀಳನಪುರದಲ್ಲಿ ಕಳೆದ ಕೆಲವು ದಿನಗಳಿಂದ ಚಿರತೆ ಹಾವಳಿ ಹೆಚ್ಚಾಗಿರುವ ಬಗ್ಗೆ ದೂರು ಕೇಳಿ ಬಂದಿತ್ತು. ಈ ಹಿನ್ನೆಲೆಯಲ್ಲಿ ಗ್ರಾಮದ ಪರಶಿವಪ್ಪ ಎಂಬುವರ ತೋಟದಲ್ಲಿ ಬೋನ್ ಇಟ್ಟು ಚಿರತೆ ಸೆರೆಗೆ ಕ್ರಮ ಕೈಗೊಳ್ಳಲಾಗಿತ್ತು. ಆದರೆ, ಆಹಾರ ಅರಸಿ ಬಂದ ಚಿರತೆ ಬೋನ್‌ನಲ್ಲಿಡಲಾಗಿದ್ದ ನಾಯಿ ಮೇಲೆರಗಲು ಹೋಗಿ ಸೆರೆ ಸಿಕ್ಕಿದೆ. ಇದು ಗಂಡು ಚಿರತೆ, 7–8 ವರ್ಷದ್ದಾಗಿದ್ದು, ಆರೋಗ್ಯದಿಂದಿದೆ ಎಂದು ಪಶು ವೈದ್ಯರು ಸ್ಪಷ್ಟಪಡಿಸಿದ್ದಾರೆ. ನಂತರ ಚಿರತೆಯನ್ನು ಮಲೆ ಮಹದೇಶ್ವರ ವನ್ಯಧಾಮಕ್ಕೆ ಕೊಂಡೊಯ್ದು ಬಿಡುಗಡೆ ಮಾಡಲಾಗಿದೆ. ಈ ವೇಳೆ ಆರ್‌ಎಫ್‌ಓ ಕೆ.ಸುರೇಂದ್ರ ಇನ್ನಿತರರು ಪಾಲ್ಗೊಂಡಿದ್ದರು. ಚಿರತೆ ಬೋನಿಗೆ ಬಿದ್ದ ವಿಷಯ ತಿಳಿದು ಸುತ್ತಮುತ್ತಲಿನ ಗ್ರಾಮಸ್ಥರು ಕುತೂಹಲದಿಂದ ಚಿರತೆ ವೀಕ್ಷಿಸಿದರು. ಮುನ್ನೆಚ್ಚರಿಕೆ ಕ್ರಮವಾಗಿ ವರುಣಾ ಠಾಣೆ ಪೊಲೀಸರು ಉಪಸ್ಥಿತರಿದ್ದರು.

ಮನುಷ್ಯನ ‘ಆಧುನಿಕ’ ಬದುಕು ಮೌಲ್ಯಗಳ ಪಲ್ಲಟಗೊಳಿಸಿದೆ

ಕನ್ನಡ ಪ್ರಾಧ್ಯಾಪಕ ಡಾ. ಹೊಂಬಯ್ಯ ವಿಷಾದ



ಮೈಸೂರು,ಡಿ.27(ಎಂಟಿವೈ)–ಸಮಾಜದಲ್ಲಿ ಅಪಮೌಲ್ಯಕ್ಕೆ ಒತ್ತು ಕೊಡುತ್ತಿದ್ದೇವೆ. ಆಧುನಿಕ ಬದುಕು ಮೌಲ್ಯಗಳನ್ನು ಪಲ್ಲಟಗೊಳಿಸಿದೆ ಎಂದು ಬೆಳಗಾವಿ ಶ್ರೀಮತಿ ಕುಸುಮಾವತಿ ಮಿರಜಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಕನ್ನಡ ಪ್ರಾಧ್ಯಾಪಕ ಡಾ.ಹೊಂಬಯ್ಯ ವಿಷಾದಿಸಿದರು.

ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಮಂಗಳವಾರ ಏರ್ಪಡಿಸಿದ್ದ ಕನ್ನಡ ಸಾಹಿತ್ಯ: ಜೀವನ ಮೌಲ್ಯಗಳು ವಿಚಾರ ಕುರಿತು ಅವರು ಮಾತನಾಡಿದರು. ಕವಿ ಮ್ಯಾಥ್ಯೂ ಆರ್ನಲ್ಡ್ ಮೃಗತ್ವ ಕಳೆದು ಮಾನವತ್ವ ತುಂಬುವುದೇ ಮೌಲ್ಯ ಎಂದಿದ್ದಾರೆ. ಪಂಪ ಹೇಳಿದಂತೆ ಮನುಷ್ಯ ಜಾತಿ ತಾನೊಂದೇ ವಲಂ, ದೇವನೂರ ಮಹಾದೇವರ ‘ಸಂಬಂಜ(ಸಂಬಂಧ) ಅನ್ನೋದು ದೊಡ್ಡದು ಕನಾ’ ಸಾಲುಗಳು ಮೌಲ್ಯಗಳ ತಳಪಾಯ. ಕನ್ನಡ ಸಾಹಿತ್ಯ ಚರಿತ್ರೆ ಮೌಲ್ಯದಿಂದಲೇ ತುಂಬಿದೆ. ಜನಪದ ಸಾಹಿತ್ಯದ ಗರತಿಯರ ಹಾಡುಗಳಲ್ಲಿ ಮೌಲ್ಯ ಇದೆ. ಜನಪದರ ನಡೆ ನುಡಿಯಲ್ಲಿ ಸಾಮಾಜಿಕ, ಕುಟುಂಬದ ಮೌಲ್ಯ ಇದೆ. ಮೌಲ್ಯಗಳೇ ಜನಪದರ ಬಾಳಿನ ದೀಪ. ಇವರದು ಅಪ್ಪಿಕೊಳ್ಳುವ ಸಂಸ್ಕೃತಿ, ಆಪ್ತತೆಯ ಸಂಸ್ಕೃತಿ ಎಂದರು.

ಕಲ್ಲು ಕೊಟ್ಟವಗೆ ಎಲ್ಲ ಭಾಗ್ಯವೂ ಬರಲಿ, ಪಲ್ಲಕ್ಕಿ ಮೇಲೆ ಮಗ ಬರಲಿ, ಮಲ್ಲಿಗೆ ಮುಡಿವ ಸೊಸೆ ಬರಲಿ... ಎಂದು ಜನಪದರು ಹಾಡಿದ್ದಾರೆ. ಇವತ್ತಿನ ಸಂದರ್ಭ ಹೇಗಿದೆ, ಮಗ ಕಂಪ್ಯೂಟರ್ ಕಲಿಯಲಿ, ಸೈಟ್ ತರುವ ಸೊಸೆ ಬರಲಿ ಎಂಬ ಸ್ಥಿತಿಗೆ ತಲುಪಿದ್ದೇವೆ. ಶರಣರು, ವಚನಕಾರರು ನಡೆ–ನುಡಿಯೂ ಮೌಲ್ಯ ಮೀರಲಿಲ್ಲ. ಕವಿರಾಜ ಮಾರ್ಗ ವಿವೇಕವೇ ಕನ್ನಡದ ಮಾರ್ಗವಾಯಿತು. ಮೌಲ್ಯದ ಪರಿಕಲ್ಪನೆಗೆ ಜನ್ನನ ಯಶೋಧರ ಚರಿತೆ ಕಾವ್ಯವೇ ಸಾಕು ಅನ್ನಿಸುತ್ತದೆ. ರಾಘವಾಂಕ ಹರಿಶ್ಚಂದ್ರ ಕಾವ್ಯದ ಮೂಲಕ ಕನ್ನಡದ ಸರಸ್ವತಿ ದೇಗುಲದ ಮೇಲೆ ಸತ್ಯದ ಗುಡಿ ಕಟ್ಟಿದ. ಸತ್ಯ ವಾಕ್ಯಕ್ಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು ಎಂಬ ಗೋವಿನ ಹಾಡಿಗಿಂತ ಮೌಲ್ಯವಿರುವುದೇ ಎಂದು ವಿವರಿಸಿದರು. ಕಾರ್ಯಕ್ರಮದಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ವಿಜಯಕುಮಾರಿ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಹೆಚ್.ಆರ್.ತಿಮ್ಮೇಗೌಡ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ರೋಟರಿ ಬೃಂದಾವನ ಸ್ಕೂಲ್:** ಶಾಲಾ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು: ಆಡಳಿತ ತರಬೇತಿ ಸಂಸ್ಥೆ ಸಹಾಯಕ ನಿರ್ದೇಶಕ ವರ್ನಿತ್ ನೇಗಿ, ಅತಿಥಿಗಳು: ಆದಾಯ ತೆರಿಗೆ ನಿರ್ದೇಶಕ ಎಂ.ವಿಷ್ಣು, ವಿಶೇಷ ಆಹ್ವಾನಿತರು: ರೋಟರಿ ಫೌಂಡೇಷನ್ ಅಧ್ಯಕ್ಷ ಹೆಚ್.ಆರ್.ಕೇಶವ್, ಅಧ್ಯಕ್ಷತೆ: ರೋಟರಿ ಮೈಸೂರು ಬೃಂದಾವನ ಅಧ್ಯಕ್ಷೆ ಅರುಣಾದೇವಿ, ಸ್ಥಳ: ಕರ್ನಾಟಕ ಕಲಾಮಂದಿರ, ಬೆಳಗ್ಗೆ 9.30ಕ್ಕೆ.

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು:** ಕೌದಿ ಕಲೆ ನರಸಿಮುಲು ಪಿ.ಬ್ಯಾಗೇರಿ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 10 ರಿಂದ.

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ:** ಧನುರ್ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹಾಭಿಷೇಕ, ಅಲಂಕಾರಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನಂ, ರಾಘವೇಂದ್ರನಗರ, ಬೆಳಗ್ಗೆ.

■ **ವಿವೇಕಾನಂದ ರಾಕ್ ಮೆಮೋರಿಯಲ್, ವಿವೇಕಾನಂದ ಕೇಂದ್ರ :** ಸಮರ್ಥ ಭಾರತ ಪರ್ವ ಉತ್ಸವ ಪ್ರಯುಕ್ತ ರಂಗೋಲಿ ಮತ್ತು ಚಿತ್ರಕಲೆ, ಸ್ಥಳ: ವಿವೇಕಾನಂದ ಕೇಂದ್ರ, ಪಂಪಾಪತಿ ರಸ್ತೆ, ಸಂಜೆ 4ಕ್ಕೆ.

■ **ಮೈಸೂರು ಅರಮನೆ ಮಂಡಳಿ:** ಫಲಪುಷ್ಪ ಪ್ರದರ್ಶನ, ಸ್ಥಳ: ಮೈಸೂರು ಅರಮನೆ ಆವರಣ, ಬೆಳಗ್ಗೆ 10 ರಿಂದ ರಾತ್ರಿ 9 ರವರೆಗೆ.

■ **ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಸಮಿತಿ :** ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ 137ನೇ ವಾರ್ಷಿಕೋತ್ಸವ, ಉಪಸ್ಥಿತರು : ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್, ಸ್ಥಳ: ಕಾಂಗ್ರೆಸ್ ಕಚೇರಿ, ಇಂದಿರಾ ಗಾಂಧಿ ಭವನ, ಬೆಳಗ್ಗೆ 9ಕ್ಕೆ.

■ **ಸುಪ್ರಭ ನಾಗೇಶ್‌ರಾವ್ ಸೇವಾ ಪ್ರತಿಷ್ಠಾನ:** ಏಕ ವ್ಯಕ್ತಿಯಿಂದ ವಿಶ್ವಶಾಂತಿಗಾಗಿ ವಿಷ್ಣು ಸಹಸ್ರನಾಮ ಪಾರಾಯಣ, ಸ್ಥಳ : 622, 2ನೇ ಮೇನ್, ಶಾರದಾದೇವಿನಗರ, ಬೆಳಗ್ಗೆ

■ **ವನಿತಾ ಸದನ:** ಶಾಲಾ ವಾರ್ಷಿಕೋತ್ಸವ, ಅಧ್ಯಕ್ಷತೆ: ಶ್ರೀಮತಿ ಸುಶೀಲಾ ಬಾಯಿ ಶ್ರೀ ನಾಗೇಶರಾವ್ ಎಜುಕೇಷನಲ್ ಅಂಡ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಬಿ.ಆರ್.ರವಿ, ಮುಖ್ಯ ಅತಿಥಿಗಳು: ಕಿರಣ್ ಪ್ರಸಾದ್, ಶುಭಾ ಪ್ರಸಾದ್, ಸ್ಥಳ: ವನಿತಾ ಸದನದ ಆವರಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು :** ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆ ಉದ್ಘಾಟನೆ, ಪ್ರತಿಭಾ ಪುರಸ್ಕಾರ, ದಿನದರ್ಶಿಕೆ ಬಿಡುಗಡೆ, ಸಾನ್ನಿಧ್ಯ: ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ: ಮುಕ್ತ ವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ದಿನದರ್ಶಿಕೆ ಬಿಡುಗಡೆ: ಮೇಯರ್ ಶಿವಕುಮಾರ್, ಪ್ರತಿಭಾ ಪುರಸ್ಕಾರ: ಸಮಾಜ ಸೇವಕಿ ಮಂಜುಳಾ ಪ್ರಭಾಕರ್, ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಸಭಾಭವನ, ಬೆಳಗ್ಗೆ 10.30ಕ್ಕೆ.

■ **ಸಮಾನ ಮನಸ್ಕರ ಬಳಗ :** ರಾಷ್ಟ್ರಕವಿ ಕುವೆಂಪು ಅವರ 118ನೇ ಜನ್ಮ ದಿನಾಚರಣೆ, ಉಪಸ್ಥಿತರು: ಕೆ.ಉಮಾಶಂಕರ್, ಎಲ್.ಚೌಡಪ್ಪ, ಸುರೇಶ್ ಬಾಬು, ಚಿಕ್ಕವೆಂಕಟ, ಸಿ.ಮರಿಸ್ವಾಮಿ, ಎನ್.ಬೆಟ್ಟೇಗೌಡ, ಸ್ಥಳ: ಕೆಂಪೀರೇಗೌಡರ ಉದ್ಯಾನವನ, ಕೆ.ಆರ್.ಎಸ್. ರಸ್ತೆ, ಬೆಳಗ್ಗೆ 11ಕ್ಕೆ.

■ **ಮಹಾರತ್ನ ಟ್ರಸ್ಟ್:** ಕನ್ನಡೋತ್ಸವ, ಸುಗಮ ಸಂಗೀತ ಕಾರ್ಯಕ್ರಮ, ಕನ್ನಡ ಸಾಹಿತ್ಯರತ್ನ ಪುರಸ್ಕಾರ, ಬಹುಮಾನ ವಿತರಣೆ, ಉದ್ಘಾಟನೆ: ಮೇಯರ್ ಶಿವಕುಮಾರ್, ಅಧ್ಯಕ್ಷತೆ: ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷ ಪಾರ್ಥಸಾರಥಿ, ಕನ್ನಡ ಸಾಹಿತ್ಯ ರತ್ನ ಪುರಸ್ಕೃತರು: ಸಾಹಿತಿ ವಿದ್ವಾನ್ ಸುರೇಶ್, ಪ್ರೊ. ಮೈಸೂರು ಕೃಷ್ಣಮೂರ್ತಿ, ಮುಖ್ಯ ಅತಿಥಿಗಳು : ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಚಂದ್ರಶೇಖರ್, ಮಹೇಶ್ ಕಾಮತ್, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 5ಕ್ಕೆ.

■ **ಶ್ರೀ ಆಂಡಾಳ್ ಮಂದಿರಂ:** ಧನುರ್ಮಾಸ ಪೂಜೆ, ವಿದ್ವಾನ್ ಎಂ.ಕೆ. ಶೆಲ್ವ ನಾರಾಯಣ ಅವರಿಂದ ತಿರುಪ್ಪಾವೈ ಪ್ರವಚನ. ಸ್ಥಳ: ಆಂಡಾಳ್ ಮಂದಿರಂ ಆವರಣ. ವಿವಿ ಮೊಹಲ್ಲಾ, ಸಂಜೆ 6 ರಿಂದ 7.30ರವರೆಗೆ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ:** ವಿದುಷಿ ಬಿ.ಕೆ.ಸೀತಾಲಕ್ಷ್ಮಿ ಅವರಿಂದ ತಿರುಪ್ಪಾವೈ ಪ್ರವಚನ. ಸ್ಥಳ: ದೇವಸ್ಥಾನ ಆವರಣ, ಸಂಜೆ 6ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್. ವನಂ :** ಡಾ. ಎನ್.ಕೆ. ರಾಮಶೇಷನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಡಾ. ಕಮಲ ರಾಮನ್ ಅವರ ಮಂದಿರ, ಅಂಬೇಡ್ಕರ್ ರಸ್ತೆ, ಸಂಜೆ 6.15 ರಿಂದ.

■ **ಶ್ರೀ ಮಹಾಜನಸಭಾ:** ಪ್ರವಚನ ಪ್ರವೀಣ ವಿದ್ವಾನ್ ಮುಡುಂಬೈ ರಾಮಾನುಜ ಶರ್ಮ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಶ್ರೀ ಕೃಷ್ಣಮೂರ್ತಿಪುರಂ ಶ್ರೀರಾಮಮಂದಿರ, ಕಾಂತರಾಜ ಅರಸು ರಸ್ತೆ, ಸಂಜೆ 6.15 ರಿಂದ.

■ **ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್ :** ಯುವ ಸಂಗೀತೋತ್ಸವ, ಸಂಜೆ 6ಕ್ಕೆ ವಿದುಷಿ ಮೇಧಾ ವಿನೋದ್ ಆನೂರ್ ಅವರಿಂದ ಗಾಯನ, ವಿದ್ವಾನ್ ಜನಾರ್ಧನ್ ಶ್ರೀನಾಥ್ –ಪಿಟೀಲು, ವಿದ್ವಾನ್ ನಾಗೇಂದ್ರ ಪ್ರಸಾದ್–ಮೃದಂಗ, ಸಂಜೆ 7.30ಕ್ಕೆ ವಿದುಷಿ ಇಳಾ ಸಂಗೀತ ದಿಲೀಪ್ ಅವರಿಂದ ಗಾಯನ, ವಿದ್ವಾನ್ ಜನಾರ್ಧನ್ ಶ್ರೀನಾಥ್–ಪಿಟೀಲು, ವಿದ್ವಾನ್ ನಾಗೇಂದ್ರ ಪ್ರಸಾದ್–ಮೃದಂಗ, ಸ್ಥಳ: ಸಂಗೀತ ಕಲಾನಿಧಿ ಮೈಸೂರು ಕೆ. ವಾಸುದೇವಾಚಾರ್ಯ ಕಲಾಭವನ, ಜೆಎಲ್‌ಬಿ ರಸ್ತೆ.

■ **ಜೆಎಸ್‌ಎಸ್ ಪಬ್ಲಿಕ್ ಸ್ಕೂಲ್ :** ವಾರ್ಷಿಕೋತ್ಸವ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್, ಮುಖ್ಯ ಅತಿಥಿಗಳು : ಹೆಚ್ಚುವರಿ ಜಿಲ್ಲಾಧಿಕಾರಿ ಡಾ. ಬಿ.ಎಸ್. ಮಂಜುನಾಥಸ್ವಾಮಿ, ಸರ್ಕಾರಿ ಶಿಕ್ಷಕರ ಎಜುಕೇಷನ್ ಕಾಲೇಜು ಪ್ರಿನ್ಸಿಪಾಲ್ ಆರ್. ರಘುನಂದನ್, ಸ್ಥಳ: ಶಾಲಾ ಆವರಣ, ಸಿದ್ದಾರ್ಥನಗರ, ಸಂಜೆ 5.30ಕ್ಕೆ.

■ **ಕಲಾ ಸಂದೇಶ ಪ್ರತಿಷ್ಠಾನ, ಬ್ರಹ್ಮವಿದ್ಯಾ, ವೀಣಾ ವಿಶ್ವೇಶ್ವರನ್ ಅಂತಾರಾಷ್ಟ್ರೀಯ ಪ್ರತಿಷ್ಠಾನ:** ಅಭಿನಂದನೆ–ಅಭಿವಂದನೆ ಕಾರ್ಯಕ್ರಮ, ಅಧ್ಯಕ್ಷತೆ: ವೀಣಾ ವಿದ್ವಾಂಸ ಆರ್.ವಿಶ್ವೇಶ್ವರನ್, ವಿಶೇಷ ಆಹ್ವಾನಿತರು: ಸಂಗೀತ ವಿದ್ವಾಂಸರಾದ ವಿದುಷಿ ಡಾ. ನಾಗಮಣಿ ಶ್ರೀನಾಥ್, ನಂತರ ಡಾ.ವಸುಂಧರಾ ದೊರೆಸ್ವಾಮಿ ಅವರಿಂದ ಭರತನಾಟ್ಯ ಕಾರ್ಯಕ್ರಮ, ಸಂದೇಶ್ ಭಾರ್ಗವ್–ನಟುವಾಂಗ, ವಿದ್ವಾನ್ ನಂದಕುಮಾರ್ ಉನ್ನಿಕೃಷ್ಣನ್–ಗಾಯನ, ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ರಾಕೇಶ್– ಕೊಳಲು, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 6 ರಿಂದ.

■ **ದೇಶಿರಂಗ ಸಾಂಸ್ಕೃತಿಕ ಸಂಸ್ಥೆ :** ರಂಗ ಮತ್ತು ನೃತ್ಯೋತ್ಸವ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಮುಖ್ಯ ಅತಿಥಿಗಳು : ಚಿಂತಕರಾದ ಬಿ.ಎಸ್. ದಿನಮಣಿ, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಸಂಜೆ 6ಕ್ಕೆ.

ಕಂಚಮಳ್ಳಿಯಲ್ಲಿಂದು, ಹೆಚ್.ಡಿ. ಕೋಟೆ ತಾ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಪದವಿಪೂರ್ವ ಕಾಲೇಜು:** ಎನ್‌ಎಸ್‌ಎಸ್ ವಾರ್ಷಿಕ ಶಿಬಿರ, ಬೆಳಗ್ಗೆ 6.30ಕ್ಕೆ ಗೌಡಿಕೆ ಸಂಗಮಸ್ವಾಮಿ ಅವರಿಂದ ಧ್ವಜಾರೋಹಣ, ಸಂಜೆ 4.30ಕ್ಕೆ ಕಾರ್ಯಕ್ರಮ, ಅಧ್ಯಕ್ಷತೆ: ಶಿಕ್ಷಣ ಸಂಯೋಜಕ ಕೃಷ್ಣಮೂರ್ತಿ, ಚಿನ್ನಸ್ವಾಮಿ ವಡ್ಡಗೆರೆ ಅವರಿಂದ ಉಪನ್ಯಾಸ.

ಸುತ್ತೂರು ಕ್ಷೇತ್ರ, ನಂಜನಗೂಡು ತಾ.

■ **ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜೆಎಸ್‌ಎಸ್ ವಿಶೇಷ ಚೇತನರ ಪಾಲಿಟೆಕ್ನಿಕ್:** ಎನ್‌ಎಸ್‌ಎಸ್ ವಾರ್ಷಿಕ ಶಿಬಿರ, ಅಮ್ಮ ರಾಮಚಂದ್ರ ಅವರಿಂದ ಉಪನ್ಯಾಸ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಮುಖ್ಯ ಶಿಕ್ಷಕ ಬಿ.ನಾಗರಾಜು, ಅಧ್ಯಕ್ಷತೆ: ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಮುಖ್ಯಸ್ಥ ಕೆ.ಮಹದೇವಸ್ವಾಮಿ, ಸಂಜೆ 4ಕ್ಕೆ.



ಇಂದಿನ ಪಂಚಾಂಗ

28.12.2022 ಬುಧವಾರ, ಮಳೆ ನಕ್ಷತ್ರ: ಮೂಲ, 16.12.2022ರಿಂದ 29.12.2022 ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಶತಭಿಷ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಜೆಎಸ್‌ಎಸ್ ಯೋಗದ ಮಾತು, ಪ್ರಸ್ತುತಿ– ಯೋಗಶಿಕ್ಷಕ ಡಿ. ಶ್ರೀಹರಿ, 6.40 ಅರಿವಿನ ಶಿಖರ, ಗಾಯನ– ಸದಾಶಿವ ಪಾಟೀಲ್, ಪಿ.ಎಸ್.ರಂಜನಿ, ವ್ಯಾಖ್ಯಾನ– ಡಾ.ಬಿ.ವಿ.ವಸಂತ ಕುಮಾರ್, 8.30 Immunisationws -ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖಾ ಪ್ರಾಯೋಜಿತ ಕಾರ್ಯಕ್ರಮ, 10.00 ಗೋಕುಲೋತ್ಸವ್ ಮಹಾರಾಜ್–ಗಾಯನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಕನ್ನಡಿಯಲ್ಲಿ ಕಂಡಂತೆ ಮಾಲಿಕೆಯಲ್ಲಿ ಪ್ರಹಸನ “ಒಲಿದರೆ ನಾರಿ, ಮುನಿದರೆ”, ರಚನೆ– ಯಮುನಾ ಮೂರ್ತಿ, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 1.20 ಭಾವಗೀತೆ, 3.00 ಲಯ ಸಂಭ್ರಮ, ಪ್ರಸ್ತುತಿ– ಹೆಚ್.ಎಲ್.ಶಿವಶಂಕರ ಸ್ವಾಮಿ, 4.00 ಮಹಿಳಾ ರಂಗ –ಸ್ತ್ರೀ ಚೇತನ–ಭಾಗವಹಿಸುವವರು ಟಿ.ಸಿ.ಪೂರ್ಣಿಮಾ, 5.30 ಸಿರಿ ತೋಟಗಾರಿಕೆ–ತೋಟಗಾರಿಕೆ ಇಲಾಖೆ ಪ್ರಾಯೋಜಿತ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ–ಸಮಗ್ರ ಕೃಷಿಯಲ್ಲಿನ ಅನುಭವ ಕುರಿತು ಪ್ರಭುಸ್ವಾಮಿ ಅವರೊಡನೆ ಸಂದರ್ಶನ ಸಂದರ್ಶಕರು–ಹೇಮಕುಮಾರ್, 9.30 ಕುಮಾರ್ ಗಂಧರ್ವ–ಗಾಯನ, 10.00 ಜನಪದಗೀತೆ–ಶಿವಬುದ್ಧಿ ಮತ್ತು ತಂಡ, 10.30 ಸವಿನೆನಪು

ವಿಧಾನಸಭೆಯಲ್ಲಿ 8001.12 ಕೋಟಿ ಪೂರಕ ಅಂದಾಜುಗಳ ಮಂಡನೆ

ವಿಧಾನಸಭಾ ಚುನಾವಣಾ ವೆಚ್ಚ, ಸಿಎಂ, ರಾಜ್ಯಪಾಲರೂ ಸೇರಿ ಗಣ್ಯರ ಹೆಲಿಕಾಪ್ಟರ್ ವೆಚ್ಚ, ಗಂಟು ರೋಗದಿಂದ ಸಾವಿಗೀಡಾದ ರಾಸುಗಳ ಮಾಲೀಕರಿಗೆ ಪರಿಹಾರ ಇನ್ನಿತರೆ ಪ್ರಸ್ತಾಪ

ಬೆಂಗಳೂರು, ಡಿ.27(ಕೆಎಂಶಿ)-ಎರಡನೇ ಕಂತಿನ ಪೂರಕ 8001.12 ಕೋಟಿ ರೂ. ಮೊತ್ತದ ಅಂದಾಜನ್ನು ವಿಧಾನಸಭೆಯಲ್ಲಿ ಇಂದು ಮುಖ್ಯಮಂತ್ರಿಗಳ ಪರವಾಗಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಮಂಡನೆ ಮಾಡಿದರು.



ವಿಧಾನಸಭಾ ಚುನಾವಣೆಯ ವೆಚ್ಚ ಭರಿಸಲು 300 ಕೋಟಿ ರೂ., ಮುಖ್ಯಮಂತ್ರಿಗಳು ಹಾಗೂ ರಾಜ್ಯಪಾಲರು ಸೇರಿದಂತೆ ಗಣ್ಯರ ಹೆಲಿಕಾಪ್ಟರ್ ಬಳಕೆಗೆ ಹೆಚ್ಚುವರಿಯಾಗಿ 6 ಕೋಟಿ ರೂ., ಗಂಟು ರೋಗದಿಂದ ಮೃತಪಟ್ಟ ರಾಸುಗಳ ಮಾಲೀಕರಿಗೆ ಪರಿಹಾರ ಒದಗಿಸಲು 30 ಕೋಟಿ ಸೇರಿದ ಅಂದಾಜನ್ನು ಅವರು ಪ್ರಸ್ತುತಪಡಿಸಿದರು.

ಸದನದಿಂದ ಅಂಗೀಕೃತವಲ್ಲದ ವೆಚ್ಚ 1,806.18 ಕೋಟಿ ರೂ., ಅಂಗೀಕೃತಗೊಂಡ 6,194.95 ಕೋಟಿ ರೂ. ವೆಚ್ಚ ಸೇರಿ 8,001.12 ಕೋಟಿ ರೂ ಪೂರಕ ಅಂದಾಜುಗಳನ್ನು ಮಂಡಿಸಿದ್ದು, ಈ ಪೈಕಿ 1,799 ಕೋಟಿ ರೂ. ಹೊಂದಾಣಿಕೆ ವೆಚ್ಚ ಹಾಗೂ 1,134 ಕೋಟಿ ರೂ. ಕೇಂದ್ರ ಸಹಯೋಗದ ಹಣವಾಗಿದ್ದು, ರಾಜ್ಯದ ಬೊಕ್ಕಸದಿಂದ ವೆಚ್ಚವಾಗಿರುವ 5,067.40 ಕೋಟಿ ರೂ. ಎಂದು ಪೂರಕ ಅಂದಾಜುಗಳಲ್ಲಿ ಉಲ್ಲೇಖಿಸಲಾಗಿದೆ.

ಉಳಿದಂತೆ, ಮುಂದಿನ ವರ್ಷ ನಡೆಯಲಿರುವ ವಿಧಾನ ಸಭೆ ಸಾರ್ವತ್ರಿಕ ಚುನಾವಣೆಗೆ 300 ಕೋಟಿ ರೂ. ವೆಚ್ಚ ಸೇರಿದಂತೆ 469.19 ಕೋಟಿ ರೂ. ಹಣ ಒದಗಿಸಲಾಗುವುದು. ರಾಜ್ಯಪಾಲರು, ಮುಖ್ಯಮಂತ್ರಿಯವರು, ಸಚಿವರು ಹಾಗೂ ಇತರೆ ಗಣ್ಯರ ಪ್ರಯಾಣಕ್ಕೆ ಬಾಡಿಗೆ ಆಧಾರದ ಮೇಲೆ ಹೆಲಿಕಾಪ್ಟರ್ ಬಿಲ್ ಪಾವತಿಸಲು 6 ಕೋಟಿ ರೂ. ಒದಗಿಸಲಾಗಿದೆ ಎಂದು ತಿಳಿಸಿದರು.

ಅತಿವೃಷ್ಟಿಯಿಂದ ಆದ ಬೆಳೆ ಹಾನಿಗೆ ರಾಜ್ಯ ಸರ್ಕಾರದಿಂದ ಹೆಚ್ಚುವರಿ ಪರಿಹಾರ ನೀಡಲು 758.19 ಕೋಟಿ ರೂ. ಅನುದಾನ, ಜಲಧಾರೆ ಯೋಜನೆ ನಿರ್ವಹಣೆ, ವಿದ್ಯುತ್ ವೆಚ್ಚಗಳಿಗಾಗಿ 200 ಕೋಟಿ ರೂ., ಬಂಧನದಲ್ಲಿದ್ದ ಕೈದಿಗಳ ಸಾವಿಗೆ ಪರಿಹಾರ ನೀಡಲು 50 ಲಕ್ಷ ರೂ., ಮುಖ್ಯಮಂತ್ರಿಗಳ ಕ್ಷೇತ್ರವಾದ ಶಿಗ್ಗಾಂವ್ ತಾಲೂಕಿನಲ್ಲಿ ಹೈಮಾಸ್ಟ್ ವಿದ್ಯುತ್ ದೀಪ ಅಳವಡಿಕೆಗೆ 2 ಕೋಟಿ ರೂ., ಶಿಗ್ಗಾಂವ್ ತಾಲೂಕು ಪಂಚಾಯಿತಿ ಕಟ್ಟಡ ನಿರ್ಮಾಣಕ್ಕೆ 2 ಕೋಟಿ ರೂ. ಅನುದಾನ ಒದಗಿಸಲಾಗಿದೆ.

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಗೆ 55.42 ಕೋಟಿ ರೂ. ಒದಗಿಸಿದ್ದು, ಇದರಲ್ಲಿ ಗಂಟು ರೋಗದಿಂದ ಮೃತಪಟ್ಟ ರಾಸುಗಳ ಮಾಲೀಕರಿಗೆ ಪರಿಹಾರ ನೀಡಲು 30 ಕೋಟಿ ರೂ. ಹಾಗೂ ಸ್ಥಳೀಯ ಗೋ ತಳಿಗಳನ್ನು ಸಂರಕ್ಷಿಸಲು ಮತ್ತು ಅವುಗಳ ಸಂತತಿ ಹೆಚ್ಚಿಸಲು ಕೆಎಂಎಫ್ ಮೂಲಕ ಗೋ ತಳಿಗಳನ್ನು ರೈತರಿಗೆ ಹಂಚಿಕೆ ಮಾಡಲು 7 ಕೋಟಿ ರೂ. ಹಂಚಿಕೆ ಮಾಡಲಾಗಿದೆ. ಇನ್ನು ಮೀನುಗಾರಿಕೆ ಇಲಾಖೆಯಿಂದ ನಾಡದೋಣಿಗಳಿಗೆ ಸೀಮೆಎಣ್ಣೆ ಸರಬರಾಜಿಗೆ 18.42 ಕೋಟಿ ರೂ. ನೀಡಲಾಗಿದೆ. ದಿ. ಪುನೀತ್ ರಾಜ್‌ಕುಮಾರ್ ಅವರ ಶಕ್ತಿಧಾಮ ಸಂಸ್ಥೆಗೆ 2.5 ಕೋಟಿ ರೂ. ಹಾಗೂ ಅವರಿಗೆ ಮರಣೋತ್ತರವಾಗಿ ಕರ್ನಾಟಕ ರತ್ನ ಪ್ರಶಸ್ತಿ ನೀಡುವ ಕಾರ್ಯಕ್ರಮಕ್ಕೆ ವೆಚ್ಚವಾಗಿರುವ ಹೆಚ್ಚುವರಿ 5 ಕೋಟಿ ರೂ., ವಿಷ್ಣುವರ್ಧನ್ ಸ್ಮಾರಕ ನಿರ್ಮಾಣಕ್ಕೆ 4.99 ಕೋಟಿ ರೂ. ಹೆಚ್ಚುವರಿಯಾಗಿ 5 ಸಾವಿರ ಹಕ್ಕುಪತ್ರ ಒದಗಿಸಲು ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ನಡೆದ ಯಾದಗಿರಿ ಜಿಲ್ಲೆ ಕಾರ್ಯಕ್ರಮಕ್ಕೆ 7 ಕೋಟಿ ರೂ. ಹೆಚ್ಚುವರಿಯಾಗಿ ಮಂಜೂರು ಮಾಡಲಾಗಿದೆ. ಕರ್ನಾಟಕ ಕಂದಾಯ ಇಲಾಖೆಯ ಸಾಧನೆಗಳ ಹೆಸರಿನ ಕಾಫಿ ಟೇಬಲ್ ಪುಸ್ತಕಕ್ಕೆ ಹೆಚ್ಚುವರಿಯಾಗಿ 30 ಲಕ್ಷ ರೂ., ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲೂಕಿನಲ್ಲಿ ಕುಂಭಮೇಳ ನಡೆಸಲು 4 ಕೋಟಿ ರೂ., 1 ಲಕ್ಷ ಬಹುಮಹಡಿ ವಸತಿ ಯೋಜನೆಗೆ 256 ಕೋಟಿ ರೂ., ಬಿಬಿಎಂಪಿಯಲ್ಲಿನ ಸಿಬ್ಬಂದಿ ಮತ್ತು ಅಧಿಕಾರಿಗಳ ವೇತನಕ್ಕಾಗಿ 200 ಕೋಟಿ ರೂ., ಇತ್ತೀಚೆಗೆ ಮೃತರಾದ ವಿಧಾನಸಭೆ ಉಪಸಭಾಧ್ಯಕ್ಷ ಆನಂದ ಮಾಮನಿ ಅವರು ಪಡೆದಿದ್ದ ಚಿಕಿತ್ಸೆಗೆ 46 ಲಕ್ಷ ರೂ. ಹೆಚ್ಚುವರಿಯಾಗಿ ಪಾವತಿಸಲು ಹಣ ನೀಡಲು ಪೂರಕ ಅಂದಾಜುಗಳಲ್ಲಿ ಉಲ್ಲೇಖಿಸಲಾಗಿದೆ.

ಇಲಾಖಾವಾರು ಅನುದಾನ ವಿವರ

ಆರ್ಥಿಕ ಇಲಾಖೆಗೆ 48.60 ಕೋಟಿ ರೂ., ಒಳಾಡಳಿತ ಮತ್ತು ಸಾರಿಗೆ 113.65 ಕೋಟಿ ರೂ., ಗ್ರಾಮೀಣಾಭಿವೃದ್ಧಿ ಇಲಾಖೆ 1,154.54 ಕೋಟಿ ರೂ., ಆಹಾರ ಇಲಾಖೆ 5.25 ಕೋಟಿ ರೂ., ಕಂದಾಯ 1,425.08 ಕೋಟಿ ರೂ., ಸಮಾಜ ಕಲ್ಯಾಣ 396.13 ಕೋಟಿ ರೂ., ಮಹಿಳಾ ಮತ್ತು ಮಕ್ಕಳ ಕಲ್ಯಾಣ 43.28 ಕೋಟಿ ರೂ., ವಾರ್ತಾ, ಪ್ರವಾಸೋದ್ಯಮ, ಯುವಜನ ಸೇವೆಗಳ ಇಲಾಖೆಗೆ 160.88 ಕೋಟಿ ರೂ., ವಸತಿ ಇಲಾಖೆ 308.89 ಕೋಟಿ ರೂ., ಶಿಕ್ಷಣ 204.43 ಕೋಟಿ ರೂ., ವಾಣಿಜ್ಯ ಇಲಾಖೆ 7.97 ಕೋಟಿ ರೂ., ನಗರಾಭಿವೃದ್ಧಿ 201.50 ಕೋಟಿ ರೂ., ಲೋಕೋಪಯೋಗಿ 86.90 ಕೋಟಿ ರೂ., ಆರೋಗ್ಯ ಇಲಾಖೆ 88.72 ಕೋಟಿ ರೂ., ಕಾರ್ಮಿಕ ಇಲಾಖೆ 26.08 ಕೋಟಿ ರೂ. ಇಂಧನ 692.61 ಕೋಟಿ ರೂ., ಕನ್ನಡ ಮತ್ತು ಸಂಸ್ಕೃತಿ ಇಲಾಖೆ 49.52 ಕೋಟಿ ರೂ., ಯೋಜನೆ, ಐಟಿ-ಬಿಟಿ ಇಲಾಖೆ 1.14 ಕೋಟಿ ರೂ., ಕಾನೂನು 140.17 ಕೋಟಿ ರೂ., ಸೇರಿ ವಿವಿಧ ಇಲಾಖೆಗಳಿಗೆ 8,001.12 ಕೋಟಿ ರೂ.ಗಳನ್ನು ಒದಗಿಸಲಾಗಿದೆ ಎಂದು ಪೂರಕ ಅಂದಾಜಿನಲ್ಲಿ ಉಲ್ಲೇಖಿಸಲಾಗಿದೆ.

ರಾಮಕೃಷ್ಣ ವಿದ್ಯಾಶಾಲಾ ಸಾಮಾನ್ಯ ಜ್ಞಾನ ಸ್ಪರ್ಧೆಯಲ್ಲಿ ಬಿವಿಬಿ ಶಾಲೆಗೆ ಬಹುಮಾನ



ಬಹುಮಾನ ವಿಜೇತ ವಿದ್ಯಾರ್ಥಿಗಳೊಂದಿಗೆ (ಎಡದಿಂದ) ಅಶೋಕ್‌ಕುಮಾರ್, ಶಾಮ, ಡಿಂಪಲ್(ತಂಡದ ನೇತೃತ್ವ ವಹಿಸಿದ್ದ ಶಿಕ್ಷಕರು) ಪ್ರಾಂಶುಪಾಲರಾದ ವಿಜಯ ನರಸಿಂಹಂ, ಬಿವಿಬಿ ಮೈಸೂರು ಕೇಂದ್ರದ ಅಧ್ಯಕ್ಷರಾದ ಕೆ.ಬಿ.ಗಣಪತಿ, ಗೌರವ ಕಾರ್ಯದರ್ಶಿ ಪಿ.ಎಸ್. ಗಣಪತಿ, ಶಶಿಕಲಾ ಮತ್ತು ಬಿ.ಎಸ್.ವಿದ್ಯಾ (ತಂಡದ ನೇತೃತ್ವ ವಹಿಸಿದ್ದ ಶಿಕ್ಷಕರು) ಚಿತ್ರದಲ್ಲಿದ್ದಾರೆ.

ಮೈಸೂರು,ಡಿ.27(ಎಂಕೆ)-ಶ್ರೀ ರಾಮಕೃಷ್ಣ ವಿದ್ಯಾಶಾಲಾ ಆಯೋಜಿಸಿದ್ದ 49ನೇ ಶ್ರೀಮತ್ ಸ್ವಾಮಿ ಶಾಂಭವಾನಂದಜೀ ಸ್ಮಾರಕ ಅಂತರ ಪ್ರೌಢಶಾಲೆ ಸಾಮಾನ್ಯ ಜ್ಞಾನ ಸ್ಪರ್ಧೆಯಲ್ಲಿ ಮೈಸೂರಿನ ವಿಜಯನಗರದಲ್ಲಿರುವ ಭಾರತೀಯ ವಿದ್ಯಾ ಭವನ (ಬಿವಿಬಿ) ಶಾಲೆ ರೋಲಿಂಗ್ ಶೀಲ್ಡ್ ಜೊತೆಗೆ ಪ್ರಥಮ ಬಹುಮಾನ ಪಡೆದುಕೊಂಡಿದೆ.

ಸ್ಪರ್ಧೆಯಲ್ಲಿ 38 ಶಾಲೆಗಳಿಂದ 690 ವಿದ್ಯಾರ್ಥಿಗಳು ಭಾಗವಹಿಸಿದ್ದು, ಭಾರತೀಯ ವಿದ್ಯಾಭವನದಿಂದ 10ನೇ ತರಗತಿಯ 15 ಹಾಗೂ 9ನೇ ತರಗತಿಯ 5 ವಿದ್ಯಾರ್ಥಿಗಳು ಭಾಗವಹಿಸಿದ್ದರು. 10ನೇ ತರಗತಿ ವಿದ್ಯಾರ್ಥಿ ಟಿ.ತರುಣ್ ತೃತೀಯ ಬಹುಮಾನ ಪಡೆದರೆ, ಎಂ.ಆರ್. ಹರ್ಷವರ್ಧನ್ ಮತ್ತು ಸಿ.ನಯನ ಮೊದಲ ಮತ್ತು 5ನೇ ವಿಶೇಷ ಬಹುಮಾನ ಪಡೆದುಕೊಂಡರು. 9ನೇ ತರಗತಿ ವಿದ್ಯಾರ್ಥಿ ಎಸ್.ಮೋಹಿತ್ ಪ್ರಥಮ ಸ್ಥಾನ ಬಹುಮಾನ ಪಡೆದರೆ, ವೈಪ್ರದ್ಯುಮ್ನ ಭಟ್ ವಿಶೇಷ ಬಹುಮಾನ ಪಡೆದರು. ಸ್ಪರ್ಧೆಯಲ್ಲಿ ಸರಾಸರಿ 616 ಅಂಕಗಳನ್ನು ಪಡೆದ ಬಿವಿಬಿ ಶಾಲೆ ಪ್ರಥಮ ಬಹುಮಾನದ ಜೊತೆಗೆ ರೋಲಿಂಗ್ ಶೀಲ್ಡ್ ಪಡೆದುಕೊಂಡಿದೆ.

ಜಿಲ್ಲಾ, ರಾಜ್ಯಮಟ್ಟದ ಆನ್‌ಲೈನ್ ಸ್ಪರ್ಧೆಗಳಲ್ಲಿ ಜಿಲ್ಲೆಯ 10 ವಿದ್ಯಾರ್ಥಿಗಳಿಗೆ ಬಹುಮಾನ

ರಾಷ್ಟ್ರಮಟ್ಟದ ಕಲೋತ್ಸವ ಸ್ಪರ್ಧೆಗೆ 5 ವಿದ್ಯಾರ್ಥಿಗಳು ಆಯ್ಕೆ



ತೇಜಸ್



ತೇಜಸ್



ಸನ್ ಶ್ರಾಯ್



ಪಲ್ಲವಿ



ಪೂರ್ವಿ

ಮೈಸೂರು, ಡಿ.27(ಎಸ್‌ಪಿಎನ್)-ಮಕ್ಕಳಲ್ಲಿರುವ ಪ್ರತಿಭೆಯನ್ನು ಹೊರತರಲು 9ರಿಂದ 12ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ವತಿಯಿಂದ ಆಯೋಜಿಸಿದ್ದ ಜಿಲ್ಲಾ ಮತ್ತು ರಾಜ್ಯಮಟ್ಟದ ವಿವಿಧ (ಹತ್ತು) ಕಲಾ ವಿಭಾಗದ ಆನ್‌ಲೈನ್ ಸ್ಪರ್ಧೆಯಲ್ಲಿ ಮೈಸೂರಿನ 10 ವಿದ್ಯಾರ್ಥಿಗಳು ಬಹುಮಾನ ಪಡೆದಿದ್ದಾರೆ.

ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕಲೋತ್ಸವ-22 ಶೀರ್ಷಿಕೆಯಡಿ ನಡೆದ ಸ್ಪರ್ಧೆಯಲ್ಲಿ ಮೈಸೂರು ವಿವಿಧ ಶಾಲೆಯ 357 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಇದರಲ್ಲಿ ಜಿಲ್ಲಾ ಹಂತದಿಂದ ರಾಜ್ಯ ಮಟ್ಟಕ್ಕೆ 60 ವಿದ್ಯಾರ್ಥಿಗಳು ಆಯ್ಕೆಗೊಂಡಿದ್ದರು. ತದನಂತರ ರಾಜ್ಯ ಮಟ್ಟದಿಂದ ರಾಷ್ಟ್ರ ಮಟ್ಟಕ್ಕೆ ನಡೆದ ಸ್ಪರ್ಧೆಯಲ್ಲಿ 10 ವಿದ್ಯಾರ್ಥಿಗಳು ಬಹುಮಾನ ಪಡೆದುಕೊಂಡಿದ್ದಾರೆ.

ಇದರಲ್ಲಿ 10 ವಿದ್ಯಾರ್ಥಿಗಳಲ್ಲಿ 5 ವಿದ್ಯಾರ್ಥಿಗಳು ಪ್ರಥಮ ಬಹುಮಾನ ಪಡೆದು ರಾಷ್ಟ್ರಮಟ್ಟದ ಕಲೋತ್ಸವ ಸ್ಪರ್ಧೆಗೆ ಆಯ್ಕೆಯಾಗಿದ್ದು, ಒರಿಸ್ಸಾದ ಭುವನೇಶ್ವರದಲ್ಲಿ ಜನವರಿಯಲ್ಲಿ ನಡೆಯುವ ರಾಷ್ಟ್ರಮಟ್ಟದ ಕಲೋತ್ಸವ -2023 ಸ್ಪರ್ಧೆಯಲ್ಲಿ ಭಾಗಿಯಾಗಲಿದ್ದಾರೆ.

ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿರುವ ಕೆ.ಆರ್. ನಗರ ತಾಲೂಕಿನ ಮಾರಾಗೌಡನಹಳ್ಳಿ ಸರ್ಕಾರ ಪ್ರೌಢಶಾಲೆಯ ವಿದ್ಯಾರ್ಥಿ ತೇಜಸ್ 'ಜಾನಪದ ಗೀತೆ' ವಿಭಾಗ, ಟಿ.ನರಸೀಪುರ ತಾಲೂಕಿನ ಹಸುವಿನ ಕೊಪ್ಪಲು ಸರ್ಕಾರಿ ಪ್ರೌಢಶಾಲೆಯ ಪಲ್ಲವಿ 'ದೃಶ್ಯ ಕಲೆಗಳು(2ಡಿ)', ಮೈಸೂರು ತಾಲೂಕಿನ ದಿ ಕ್ರೈಸ್ಟ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿ ಸನ್‌ಶ್ರಾಯ್ 'ಸ್ಥಳೀಯ ಆಟಿಕೆಗಳು ಮತ್ತು ಆಟಗಳು', ಮೈಸೂರು ಮಹಾಜನ ಪಿಯು ಕಾಲೇಜಿನ ವಿದ್ಯಾರ್ಥಿ ಜೆ.ಪೂರ್ವಿ 'ಶಾಸ್ತ್ರೀಯ ಸಂಗೀತ', ಹೆಚ್.ಡಿ. ಕೋಟೆ ತಾಲೂಕಿನ ಜಿ.ಬಿ. ಸರಗೂರು ಸರ್ಕಾರಿ ಪ್ರೌಢಶಾಲೆಯ ಶಕುಂತಲಾ 'ದೃಶ್ಯಕಲೆಗಳು'(3ಡಿ) ವಿಭಾಗದಿಂದ ಪ್ರಥಮ ಸ್ಥಾನಗಳಿಸಿ ಒಟ್ಟು 5 ಮಂದಿ ಪ್ರಥಮ ಸ್ಥಾನ ಪಡೆದಿದ್ದಾರೆ. ಉಳಿದಂತೆ ರಾಜ್ಯ ಮಟ್ಟದಲ್ಲಿ ದ್ವಿತೀಯ ಹಾಗೂ ತೃತೀಯ ಬಹುಮಾನ ಪಡೆದಿರುವ ವಿದ್ಯಾರ್ಥಿಗಳ ವಿವರ ಇಂತಿದೆ.

ಹುಣಸೂರು ತಾಲೂಕಿನ ಮನುಗನಹಳ್ಳಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಹೆಚ್.ಎಲ್.ಪುರುಷೋತ್ತಮ ಜಾನಪದ ಗೀತೆ(ದ್ವಿ), ಪಿರಿಯಾಪಟ್ಟಣ ತಾಲೂಕಿನ ಹತ್ತಿಗೂಡು ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಕೆ.ಎಚ್. ಅರ್ಕೇಶ್ ಜನಪದ ನೃತ್ಯ(ದ್ವಿ), ದೃಶ್ಯಕಲೆಗಳ ವಿಭಾಗದಿಂದ (2ಡಿ) ಹುಣಸೂರು ತಾಲೂಕಿನ ಕಡೆಮಗುನಗಹಳ್ಳಿ ಸರ್ಕಾರಿ ಪ್ರೌಢಶಾಲೆಯ ಎಂ.ಚಂದ್ರು (ದ್ವಿ), ಹೆಚ್.ಡಿ.ಕೋಟೆ ತಾಲೂಕಿನ ಜಿ.ಬಿ.ಸರಗೂರು ಸರ್ಕಾರಿ ಪ್ರೌಢಶಾಲೆಯ ಕೆ.ರೂಪ (ದ್ವಿ), ಮೈಸೂರು ಉತ್ತರ ವಲಯದ ಸಾವಿತ್ರಿ ಕಾನ್ವೆಂಟ್ ಶಾಲೆಯ ಸಿ.ಚಂದನ (ತೃ) ನಾಟಕ ವಿಭಾಗದ ವಿದ್ಯಾರ್ಥಿಗಳು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ ಎಂದು ಡಿಡಿಪಿಐ ರಾಮಚಂದ್ರರಾಜೇ ಅರಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ

ಪುಟ್ಟರಾಚಮ್ಮ



ಮಂಡ್ಯ,ಡಿ.27-ಜಿಲ್ಲೆಯ ಮಳವಳ್ಳಿ ಪಟ್ಟಣದ ಕೀರ್ತಿನಗರದ ನಿವಾಸಿ ಪುಟ್ಟರಾಚಮ್ಮ(85) ವಯೋಸಹಜ ಅನಾರೋಗ್ಯದಿಂದ ಮಂಗಳವಾರ ರಾತ್ರಿ ಸ್ವಗೃಹದಲ್ಲಿ ನಿಧನರಾದರು. ಮೃತರು ಬಿಎಸ್‌ಎನ್‌ಎಲ್ ನಿವೃತ್ತ ಅಧಿಕಾರಿಯಾದ ಪುತ್ರ ವಿದ್ಯಾಧರ್, ಪುತ್ರಿ ಗಾಯತ್ರಿ, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ನಾಳೆ(ಡಿ.28) ಪಟ್ಟಣದ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಮೃತರ ಕುಟುಂಬ ಮೂಲಗಳು ತಿಳಿಸಿವೆ.

ದೇವರಾಜ ಅರಸು ಬಾಲಕ ವಿದ್ಯಾರ್ಥಿ ನಿಲಯದಲ್ಲಿ ನಾಟಕ, ಸಂಗೀತ ಕಾರ್ಯಕ್ರಮ



ಮೈಸೂರು, ಡಿ.27(ಜಿಎ)-ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ರಂಗಾಂತರಂಗ ವತಿಯಿಂದ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ಡಿ.ದೇವರಾಜ ಅರಸು ಮೆಟ್ರಿಕ್ ಬಾಲಕರ ವಿದ್ಯಾರ್ಥಿನಿಲಯದಲ್ಲಿ ಆಯೋಜಿಸಿರುವ ಮೂರು ದಿನಗಳ ನಾಟಕ ಮತ್ತು ಸಂಗೀತ ಕಾರ್ಯಕ್ರಮಕ್ಕೆ ಮಂಗಳವಾರ ಚಾಲನೆ ನೀಡಲಾಯಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಮೈಸೂರು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಜಿ.ಆರ್.ಮಹೇಶ್ ಮಾತನಾಡಿ, ವೃತ್ತಿ ಜೀವನಕ್ಕಾಗಿ ಓದುತ್ತಿದ್ದೀರಾ. ಇದರೊಟ್ಟಿಗೆ ಸಂಗೀತ, ನಾಟಕ, ನೃತ್ಯ ಸೇರಿದಂತೆ ಇತರ ಕಲಾ ಪ್ರಕಾರಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಪ್ರವೃತ್ತಿಯನ್ನು ಬೆಳೆಸಿಕೊಳ್ಳಿ. ಇಂತಹ ಹವ್ಯಾಸ ನಿಮ್ಮ ಸಮಯ ವ್ಯರ್ಥವಾಗದಂತೆ, ನಿಮ್ಮ ಚಂಚಲ ಮನಸನ್ನು ನಿಯಂತ್ರಿಸಿ, ಉಲ್ಲಾಸ ಜೀವನದತ್ತ ಕೊಂಡೊಯ್ಯುತ್ತದೆ ಎಂದರು.

ನಂತರ ಮುಖ್ಯ ಅತಿಥಿಯಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಭಾರತ್ ಕ್ಯಾನ್ಸರ್ ಆಸ್ಪತ್ರೆ ನಿರ್ದೇಶಕ ಡಾ.ಅಮರ್ ಕುಮಾರ್ ಮಾತನಾಡಿ, ಕಲೆ ಎಂಬುದು ದೇಶಕ್ಕೆ ಬಹಳ ಮುಖ್ಯವಾದದ್ದು, ಯಾವ ದೇಶದಲ್ಲಿ ಕಲೆ ಇರುವುದಿಲ್ಲವೋ ಆ ದೇಶದಲ್ಲಿ ನಾನಾ ಹಿಂಸಾ ಕೃತ್ಯಗಳು ನಡೆಯುತ್ತವೆ. ಆದ್ದರಿಂದ ವಿದ್ಯಾರ್ಥಿಗಳು ಶೈಕ್ಷಣಿಕ ಚಟುವಟಿಕೆ ಜೊತೆಗೆ ರಂಗಭೂಮಿಯತ್ತ ಒಲವು ಬೆಳೆಸಿಕೊಳ್ಳಿ ಹಾಗೂ 12ನೇ ಶತಮಾನದಲ್ಲಿ ಬುದ್ಧ, ಬಸವ ಅವರು ನಮಗೆ ಸಮಾನತೆಯ ದಾರಿ ತೋರಿದ್ದಾರೆ. ಅದನ್ನು ನಾವು ಹೇಗೆ ಪಾಲಿಸಬೇಕು ಎಂಬುದನ್ನು ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ತಿಳಿಸಿದ್ದಾರೆ. ನಾವುಗಳು ಈ ಮಹನಿಯರ ದಾರಿಯಲ್ಲಿ ಸಾಗಬೇಕಿದೆ ಎಂದರು.

ರಂಗಾಂತರಂಗದ ಕಿರಣ್ ರಾಜ್ ಅವರ ನಿರ್ದೇಶನದಲ್ಲಿ ರೂಬಿನ್ ಸಂಜಯ್ ತಂಡದವರು ಶೂರ್ಪನಖಿ ನಾಟಕ ಪ್ರದರ್ಶಿಸಿದರು. ಕಾರ್ಯಕ್ರಮದಲ್ಲಿ ತಾಲೂಕು ಕಲ್ಯಾಣಾಧಿಕಾರಿ ಮೇಘ, ತಾಲೂಕು ವಿಸ್ತರಣಾಧಿಕಾರಿ ಸತೀಶ, ವಿದ್ಯಾರ್ಥಿನಿಲಯದ ಮೇಲ್ವಿಚಾರಕ ಜಿ.ಜಗದೀಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಜಿಲ್ಲಾಸ್ಪತ್ರೆಗೆ ಡಿಸಿ ಭೇಟಿ: ಮೂಲ ಸೌಕರ್ಯ, ಚಿಕಿತ್ಸೆ ಮಾಹಿತಿ



ಮೈಸೂರು, ಡಿ.27(ಎಸ್‌ಬಿಡಿ)- ಮೈಸೂರಿನ ಕೆಆರ್‌ಎಸ್ ರಸ್ತೆಯ ಜಿಲ್ಲಾ ಆಸ್ಪತ್ರೆಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ಮಂಗಳವಾರ ರಾತ್ರಿ ದಿಢೀರ್ ಭೇಟಿ ನೀಡಿ ಪರಿಶೀಲಿಸಿದರು. ಆಸ್ಪತ್ರೆಯ ಮೂಲ ಸೌಕರ್ಯ, ವಾರ್ಡ್‌ಗಳು, ಚುಚ್ಚುಮದ್ದು ಕೊಠಡಿ, ಔಷಧಿ ವಿತರಣಾ ಕೊಠಡಿ, ಅಪರೇಷನ್ ಕೊಠಡಿ ಸೇರಿದಂತೆ ಎಲ್ಲಾ ವಿಭಾಗಗಳಿಗೂ ತೆರಳಿ ಸಂಬಂಧಪಟ್ಟವರಿಂದ ಮಾಹಿತಿ ಪಡೆದರು.

ಜಿಲ್ಲಾ ಆಸ್ಪತ್ರೆಯಲ್ಲಿ ಉತ್ತಮ ಬೆಡ್ ಸೌಲಭ್ಯ ಕಲ್ಪಿಸಿರುವುದನ್ನು ಗಮನಿಸಿದ ಅವರು ಯಾವಾಗಲೂ ಹೀಗೆಯೇ ನಿರ್ವಹಣೆ ಮಾಡಬೇಕು. ಆಸ್ಪತ್ರೆ ಕಾರ್ಯನಿರ್ವಹಣೆ ಹಾಗೂ ಮೂಲ ಸೌಕರ್ಯಗಳ ಬಗ್ಗೆ ಸಾರ್ವಜನಿಕರಿಗೆ ತಿಳಿಯಪಡಿಸಲು ಕ್ರಮ ವಹಿಸಬೇಕೆಂದು ಸಲಹೆ ನೀಡಿದರು. ಈ ವೇಳೆ ರೋಗಿಗಳೊಂದಿಗೂ ಮಾತನಾಡಿ ಆಸ್ಪತ್ರೆಯಲ್ಲಿನ ವೈದ್ಯರ ಕರ್ತವ್ಯ ನಿರ್ವಹಣೆ, ಸಿಬ್ಬಂದಿಯ ಶುಶ್ರೂಷೆ, ಊಟದ ವ್ಯವಸ್ಥೆ ಮತ್ತು ಶುಚಿತ್ವ ಬಗ್ಗೆ ಅಭಿಪ್ರಾಯ ಕೇಳಿದರು. ಈ ಸಂದರ್ಭದಲ್ಲಿ ಜಿಲ್ಲಾ ಸರ್ಜನ್ ಡಾ.ಅಮರನಾಥ್ ಹಾಗೂ ಆಸ್ಪತ್ರೆಯ ವೈದ್ಯರು ಉಪಸ್ಥಿತರಿದ್ದರು.



ಮುಂಬರುವ ವಿಧಾನಸಭೆ ಚುನಾವಣೆ ನಿಮಿತ್ತ ವರುಣ ಕ್ಷೇತ್ರದ ದೊಡ್ಡಕವಲಂದೆ ಹಾಗೂ ತಗಡೂರು ಜಿಪಂ ವ್ಯಾಪ್ತಿಯ ಮುಖಂಡರು, ಕಾರ್ಯಕರ್ತರ ಸಭೆಯನ್ನುದ್ದೇಶಿಸಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದೇವನೂರು ಪ್ರತಾಪ್ ಮಾತನಾಡಿದರು. ಜಿಲ್ಲಾ ಅಧ್ಯಕ್ಷೆ ಮಂಗಳ ಸೋಮಶೇಖರ್, ಮಂಡಲ ಅಧ್ಯಕ್ಷ ವಿಜಯಕುಮಾರ್, ಪ್ರವಾಸೋದ್ಯಮ ಅಧ್ಯಕ್ಷ ಕಾಪು ಸಿದ್ದಲಿಂಗಸ್ವಾಮಿ, ತೋಟದಪ್ಪ ಬಸವರಾಜು, ಜಿಪಂ ಮಾಜಿ ಸದಸ್ಯರಾದ ಸದಾನಂದ, ಸಿದ್ದವೀರಪ್ಪ, ಉಸ್ತುವಾರಿ ಪ್ರಪುಲ್ಲ ಮಲ್ಲಾಡಿ, ವೆಂಕಟರಮಣ ಶೆಟ್ಟಿ, ರಂಗುನಾಯ್ಕ, ಮಹಾಶಕ್ತಿ ಕೇಂದ್ರ ಅಧ್ಯಕ್ಷರಾದ ದಾಸನೂರು ಮಲ್ಲಣ್ಣ, ನಗರ್ಲೆ ಮಹೇಶ್, ಸಿ.ಎಂ. ಮಹದೇವಯ್ಯ, ರೇಚಣ್ಣ ಮುಳ್ಳೂರು, ಶಿವಣ್ಣ, ಶರತ್, ಶಿವಯ್ಯ ಸೇರಿದಂತೆ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

ಭಯ ಹುಟ್ಟಿಸಿ, ಆಸೆ ತೋರಿಸಿ ವಂಚಿಸುವ ಆನ್‌ಲೈನ್ ವಂಚಕರಿದ್ದಾರೆ ಎಚ್ಚರ....

●ನಗರ ಪೊಲೀಸ್ ಆಯುಕ್ತ ರಮೇಶ್ ಎಚ್ಚರಿಕೆ ●ಅಪರಾಧ ತಡೆ ಮಾಸಾಚರಣೆ ಹಿನ್ನೆಲೆ 'ಸೈಬರ್ ಕ್ರೈಂ' ಜಾಗೃತಿ ●ಮ್ಯಾಟ್ರಿಮನಿ, ಲೋನ್, ಜಾಬ್ ವೆಬ್‌ಸೈಟ್‌ಗಳೇ ಸದ್ಯಕ್ಕೆ ವಂಚಕರ ಜಾಲತಾಣಗಳಾಗಿವೆ ಹುಷಾರ್...



ಅಪರಾಧ ತಡೆ ಮಾಸಾಚರಣೆಯ ಕರಪತ್ರಗಳನ್ನು ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್ ಬಿಡುಗಡೆಗೊಳಿಸಿದರು.



ಮೈಸೂರು,ಡಿ.27(ಎಂಕೆ)-ಬಲಹೀನತೆ ಅರಿತು ಭಯ ಹುಟ್ಟಿಸಿ, ಆಸೆ ತೋರಿಸಿ ಮೋಸ ಮಾಡುವ ಆನ್‌ಲೈನ್ ವಂಚಕರ ನಡುವೆ ಸದಾ ಎಚ್ಚರದಿಂದಿರಬೇಕು ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಹೇಳಿದರು.

ಮೈಸೂರಿನ ಇನ್ಫೋಸಿಸ್ ಆವರಣದಲ್ಲಿ ಮೈಸೂರು ನಗರ ಪೊಲೀಸ್, ಎನ್‌ಆರ್ ಉಪ ವಿಭಾಗದ ವತಿಯಿಂದ 'ಅಪರಾಧ ತಡೆ ಮಾಸಾಚರಣೆ' ಹಿನ್ನೆಲೆಯಲ್ಲಿ ಆಯೋಜಿಸಿದ್ದ 'ಸೈಬರ್ ಕ್ರೈಂ' ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಳೆದ 10-15 ವರ್ಷದಿಂದ ದೇಶದಲ್ಲಿ ಡಿಜಿಟಲ್ ವ್ಯವಹಾರ ದೊಡ್ಡಮಟ್ಟದಲ್ಲಿ ಬೆಳೆಯುತ್ತಿದ್ದು, ಅಷ್ಟೇ ವೇಗವಾಗಿ ವ್ಯವಸ್ಥಿತವಾಗಿ ಸಂಚು ರೂಪಿಸಿ, ವಂಚಿಸುವ ಸೈಬರ್ ಕ್ರೈಂ ಪ್ರಕರಣಗಳು ಹೆಚ್ಚಾಗುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಮೊದಲಿಗಿಂತ ಈಗ ಕಾಲೇಜುಗಳ ಸಂಖ್ಯೆ ಹೆಚ್ಚಿ, ಪದವಿ ಪಡೆದುಕೊಂಡು ಕೆಲಸಕ್ಕಾಗಿ ಹುಡುಕಾಟ ನಡೆಸುವವರನ್ನೇ ವಂಚಿಸಲಾಗುತ್ತಿದೆ. ಉದ್ಯೋಗಕ್ಕೆ ಅಪ್ಲಿಕೇಶನ್ ಹಾಕಿ ಎಂದು ವೆಬ್‌ಸೈಟ್ ರಚಿಸುವುದು. ಉದ್ಯೋಗ ದೊರೆಯುವ ಆಸೆಯಿಂದ ಮಾಹಿತಿ ನೀಡಿದವರ ಬಳಿ ಮುಂಗಡವಾಗಿ ಹಣ ಪಡೆದು ಮೋಸ ಮಾಡುವುದು ವಿಪರೀತವಾಗುತ್ತಿದೆ. ಬ್ಯಾಂಕ್ ಮಾಹಿತಿ ಪಡೆದು ವಂಚಿಸುವುದಷ್ಟೇ ಅಲ್ಲದೆ ಮ್ಯಾಟ್ರಿಮನಿ, ಲೋನ್ ವೆಬ್‌ಸೈಟ್‌ಗಳ ಮೂಲಕವೂ ಬೆದರಿಕೆ ಹೊಡ್ಡಿ ಹಣ ಸುಲಿಗೆ ಮಾಡುವವರಿದ್ದಾರೆ ಎಂದು ಪೊಲೀಸ್ ಆಯುಕ್ತರು ಎಚ್ಚರಿಸಿದರು.

ಸಾಮಾಜಿಕ ಜಾಲತಾಣಗಳಲ್ಲಿ ಪರಿಚಿತರಾಗಿ ಮೊದ ಮೊದಲು ಒಳ್ಳೆಯವರಂತೆ ನಟಿಸಿ, ಚಾಟ್ ಮಾಡಿ ನಂತರ ಇಲ್ಲದ ಸಮಸ್ಯೆಗಳನ್ನು ಹೇಳಿಕೊಂಡು ಹಣಕ್ಕೆ ಬೇಡಿಕೆ ಇಡುವುದು. ಸುಂದರ ಹುಡುಗಿಯರ ಫೋಟೋ ಬಳಸಿ ಆಸೆ ತೋರಿಸಿ ಮೋಸ ಮಾಡುವುದು. ಆನ್‌ಲೈನ್ (ಓಎಲ್‌ಎಕ್ಸ್‌ನಂತಹ ಆ್ಯಪ್‌ಗಳ ಮೂಲಕ) ವ್ಯಾಪಾರದಲ್ಲಿ ವಂಚಿಸುವುದು. ಸೈನಿಕರೆಂದು ಸುಳ್ಳು ಹೇಳಿ ಸಹಾಯ ಪಡೆದುಕೊಳ್ಳುವುದು. ನಿಮ್ಮ ಹಣ ಒಂದೆರಡು ತಿಂಗಳಲ್ಲೇ ಡಬಲ್ ಆಗುತ್ತದೆಂದು ನಂಬಿಸಿ ಹಣ ಹೂಡಿಕೆ ಮಾಡಿಸುವುದು. ಎಸ್‌ಎಂಎಸ್ ಮೂಲಕ ನಿಮಗೆ ಐದಾರು ಕೋಟಿ ಬಹುಮಾನ ಬಂದಿದೆ ಎಂದು ಬ್ಯಾಂಕ್ ಮಾಹಿತಿ ಪಡೆದು ಖಾತೆಯಲ್ಲಿರುವ ಹಣ ದೋಚುವುದು ಸೇರಿದಂತೆ ಹಲವು ಅನ್ಯಮಾರ್ಗಗಳಲ್ಲಿ ಆನ್‌ಲೈನ್ ಮೂಲಕ ವಂಚಿಸಲಾಗುತ್ತಿದೆ ಎಂದು ವಿವರಿಸಿದರು.

ಡಿಜಿಟಲ್ ವ್ಯವಹಾರದಲ್ಲಿ ಒಳ್ಳೆಯದು ಇರುವಂತೆ ಕೆಟ್ಟದ್ದು ಇರುತ್ತದೆ. ಯಾವುದು ಸಹ ಉಚಿತವಾಗಿ ದೊರೆಯುವುದಿಲ್ಲ ಎಂಬುದು ಸದಾ ಗಮನದಲ್ಲಿರಬೇಕು. ಸೈಬರ್ ಕ್ರೈಂ ಬಗ್ಗೆ ತಿಳಿದಿದ್ದರೂ ಕೆಲವೊಮ್ಮೆ ಮೋಹಿತರಾಗಿ ವಂಚಕರ ಬಲೆಗೆ ಬೀಳುವ ಸಾಧ್ಯತೆಗಳಿವೆ. ಆದ್ದರಿಂದ ಸೈಬರ್ ಅಪರಾಧಗಳ ಬಗ್ಗೆ ಜಾಗೃತರಾಗುವುದರ ಜೊತೆಗೆ ಪ್ರತಿಯೊಬ್ಬರಿಗೂ ಸೈಬರ್ ಕ್ರೈಂ ಕುರಿತ ಮಾಹಿತಿ ನೀಡಿ ಎಂದು ಕೋರಿದರಲ್ಲದೆ ಒಂದು ತಿಂಗಳು ಕೆಲಸ ಮಾಡಿ ಸಂಪಾದಿಸಿದ ಸಂಬಳ ಒಂದೇ ಕ್ಷಣದಲ್ಲಿ ಕಳೆದುಕೊಂಡರೆ ತುಂಬಾ ನೋವಾಗುತ್ತದೆ. ಅದೇ ಸಂಬಳದ ಮೇಲೆ ಕುಟುಂಬದ ಜೀವನ ನಡೆಯಬೇಕಾಗಿರುತ್ತದೆ. ಆದ್ದರಿಂದ ಆನ್‌ಲೈನ್ ವ್ಯವಹಾರದಲ್ಲಿ ಸದಾ ಎಚ್ಚರದಿಂದಿರಿ ಎಂದು ಹೇಳಿದರು.

ಬಳಿಕ ಸೈಬರ್ ಕ್ರೈಂ ಕುರಿತು ವಿಶೇಷ ಉಪನ್ಯಾಸ ನೀಡಿದ ಪ್ರೊ.ಜಿ.ಅನಂತ್ ಪ್ರಭು, ಎಲ್‌ಕೆಜಿಯಿಂದ ಪಿಹೆಚ್‌ಡಿವರೆಗೂ ಎಲ್ಲಿಯೂ ಸೈಬರ್ ಕ್ರೈಂ ಬಗ್ಗೆ ಹೇಳಿಕೊಡುವುದಿಲ್ಲ. ಆದ್ದರಿಂದ ಅದರ ಅರಿವು ಇಲ್ಲದಂತೆ ನಾವು ಆನ್‌ಲೈನ್‌ನಲ್ಲಿ ತೊಡಗಿಸಿಕೊಳ್ಳುತ್ತಿದ್ದೇವೆ ಎಂದ ಅವರು, ನಮಗೆ ಅರಿವಿಲ್ಲದಂತೆ ನಮ್ಮ ಮೊಬೈಲ್‌ನಲ್ಲಿ ಪಾಸ್‌ವರ್ಡ್ ಕದ್ದರೂ ಅಪರಾಧವಾಗುತ್ತದೆ. ಅದಕ್ಕೆ ಸುಮಾರು 1 ವರ್ಷ ಜೈಲು, ಲಕ್ಷ ರೂ., ದಂಡ ವಿಧಿಸಲಾಗುತ್ತದೆ. ಮೊಬೈಲ್ ಡೇಟಾ ಹೊಸ ಇಂಧನವಾಗಿದೆ ಎಂದರು. ಅತಿಯಾದ ಮೊಬೈಲ್ ಬಳಕೆಯಿಂದಾಗುವ ತೊಂದರೆಗಳು, ಶೌಚಾಲಯದಲ್ಲಿ ಮೊಬೈಲ್ ಬಳಕೆಯಿಂದ ಬರುವ ರೋಗ, ನಮಗೆ ಅರಿವಿಲ್ಲದಂತೆ ನಮ್ಮ ಮಾಹಿತಿಯನ್ನು ಬೇರೆಯವರು ಹೇಗೆ ಆ್ಯಪ್‌ಗಳನ್ನು ಬಳಸಿ ಕದಿಯುತ್ತಾರೆ ಎಂಬುದನ್ನು ಸವಿಸ್ತಾರವಾಗಿ ತಿಳಿಸಿಕೊಟ್ಟರು. ಇದೇ ವೇಳೆ ಅಪರಾಧ ತಡೆ ಮಾಸಾಚರಣೆ ಕರಪತ್ರಗಳನ್ನು ಬಿಡುಗಡೆ ಮಾಡಲಾಯಿತು. ಕೆಎಸ್‌ಆರ್‌ಪಿ ಡಿಸಿಪಿ ನಾಗರಾಜ್, ಎಸಿಪಿಗಳಾದ ಶಶಿಧರ್, ಶಿವಶಂಕರ್, ಗಂಗಾಧರಸ್ವಾಮಿ, ಇನ್ಸ್‌ಪೆಕ್ಟರ್‌ಗಳಾದ ರವಿ ಶಂಕರ್, ದಿವಾಕರ್, ಕೆ.ಆರ್.ಪ್ರಸಾದ್, ಬಿ.ಸತೀಶ, ರಾಘವೇಂದ್ರ, ಗಣಪತಿ ಮತ್ತಿತರರಿದ್ದರು.

ಗೋಲ್ಡನ್ ಅವರ್ ಬಗ್ಗೆ ತಿಳಿದಿರಲಿ...

ಆನ್‌ಲೈನ್ ವಂಚನೆಗೊಳಗಾದ ಗಂಟೆಯೊಳಗೆ(ಗೋಲ್ಡನ್ ಅವರ್) ಹತ್ತಿರದ ಸೈಬರ್ ಕ್ರೈಂ ಪೊಲೀಸ್ ಠಾಣೆ ಅಥವಾ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಿಸಿದರೆ ಕಳೆದು ಕೊಂಡ ಹಣವನ್ನು ವಾಪಸ್ ಪಡೆಯುವ ಸಾಧ್ಯತೆಗಳಿರುತ್ತವೆ. ಹಣ ಕಳೆದು ಕೊಂಡು ಕೂರುವುದಕ್ಕಿಂತ ತಕ್ಷಣ ಎಚ್ಚೆತ್ತು ದೂರು ನೀಡಿದರೆ, ನಿಮ್ಮ ಹಣ ವಂಚಕರ ಕೈ ಸೇರದಂತೆ ತಡೆಯಬಹುದು. ಗೋಲ್ಡನ್ ಅವರ್‌ನಲ್ಲಿ ಸೈಬರ್ ಕ್ರೈಂ ಸಹಾಯವಾಣಿ-1930ಗೆ ಕರೆ ಮಾಡಿ ದೂರು ನೀಡಬಹುದಾಗಿದೆ.

-ರಮೇಶ್ ಬಾನೋತ್,
ನಗರ ಪೊಲೀಸ್ ಆಯುಕ್ತ

ನಕ್ಕರೆ ಅದೇ ಸ್ವರ್ಗ

ಪತ್ನಿ : ಏನೊಂದ್ರೆ ನೀವು ಯಾಕೆ ಈಜು ಕಲೀಲಿಲ್ಲ?
ಪತಿ : ಈಗ ಮಾಡ್ತಿರೋದು ಏನು?
ಪತ್ನಿ : ಎಲ್ರಿ, ಕುರ್ಚಿ ಮೇಲಷ್ಟೆ ಕೂತಿದ್ದೀರಿ
ಪತಿ : ಅಲ್ವೆ, ನಿನ್ನ ಮದುವೆಯಾದ ದಿನದಿಂದ ಸಂಸಾರ ಸಾಗರದಲ್ಲಿ ಈಜುತ್ತಾ ಇಲ್ವಾ?!

ಮೈಸೂರು ಮಿತ್ರ

ಬುಧವಾರ, 28 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಚಿಕ್ಕದು ಎನ್ನುವ ಕೆಲಸಗಳನ್ನು ಈಗಲೇ ಚೆನ್ನಾಗಿ ಮಾಡು. ಆಗ ದೊಡ್ಡ ಕೆಲಸ ತಾನಾಗಿಯೇ ನಿನ್ನನ್ನು ಹುಡುಕಿಕೊಂಡು ಬರುತ್ತದೆ. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಉಂಡವರೇನು ಬಲ್ಲರು ಉಪವಾಸವಿದ್ದವರ ಸುದ್ದಿ

ನಿಮ್ಮ ಪತ್ರಗಳು

ಸಂಸದರ ಆಪಾದನೆ ಪೂರ್ವಾಗ್ರಹ ಪೀಡಿತ

ಮಾನ್ಯರೆ,

ಬೆಂಗಳೂರು–ಮೈಸೂರು ದಶಪಥ ರಸ್ತೆಯ ಒಂದು ಹಂತದ ಕಾಮಗಾರಿ ಈಗಾಗಲೇ ಮುಗಿದಿದೆ. ಮದ್ದೂರಿನಿಂದ, ಬೆಂಗಳೂರಿನವರೆಗಿನ ರಸ್ತೆಯಲ್ಲಿ ವಾಹನಗಳು ಸಂಚಾರ ಮಾಡುತ್ತಿವೆ.

ಪ್ರಯಾಣಿಕರು ತಮ್ಮ ಸಂಚಾರದ ಅನುಭವಗಳನ್ನು ಸೋಷಿಯಲ್ ಮೀಡಿಯಾದಲ್ಲಿ ಬಹಳ ಸಂತೋಷದಿಂದ ಹಂಚಿಕೊಳ್ಳುತ್ತಿದ್ದಾರೆ. ಹಾಗೆಯೇ ಮುಂದಿನ ಕೆಲವು ದಿವಸಗಳಲ್ಲಿ ಮೈಸೂರಿನಿಂದ ಮದ್ದೂರಿನವರೆಗಿನ ಕಾಮಗಾರಿ ಮುಗಿಯುತ್ತದೆ ಎಂದು ಸಂಸದ ಪ್ರತಾಪಸಿಂಹ ಮತ್ತು ಸಂಬಂಧಪಟ್ಟ ಅಧಿಕಾರಿಗಳು ತಿಳಿಸಿದ್ದಾರೆ. ಪರಿಸ್ಥಿತಿ ಹೀಗಿರಬೇಕಾದರೆ, ಮಂಡ್ಯದ ಸಂಸದೆಯಾದ ಶ್ರೀಮತಿ ಸುಮಲತಾ ಅಂಬರೀಷ್ ಅವರು, ದಶಪಥ ರಸ್ತೆ ಅವೈಜ್ಞಾನಿಕವಾಗಿದೆ ಮತ್ತು ಕಳಪೆ ಕಾಮಗಾರಿಯಿಂದ ಕೂಡಿದೆ ಎನ್ನುವುದರಲ್ಲಿ ಏನು ಅರ್ಥವಿದೆ (ಮೈಸೂರು ಮಿತ್ರ 22–12–2022). ರಸ್ತೆ ಕಾಮಗಾರಿ ಮಾಡುವುದಕ್ಕೆ ಮುನ್ನಾ ಅಥವಾ ಕಾಮಗಾರಿ ನಡೆಯುತ್ತಿರಬೇಕಾದಾಗ ಕಾಮಗಾರಿಯನ್ನು ಪರಿಶೀಲಿಸಬೇಕಾಗಿತ್ತು. ಆಗೆಲ್ಲಾ ಸುಮ್ಮನಿದ್ದ ಸಂಸದರು ಇನ್ನೇನು ಕೆಲವೇ ದಿನಗಳಲ್ಲಿ ರಸ್ತೆ ಉದ್ಘಾಟನೆಗೊಂಡು ಸಾರ್ವಜನಿಕರ ಮುಕ್ತ ಸಂಚಾರಕ್ಕಾಗಿ ಅನುವಾಗುತ್ತದೆ. ಈಗ ಸಲ್ಲದ ಆಪಾದನೆಗಳು ಕೇವಲ ಪೂರ್ವಾಗ್ರಹ ಪೀಡಿತವಾಗುತ್ತದೆ. ಕಾರಣ ಸ್ಪಷ್ಟ, ಪ್ರತಾಪಸಿಂಹ ಅವರಿಗೆ ಆ ರಸ್ತೆಯ ಕ್ರೆಡಿಟ್ ಸಲ್ಲುತ್ತದೆ ಎಂಬ ಒಂದೇ ಕಾರಣಕ್ಕೆ ಈಗ ಮಾಡುತ್ತಿರುವ ಆಪಾದನೆಯನ್ನು ಯಾರೂ ಒಪ್ಪಲು ಸಾಧ್ಯವಿಲ್ಲ. ಗುಣಕ್ಕೆ ಮತ್ಸರ ಬೇಡ.

–ಬ್ಯಾಂಕ್ ಶಿವಕುಮಾರ್, ಜೆ ಪಿ ನಗರ, ಮೈಸೂರು.

ಜಮೀರ್ ಹೇಳಿಕೆಗೆ ಕಡಿವಾಣ ಅಗತ್ಯ

ಮಾನ್ಯರೆ,

ಕಾಂಗ್ರೆಸ್ ಹೈಕಮಾಂಡ್ ಇದೆಯೋ ಅಥವಾ ಇಲ್ಲವೋ? ಎನ್ನುವ ಅನುಮಾನ ಆರಂಭವಾಗಿದೆ.

ಇತ್ತೀಚಿನ ದಿನಗಳಲ್ಲಿ ಜಮೀರ್ ಅಹಮ್ಮದ್ ಅವರು ಹೋದ ಕಡೆಯೆಲ್ಲಾ ನೀಡುವ ಹೇಳಿಕೆಗಳನ್ನು ಗಮನಿಸಿದರೆ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ರಾಜ್ಯದ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ಮತ್ತು ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯ ಅವರಿಗೂ ಜಮೀರ್ ಅಹಮ್ಮದ್ ಅವರು ಯಾವಾಗ ಕಾಂಗ್ರೆಸ್ ಹೈಕಮಾಂಡ್ ಆದರೂ ಎಂಬ ಅನುಮಾನ ಮೂಡದೇ ಇರಲು ಸಾಧ್ಯವಿಲ್ಲ. ಮೇಯರ್ ವಾಸು ಎಂದೇ ಮೈಸೂರಿನಲ್ಲಿ ಪ್ರಖ್ಯಾತರಾಗಿ ನಂತರ ಜನಪ್ರಿಯ ಹಾಗೂ ಸಜ್ಜನ, ಸೌಮ್ಯ ಸ್ವಭಾವದ ಶಾಸಕರಾಗಿದ್ದ ವಾಸು ಅವರು ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಕೆಪಿಸಿಸಿ ಅಧ್ಯಕ್ಷರಾಗಿದ್ದವರೇ ಮುಖ್ಯಮಂತ್ರಿಯಾಗುವ ಸಂಪ್ರದಾಯ ಮೊದಲಿನಿಂದಲೂ ಇದೆ ಎಂದು ಹೇಳಿರುವ ಮಾತು ಅಕ್ಷರಶಃ ಸತ್ಯ. ಡಾ. ಜಿ. ಪರಮೇಶ್ವರ್ ಅವರು ರಾಜ್ಯ ಕಾಂಗ್ರೆಸ್ ಅಧ್ಯಕ್ಷರಾಗಿ 8 ವರ್ಷ ಮಾಡಿದ ಸಾಧನೆ ಪರಿಗಣಿಸದೇ ಅರ್ಹತೆಯಲ್ಲಿ ಮುಂದೆ ಇದ್ದರೂ ಚುನಾವಣೆಯಲ್ಲಿ ಗೆದ್ದರೆ ಅವರನ್ನೇ ಮುಖ್ಯಮಂತ್ರಿ ಮಾಡಬೇಕಾಗುತ್ತದೆ ಎಂದು ಕಾಂಗ್ರೆಸ್‌ನವರೇ ಕುತಂತ್ರದಿಂದ ಸೋಲಿಸಿ ಡಾ.ಜಿ. ಪರಮೇಶ್ವರ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಲಿಲ್ಲ ಎಂಬುದು ಪ್ರತಿಯೊಬ್ಬರಿಗೂ ತಿಳಿದ ವಿಷಯ. ಜಮೀರ್ ಅಹಮ್ಮದ್ ಅವರು ನೀಡುವ ಬಾಲಿಶ ಹೇಳಿಕೆಗಳಿಗೆ ಕಡಿವಾಣ ಹಾಕಲು ಕಾಂಗ್ರೆಸ್ ಹೈಕಮಾಂಡ್‌ಗೆ ಸಾಧ್ಯವಾಗದಿದ್ದರೆ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷ ತಕ್ಕ ಬೆಲೆಯನ್ನು ತೆರಬೇಕಾಗುತ್ತದೆ ಎಂಬುವುದರಲ್ಲಿ ಸಂಶಯವೇ ಇಲ್ಲ.

–ಬೆಸಗರಹಳ್ಳಿ ರವಿ ಪ್ರಸಾದ್, ಕೆ ಸಿ ನಗರ, ಮೈಸೂರು

ಶಿಕ್ಷಕರೋ ಅಥವಾ ರಾಕ್ಷಸರೋ

ಮಾನ್ಯರೆ,

ಪಾಠ ಕಲಿಸುವ ಗುರುವನ್ನು ನಮ್ಮಲ್ಲಿ ದೇವರಿಗೆ ಸಮಾನಾಂತರವಾಗಿ ನೋಡುತ್ತೇವೆ. ಆದರೆ ಇತ್ತೀಚಿನ ದಿನಗಳಲ್ಲಿ ರಾಜ್ಯದಾದ್ಯಂತ ನಡೆಯುತ್ತಿರುವ ಕೆಲವು ಘಟನೆಗಳನ್ನು ನೋಡಿದರೆ ಇವರೇನು ಶಿಕ್ಷಕರೋ ಅಥವಾ ರಾಕ್ಷಸರೋ ಎನ್ನುವಂತಹ ಅನುಮಾನ ಬರುತ್ತದೆ.

ಮೊನ್ನೆ ನರಗುಂದ ತಾಲೂಕಿನ "ಹದ್ಲಿ" ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ನಾಲ್ಕನೇ ತರಗತಿಯ ವಿದ್ಯಾರ್ಥಿಯೊಬ್ಬನಿಗೆ ಅದೇ ಶಾಲೆಯ ಶಿಕ್ಷಕನೊಬ್ಬ ಕಬ್ಬಿಣದ ರಾಡುಗಳಿಂದ ಸಾಯುವಂತೆ ಥಳಿಸಿ, ಶಾಲೆಯ ಮಹಡಿಯಿಂದ ಎಸೆಯುವ ಮೂಲಕ ತಾನೊಬ್ಬ ಸಮಾಜಘಾತುಕನೆಂಬುದನ್ನು ತೋರಿಸಿಕೊಟ್ಟಿದ್ದಾನೆ.

ಮತ್ತೊಂದು ಘಟನೆ ಮಂಡ್ಯ ಜಿಲ್ಲೆಯ ವಿದ್ಯಾರ್ಥಿನಿಯರ ಹಾಸ್ಟೆಲ್ ವಾರ್ಡನ್ ಒಬ್ಬ ಲೈಂಗಿಕ ಕಿರುಕುಳ ನೀಡಿದರೆ ಪಾಠ ಕಲಿಯಲು ಹೋದ ಮಕ್ಕಳಿಗೆ ರಕ್ಷಣೆ ಎಲ್ಲಿಂದ ಬರಬೇಕು. ಇನ್ನು ಮುಂದೆ ಶಿಕ್ಷಕರ ಮತ್ತು ವಾರ್ಡನ್ ನೇಮಿಸಿಕೊಳ್ಳುವ ಮುನ್ನ ಅವರ ಕುಟುಂಬದ ಹಿನ್ನೆಲೆ ಮತ್ತು ಮಾನಸಿಕ ಆರೋಗ್ಯ ದೃಢತೆ" ಪತ್ರವನ್ನು ಕಡ್ಡಾಯವಾಗಿ ಹಾಜರುಪಡಿಸಿದಾಗ ಮಾತ್ರ ಇಂತಹ ಘಟನೆಗಳನ್ನು ತಪ್ಪಿಸಬಹುದೇನೋ? ಈ ಬಗ್ಗೆ ಶಿಕ್ಷಣ ತಜ್ಞರು ಚಿಂತಿಸಬೇಕು.

–ಬೂಕನಕೆರೆ ವಿಜೇಂದ್ರ, ಮೈಸೂರು.

ಸೊಗಸಾಗಿ ಮೂಡಿ ಬಂದ ಮಾಯಾಬಜಾರ್

ಮಾನ್ಯರೆ,

ಡಿ. 15ರ ಗುರುವಾರ ರಾತ್ರಿ ಕಲಾಮಂದಿರದಲ್ಲಿ ಪ್ರದರ್ಶನಗೊಂಡ ಮಾಯಾಬಜಾರ್ ನಾಟಕ (ತೆಲುಗು) ಅತ್ಯಂತ ಸೊಗಸಾಗಿ ಮನರಂಜನೆಯಾಗಿ ಮೂಡಿ ಬಂದಿತು. ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ 20– 22ರ ಅಂಗವಾಗಿ ಕೊನೆಯ ದಿನ ಪ್ರದರ್ಶನಗೊಂಡ ಶ್ರೀ ವೆಂಕಟೇಶ್ವರ ಸುರಭಿ ಥಿಯೇಟರ್ ತೆಲಂಗಾಣ ತಂಡ ಅಭಿನಯದ ಮಲ್ಲಾಡಿ ವೆಂಕಟಕೃಷ್ಣರವರ ರಚನೆಯ ಸುರಭಿ ಜಯಚಂದ್ರ ಶರ್ಮ ನಿರ್ದೇಶನದ ಮಾಯಾಬಜಾರ್ ನಾಟಕ ಹಲವಾರು ಆಕರ್ಷಣೆಗಳೊಂದಿಗೆ ನೆರೆದಿದ್ದ ನಾಟಕ ಪ್ರಿಯರನ್ನು ಸೊಗಸಾಗಿ ರಂಜಿಸಿತು. ನಾಟಕದಲ್ಲಿ ಹೀಗೂ ಹಲವಾರು ಚಮತ್ಕಾರಗಳನ್ನು ಪ್ರೇಕ್ಷಕರ ಎದುರೇ ಮಾಡಬಹುದು ಎಂಬುದನ್ನು ತೋರಿಸಿಕೊಟ್ಟರು. ಅತ್ಯುತ್ತಮ ಸೀನರಿಗಳು ಅತ್ಯುತ್ತಮ ವಸ್ತ್ರಾಲಂಕಾರ ಅಭಿನಯಕ್ಕೆ ತಕ್ಕ ಸಂಗೀತ ಎರಡೂವರೆ ವರ್ಷದ ಪುಟ್ಟ ಮಗುವಿನಿಂದ ಹಿಡಿದು 80 ವರ್ಷದ ಹಿರಿಯರತನಕ ಎಲ್ಲಾ ಕಲಾವಿದರ ಅಭಿನಯ ಅಮೋಘ.

ಅಭಿನಯ ಪ್ರೇಕ್ಷಕರನ್ನು ಸೂಜಿಗಲ್ಲಿನಂತೆ ಸೆಳೆಯಿತು. ತೆಲಂಗಾಣ ಕಲಾವಿದರನ್ನು ಮೈಸೂರಿಗೆ ಕರೆಸಿ ಒಂದೊಳ್ಳೆ ನಾಟಕವನ್ನು ವೀಕ್ಷಿಸಲು ಅನುವು ಮಾಡಿಕೊಟ್ಟ ರಂಗಾಯಣದ ಜನಪ್ರಿಯ ನಿರ್ದೇಶಕರಾದ ಅಡ್ಡಂಡ ಸಿ.ಕಾರ್ಯಪ್ಪ ನವರಿಗೆ ಮೈಸೂರು ಜನತೆಯ ರಂಗ ಪ್ರೇಮಿಗಳ ಪರವಾಗಿ ಹೃದಯಪೂರ್ವಕ ಧನ್ಯವಾದಗಳು..

–ಅಹಲ್ಯ.ಸಿ.ನಾ.ಚಂದ್ರ, ಜನತಾನಗರ, ಮೈಸೂರು




ಜೆ.ಬಿ. ರಂಗಸ್ವಾಮಿ
ನಿವೃತ್ತ ಪೊಲೀಸ್ ಅಧಿಕಾರಿ
ಮೊ : 94490–10009

ನೆನಪಿನ ಬುತ್ತಿ

ಡಿಸೆಂಬರ್ 29, ನಾಡಿನ ರಸ ಋಷಿಯ ಜನ್ಮದಿನ. ನಮ್ಮ ರಸಋಷಿಯವರು ನಗೆಯ ಲವಲೇಶವೂ ಇಲ್ಲದ ರಣ ಗಂಭೀರ ವ್ಯಕ್ತಿತ್ವ ಎಂದು ಅನೇಕರ ಕಲ್ಪನೆ. ಲೌಕಿಕ ಜೀವನದಲ್ಲಿ ಕವಿ ಕುವೆಂಪು ಹೇಗಿದ್ದರು ಎಂಬುದಕ್ಕೆ ಈ ಪ್ರಸಂಗಗಳು ಸಾಕ್ಷಿ

ನಾನು ಜಾತಿ ಮತ ಪಂಥಗಳ ಬಿಟ್ಟವನು; ಜಾತಿಯ ಸಂಘದ ಅಧ್ಯಕ್ಷನಾಗಲಾರೆ...!?



ಪ್ರಸಂಗ–ಒಂದು

ಆ ದಿನ ಕುವೆಂಪು ಮನೆಯ ಮುಂದೆ ಆರೇಳು ದೊಡ್ಡ ಕಾರುಗಳು ಬಂದು ನಿಂತವು. ನೋಡಿದರೆ ರಾಜ್ಯ ಒಕ್ಕಲಿಗ ಸಂಘದ ಗೌಡಾದಿಗೌಡ ಮುಖಂಡರು.

ಯಾರನ್ನೇ ಅಧ್ಯಕ್ಷರನ್ನಾಗಿ ಮಾಡಿದರೂ ಇನ್ನಿಲ್ಲದ ಪೈಪೋಟಿ ನಡೆಯುತ್ತಿರುತ್ತೆ. ಅದಕ್ಕೆ ಇಡೀ ಸಂಘದವರು ತಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿದರೆ ಯಾರ ತಕರಾರೂ ಇರೋದಿಲ್ಲವೆಂದು ಒಮ್ಮತದಿಂದ ತೀರ್ಮಾನಿಸಿದ್ದಾರೆ. ತಾವು ಅಧ್ಯಕ್ಷರಾಗ ಬೇಕು ಎಂದು ನೆರೆದ ಮುಖಂಡರು ವಿನಂತಿಸಿದರು.

ತಾನು ಜಾತಿ ಮತ ಪಂಥಗಳನ್ನು ಬಿಟ್ಟವನು. ಮನುಜ ಮತ–ವಿಶ್ವ ಪಥದ ಬಗ್ಗೆ ಮಾತಾಡುತ್ತಿರುವವನು. ಒಂದು ಜಾತಿಯ ಸಂಘದ ಅಧ್ಯಕ್ಷನಾಗಲಾರೆ ಕ್ಷಮಿಸಿ. ನಿಮ್ಮಲ್ಲಿ ಇನ್ನೂ ಉತ್ತಮರು ತುಂಬ ಜನರಿದ್ದಾರೆ. ಅವರನ್ನು ಆಯ್ಕೆ ಮಾಡಿಕೊಳ್ಳಿ ಎಂದು ಕುವೆಂಪು ಪರಿ ಪರಿಯಾಗಿ ವಿನಂತಿಸಿದರು.

ಆದರೆ, ಮುಖಂಡರದೆಲ್ಲಾ ಒಂದೇ ಮಾತು. ಒಂದೇ ಪಟ್ಟು. ಸುದೀರ್ಘವಾಗಿ ಚಿಂತಿಸಿದ ಮೇಲೆಯೇ ನಾವೆಲ್ಲರೂ ಸೇರಿ ಒಮ್ಮತದ ತೀರ್ಮಾನ ಮಾಡಿದ್ದೇವೆ. ಇಲ್ಲೀವರೆಗೆ ನೇಗಿಲು ಹಿಡಿದಿದ್ದ ನಮ್ಮ ಸಮುದಾಯದವರು ಈಗಿನ್ನೂ ವಿದ್ಯೆಯತ್ತ ಮುಖ ಮಾಡಿದ್ದಾರೆ. (1950ರ ದಶಕ). ಅವರಿಗೆ ನಿಮ್ಮಂಥವರ ಮಾರ್ಗದರ್ಶನ ಅತ್ಯಗತ್ಯ. ದಯವಿಟ್ಟು ಒಪ್ಪಿಕೊಳ್ಳಿ.

ಬಿಲ್‌ಕುಲ್ ಸಾಧ್ಯವಿಲ್ಲವೆಂದು ಕುವೆಂಪು ಅಂದಾಗ, ಅನೇಕ ಮುಖಂಡರಿಗೆ, 'ಒಲ್ಲೆ' ಎನ್ನುವ ನೆಪದಲ್ಲಿ ಕುವೆಂಪು ಸ್ಕೋಪ್ ತೆಗೆದುಕೊಳ್ಳುತ್ತಿದ್ದಾರೆ ಅನ್ನಿಸಿತು . ಅದವರ ಭಾವಕ್ಕೆ ತಕ್ಕ ಯೋಚನೆ. ಒಕ್ಕಲಿಗರ ಸಂಘದ ಅಧ್ಯಕ್ಷರಾಗಲು ತುದಿಗಾಲಲ್ಲಿ ನಿಂತಿರುವವರು ಅದೆಷ್ಟು ಜನ, ಅನೇಕರಿಗೆ ಅದು ಜೀವಮಾನದ ಹೆಗ್ಗನಸು. ತಾನಾಗಿ ಒಲಿದು ಬಂದಿರುವ ಅವಕಾಶವನ್ನು ಕೈಬಿಡಬೇಡಿ ಎಂದು ಕೇಳಿಕೊಂಡರು.

ಕುವೆಂಪು ಅವರಿಗೆ ಬೇರೆ ದಾರಿ ತೋರಲಿಲ್ಲ. ಅವರನ್ನು ಮನವೊಲಿಸುವ (convince) ಬಗೆ ಯಾದ್ದೂ ಹೇಗೆ ಎಂಬುದು ತಿಳಿಯಲಿಲ್ಲ ಮನೆಯಲ್ಲಿ ನೇತು ಹಾಕಿದ್ದ ವಿಶ್ವ ಭೂಪಟವನ್ನು ತೋರಿಸಿ, ಇದೆಲ್ಲಾ ನಿಮಗೆ ಗೊತ್ತಿಲ್ಲವೆಂದಲ್ಲ. ಆದರೂ ಒಂದು ಉದಾಹರಣೆಯ ಮೂಲಕ ನನ್ನ ನಿಲುವನ್ನು ಹೇಳ್ತಿದ್ದೀನಿ. ಈ ವಿಶ್ವ ಭೂಪಟದಲ್ಲಿ ನಮ್ಮ ಭಾರತ ಎಷ್ಟು ಚಿಕ್ಕದು ನೋಡಿ. ಅದರಲ್ಲಿ ನಮ್ಮ ಮೈಸೂರು ಸಂಸ್ಥಾನ ಇನ್ನೂ ಪುಟ್ಟದು. ಬೆಂಗಳೂರು ಎಂಬುದು ಚಿಕ್ಕ ಚುಕ್ಕೆ!. ನಿಮ್ಮ ಸಂಘ ಆ ಚುಕ್ಕಿಯೊಳಗೆ ಸೇರಿ ಹೋಗಿರುವ ಅತೀ ಚಿಕ್ಕ ಚುಕ್ಕೆ. ಬರಿಗಣ್ಣಿಗಿರಲಿ ದುರ್ಬೀನು ಹಾಕಿದರೂ ಕಾಣೋದಿಲ್ಲ. ಅದಕ್ಕೆ ನಾನು ಅಧ್ಯಕ್ಷ! ಅದೇ ಅತ್ಯುನ್ನತ ಪರಮ ಪದವಿ ಎಂದು ನಾನು ಭಾವಿಸಿಲ್ಲ. ನಾನು ಎಲ್ಲಾ ಜಾತಿ ಸಮುದಾಯಗಳಿಗೂ ಸೇರಿದವನು. ಬೇರೇನನ್ನೋ ಬರೆಯುತ್ತಿದ್ದೇನೆ ಅದಕ್ಕೆ ಏಕಾಗ್ರತೆಯ ತಪಸ್ಸು ಬೇಕು. ದಯವಿಟ್ಟು ನನ್ನನ್ನು ಬಿಟ್ಟುಕೊಡಿ ಎಂದು ಕೈ ಮುಗಿದರು.

ಪ್ರಸಂಗ–ಎರಡು

ಆ ದಿನದ ಅರ್ಜೆಂಟು ಮೀಟಿಂಗು ಶುರುವಾಗಲು ಹತ್ತೇ ನಿಮಿಷವಿತ್ತು. ಸಹಾಯಕರಾಗಿದ್ದ ಪ್ರಭುಶಂಕರ್, ಯಾರೋ ಮಹಿಳೆ ಬೆಂಗಳೂರಿಂದ ಬಂದಿದ್ದಾರೆ. ತಮ್ಮೊಡನೆ ಮಾತಾಡಬೇಕಂತೆ. ಒಳಗೆ ಕಳಿಸಲೇ ಎಂದರು. ಉಪಕುಲಪತಿ ಕುವೆಂಪು ತಕ್ಷಣ ರೇಗಿದರು. ನನ್ನ ಹತ್ತಿರ ಮಾತಾಡೋದೇನಿದೆ, ಸಮಯವೆಲ್ಲ ವ್ಯರ್ಥ ವ್ಯರ್ಥ. ಮೀಟಿಂಗ್ ಇರೋದನ್ನು ಹೇಳಿ ನೀವೇ ಮಾತಾಡಿ ಕಳಿಸಿಬಿಡಿ ಎಂದರು.

ತಾವೀಗ ಉಪಕುಲಪತಿಗಳು. ಭೇಟಿ ಮಾಡಲು ಯಾರೇ ಬಂದರೂ ಮಾತಾಡಿ ಕಳಿಸಬೇಕು. ಅರ್ಜಿ ಇದ್ರೆ ಕೊಟ್ಟು ಹೋಗ್ತಾರೆ. ಕಳಿಸಲೇ...

ಹ್ಞೂಂ ಆಯ್ತು. ಐದು ಅಂದರೆ ಐದೇ ನಿಮಿಷ ಅಂತ ಹೇಳಿ ಕಳಿಸಿರಿ. ಆ ಮಹಿಳೆ ಉಪಕುಲಪತಿಗಳ ಛೇಂಬರಿಗೆ ಹೋದರು. ಐದಾಯ್ತು... ಹತ್ತಾಯ್ತು... ಅಂತೂ ಮುಕ್ಕಾಲು ಗಂಟೆಯಾದರೂ ಹೊರ ಬರಲಿಲ್ಲ. ಮೀಟಿಂಗಿಗಾಗಿ ಬಂದು ಹೊರಗೆ ಕಾಯುತ್ತಿದ್ದವರೆಲ್ಲ ಚಡಪಡಿಸತೊಡಗಿದರು. ಈ ನಡುವೆ ಪ್ರಭುಶಂಕರ ಅವರು ಎರಡು–ಮೂರು ಬಾರಿ ಹೋಗಿ ಇಣುಕಿ, ಮೀಟಿಂಗ್ ಬಗ್ಗೆ ನೆನಪಿಸಿದ್ದರು. ಓತಪ್ರೋತವಾಗಿ ಮಾತಾಡುತ್ತಿದ್ದ ಆ ಮಹಿಳೆ, ನಲವತ್ತು ನಿಮಿಷವಾದ ಮೇಲೆ ಹೊರ ಬಂದರು.

ಒಳಹೋದ ಪ್ರಭುಶಂಕರ್, ಟೈಮೇ ಇಲ್ಲ. ಐದೆಂದರೆ ಐದೇ ನಿಮಿಷ ಅಂದವರಿಗೆ ಅದೇನು ಮುಕ್ಕಾಲು ಗಂಟೆ ಮಾತಿತ್ತೋ? ಅತ್ಯಂತ ಸಲುಗೆಯಲ್ಲಿ ಪ್ರಶ್ನಿಸಿದರು. ಆ ಕ್ಷಣ ಕುವೆಂಪುರಿಗೆ ತುಟಿಪಿಟಿ. ನಾನೇನೂ ಮಾತಾಡಲಿಲ್ಲ. ಆಡಿದ್ದೆಲ್ಲಾ ಅವರೇ!

ಹೌದೇ? ಅದೇನದು ಅಂತಹ ಆಕರ್ಷಕವಾದ ವಿಷಯ ಮುಕ್ಕಾಲು ಗಂಟೆ ಅವರು ಮಾತಾಡಿದ್ದು. ಇನ್ನೊಂದು ಕೊಂಕು.

ಅವರು ಅಷ್ಟು ಹೊತ್ತು ಮಾತಾಡಿದ್ದನ್ನು ಸಂಕ್ಷಿಪ್ತವಾಗಿ ಎರಡೇ ಎರಡು ಮಾತಿನಲ್ಲಿ ಹೇಳಬೇಕೆಂದರೆ ಸ್ವಪ್ರಶಂಸೆ ಮತ್ತು ಪರನಿಂದೆ ಎಂದರು ಕುವೆಂಪು!

ಪ್ರಸಂಗ–ಮೂರು

ವಿದ್ಯಾರ್ಥಿಗಳು ಉಪ ಕುಲಪತಿಗಳ ಕಚೇರಿ ಮುಂದೆ ವಾರದಿಂದ ಮುಷ್ಕರ ನಡೆಸಿದ್ದರು. ಈ ಕುರಿತು ಪರಿಶೀಲನೆ ನಡೆಸಿದ ನಂತರ ಉಪ ಕುಲಪತಿ, ಅವರ ಬೇಡಿಕೆಗಳಿಗೆ ಅಸ್ತು ಎಂದಿದ್ದರು.

ಅಷ್ಟರಲ್ಲಿ ಉದ್ರಿಕ್ತ ಗುಂಪೊಂದು ಕುವೆಂಪು ಅವರ ಮನೆಗೆ ಹೋಗಿ ಕಿಟಕಿ ಗಾಜನ್ನೆಲ್ಲ ಒಡೆದು , ಹೂ ಗಿಡಗಳ ಕುಂಡಗಳನ್ನು ಕಿತ್ತು ಬಿಸಾಡಿತ್ತು. ವಿಷಯ ತಿಳಿದು ಕುವೆಂಪು ಮನೆಯತ್ತ ಧಾವಿಸಿದರು.ನ್ಯಾಯ ಬೇಕು ಧಿಕ್ಕಾರದ ಘೋಷಣೆ ಮುಗಿಲು ಮುಟ್ಟಿತ್ತು.

ಕಾರಿಂದ ಇಳಿದ ಕುವೆಂಪು ಆಗಿರುವ ಅನಾಹುತವನ್ನು ಮೌನವಾಗಿ ನೋಡಿದರು. ಆರಡಿ ಎತ್ತರದ ದೃಢಕಾಯ ಮನುಷ್ಯ. ಏನೊಂದೂ ಮಾತಾಡಲಿಲ್ಲ. ವಿದ್ಯಾರ್ಥಿಗಳೂ ಸ್ತಬ್ಧರಾಗಿ ಅವರನ್ನೇ ನೋಡುತ್ತಿದ್ದರು.

ಮನೆಯೊಳಗೆ ಹೋಗಿ ಕಾಗದ ಹಿಡಿದು ಹೊರಬಂದರು. ನ್ಯಾಯ ಬೇಕು... ಕೂಗು ಮತ್ತೆ ಶುರುವಾಯಿತು. ಗುಂಪಿನೆದುರು ನಿಂತ ಕುವೆಂಪು, ನಿಮ್ಮ ಬೇಡಿಕೆಗಳ ಬಗ್ಗೆ ವಿಚಾರಣೆ ನಡೆಸಿ ಈ ದಿನ ವಿವಿ ನಿಲಯ ಒಪ್ಪಿಗೆ ಕೊಟ್ಟಿದೆ. ನಿಮಗೆ ನ್ಯಾಯ ಸಿಕ್ಕಿದೆ ಎಂದು ಸಭಾ ನಿರ್ಣಯವನ್ನು ಓದಿದರು.

ವಿದ್ಯಾರ್ಥಿಗಳು ಹರ್ಷೋದ್ಗಾರ ಮಾಡಿ ಚಪ್ಪಾಳೆ ತಟ್ಟಿದರು. ಶಾಂತಿ ಶಾಂತಿ ಎಂದು ಕೈ ಬೀಸಿದ ಕುವೆಂಪು ಅಂದರು. ನ್ಯಾಯ ಬೇಕು ಎಂದ ನಿಮಗೇನೋ ನ್ಯಾಯ ಸಿಕ್ಕಿದೆ. ಆದರೆ ಕಿತ್ತು ಹೋಗಿರುವ ಗಿಡ ಬಳ್ಳಿಗಳಿಗೆ , ಸತ್ತು ಮಣ್ಣಲ್ಲಿ ಹೊಸಕಿ ಹೋಗಿರುವ ಹೂವುಗಳಿಗೆ ನ್ಯಾಯ ಕೊಡುವವರು ಯಾರು ನೀವೇ ಹೇಳಿ!

ಪ್ರಸಂಗ–ನಾಲ್ಕು

ಶ್ರೀರಂಗಪಟ್ಟಣದ ಕಾಲೇಜು ವಿದ್ಯಾರ್ಥಿಗಳನ್ನುದ್ದೇಶಿಸಿ ಕುವೆಂಪು ಭಾಷಣ ಮಾಡಿದ್ದರು. ಓದುವ ಸಮಯದಲ್ಲಿ ನಿಮ್ಮ ಮನಸ್ಸು ಅತ್ತಿತ್ತ ಚಲಿಸದಿರಲಿ.ಚಂಚಲವಾಗದಿರಲಿ. ಆತ್ಮಶ್ರೀಗಾಗಿ ನೀವು ನಿರಂಕುಶಮತಿಗಳಾಗಬೇಕು. ತಪಸ್ವಿಯಂತಿರಬೇಕು. ಕಾಲೇಜಿನ ಯಾವುದೋ ನಾಟಕದ ಸಿಂಹಾಸನಕ್ಕಾಗಿ ಹೊಡೆದಾಡಿಕೊಂಡು ನಿಮ್ಮ ಸಮಯ ವ್ಯರ್ಥ ಮಾಡಬೇಡಿ... ಇತ್ಯಾದಿ ಭಾಷಣ ಮಾಡಿದ್ದರು.

ಕುವೆಂಪು ಏನೇ ಮಾತಾಡಲಿ ಅದನ್ನು ಟೀಕಿಸಿ ದೊಡ್ಡ ಹಗರಣ ಮಾಡುವ ದೊಡ್ಡ ಗುಂಪೇ ಆಗ ಇತ್ತು. ವಿದ್ಯಾರ್ಥಿಗಳನ್ನು ದಾರಿ ತಪ್ಪಿಸುವ ರೀತಿಯಲ್ಲಿ ಪುಟ್ಟಪ್ಪ ಮಾತಾಡಿದ್ದಾರೆಂದು ಉಪಕುಲಪತಿಗಳಿಗೆ ದೂರು ಹೋಯಿತು. ಅದರ ವಿಚಾರಣೆಯನ್ನು ಪ್ರೊ. ತಳುಕಿನ ವೆಂಕಣ್ಣಯ್ಯನವರಿಗೆ ವಹಿಸಿದರು. ವಿಚಾರಣೆ ನಡೆಸಿದ ವೆಂಕಣ್ಣಯ್ಯನವರು ಬರೆದ ಷರಾ ಹೀಗಿತ್ತು:

ನನ್ನ ತಮ್ಮನಿಗೇ ಬುದ್ಧಿ ಮಾತು ಹೇಳಬೇಕು ಎಂದಿದ್ದರೆ, ಇದಕ್ಕಿಂತ ಚೆನ್ನಾಗಿ ನಾನೂ ಹೇಳಲಾಗುತ್ತಿರಲಿಲ್ಲ!.

ಪ್ರಸಂಗ–ಐದು

ಇದು ಮಾತ್ರ ನನ್ನದೇ!

ಕಾಲೇಜು ವಾರ್ಷಿಕೋತ್ಸವಕ್ಕೆ ಯಾರನ್ನು ಕರೆಸೋದು, ಯಾರನ್ನು ಕರೆಸಿದರೆ ಉತ್ತಮ, ಈ ಬಾರಿ ಅತ್ಯಂತ ಪ್ರಭಾವಿಗಳನ್ನು ಕರೆಸೋಣ. ರಾಷ್ಟ್ರಕವಿ ಕುವೆಂಪು ಅಲ್ಲದೆ ಮತ್ತಾರು ಯೋಗ್ಯರು. ಅವರು ವೈಸ್ ಛಾನ್ಸಲರ್ ಆಗಿದ್ದಾಗಲೇ ಹಾಸನ ಕಾಲೇಜು ಶುರುವಾಗಿದ್ದು, ಅವರನ್ನೇ ಕರೆಸೋಣ. ಈ ಬಾರಿ ಉತ್ತಮ ಟೀಮ್ ಎಲೆಕ್ಟ್ ಆಗಿದೆ. ಇಬ್ಬರು ರ್‍ಯಾಂಕ್ ಬಂದಿದ್ದಾರೆ.ಈ ಬಾರಿ ಅವರೇ ಎಂದು ಒಕ್ಕೊರಲಿನ ತೀರ್ಮಾನವಾಯಿತು.

ಅದು 1972ನೇ ಇಸವಿ. ಆ ವೇಳೆಗೆ ಹಾಸನದ ಕಾಲೇಜು ಸುಸಜ್ಜಿತಗೊಂಡಿತ್ತು. ಕಾಲೇಜಿನ ಮುಂಭಾಗವಿದ್ದ ಕಿ.ಮೀ. ಉದ್ದ, ಎಪ್ಪತ್ತಡಿ ಆಳದ ದೊಡ್ಡ ಕೊರಕಲು ದೊಗರುಗುಂಡಿಯನ್ನು ಆ ಕಾಲಕ್ಕೇ ಲಕ್ಷಾಂತರ ಖರ್ಚು ಮಾಡಿ ಮುಚ್ಚಿಸಿದ್ದರು. ಹಾಸನ ಕಂಡರಿಯದ ದೊಡ್ಡ ಬುಲ್ಡೋಜರ್‌ಗಳು, ಸ್ಟೀಪರ್‌ಗಳು ತಿಂಗಳುಗಟ್ಟಲೇ ದುಡಿದಿದ್ದವು. ಸುಣ್ಣ ಬಣ್ಣ ಹೊಡೆಸಿದ್ದರು. ಇಡೀ ಕಾಲೇಜು ಆವರಣ ಸಮತಟ್ಟಾದ ಮೈದಾನವಾಗಿ ಕಂಗೊಳಿಸುತ್ತಿತ್ತು. ಪ್ರಾಧ್ಯಾಪಕರಾದ ರಾಮಚಂದ್ರಶೆಟ್ಟರು, ರಾಮಲಿಂಗಪ್ಪನವರು, ಗಣಿತದ ಪ್ರೊ.ರಾಜಶೇಖರ್ ಮತ್ತು ವಿದ್ಯಾರ್ಥಿ ಸಂಘದ ಇಬ್ಬರು ಹೋಗಿ ಆಹ್ವಾನಿಸುವುದು ಎಂದಾಯಿತು.

ಬಾಡಿಗೆ ಕಾರಲ್ಲಿ ಎಲ್ಲ ಹೊರಟೆವು. ವಿದ್ಯಾರ್ಥಿಗಳಾದ ನಮಗಂತೂ ಕಾರು ಪಯಣ ಅಪರೂಪದ ಹಬ್ಬ. ಬೀಗುತ್ತ, ಅಧ್ಯಾಪಕರ ಮಾತುಗಳನ್ನು ಕೇಳಿಸಿಕೊಳ್ಳುತ್ತಾ ವಿಸ್ಮಯದಿಂದ ಸಾಗಿದೆವು. ಕ್ರಾಫರ್ಡ್ ಹಾಲ್‌ನಲ್ಲಿ ಕಾಲೇಜಿನ ಬೇರೊಂದು ಕೆಲಸವಿತ್ತು, ಮೊದಲಿಗೆ ಕುಲಪತಿ ದೇಜಗೌ ಕಚೇರಿಯ ಭೇಟಿ. ಅಧ್ಯಾಪಕರೊಂದಿಗೆ ಅವರು ಅತ್ಯಂತ ಹಾರ್ದಿಕವಾಗಿ ಮಾತಾಡಿದರು. ಅಧ್ಯಾಪಕರೆಲ್ಲ ಬುಷ್ ಷರಟು ಪ್ಯಾಂಟಿನ ಸರಳರು. ನನ್ನದೂ ಅದೇ ಉಡುಪು. ನಮ್ಮ ವಿದ್ಯಾರ್ಥಿ ಸಂಘದ ಅಧ್ಯಕ್ಷನಂತೂ ಫುಲ್ ಸೂಟು, ಬೂಟು, ಟೈ ಕಟ್ಟಿಕೊಂಡು ಸರ್ವಾಲಂಕಾರ ಭೂಷಿತನಾಗಿದ್ದ. ಅದ್ಯಾರು ಸೆಲೆಕ್ಟ್ ಮಾಡಿದ್ದರೋ! ಹಳದಿ ಸಾಸಿವೆ ಬಣ್ಣದ ಸೂಟಿಗೆ ಕೆಂಪು ಟೈ!! ಕುಲಪತಿಗಳ ಗಮನ ಸೆಳೆಯಿತು ಅನ್ನಿಸುತ್ತೆ. ಅವನನ್ನು ವಿಶೇಷವಾಗಿ ವಿಶ್ವಾಸದಿಂದ ಮಾತಾಡಿಸಿದರು. ಮಾತು ಮುಗಿಯಿತು. ಕೈಮುಗಿದು ಹೊರ ಬಂದೆವು.

ಕುಲಪತಿಗಳಿಗೆ ಬೇರೇನೋ ಕೆಲಸವಿತ್ತೇನೋ. ಅವರೂ ನಮ್ಮ ಹಿಂದೆಯೇ ಹೊರಬಂದರು. ನಾವೂ ಪಕ್ಕಕ್ಕೆ ನಿಂತೆವು. ಈಗಲೇ ಕುವೆಂಪು ಅವರ ಮನೆಗೆ ಹೋಗ್ತೀರಾ... ಅವರು ಕೇಳಿದರು. ನಮ್ಮ ಅಧ್ಯಕ್ಷನ ಭುಜ ತಟ್ಟಿ ಎಲ್ಲರೂ ಚೆನ್ನಾಗಿ ಕೆಲಸ ಮಾಡಿ ಎಂದಂದು ನಡೆದರು.

ನಮ್ಮ ಅಧ್ಯಕ್ಷನಿಗೋ ಅರ್ಜೆಂಟು. ಈ ದೇಜಗೌ ಮಗಳು ಏನು ಓದ್ತಿದ್ದಾರೆ ಎಂದು ಕಿವಿಯಲ್ಲಿ ಕೇಳಿದ. ನಂಗೇನು ಗೊತ್ತು ಎಂದು ತಲೆಯಾಡಿಸಿದೆ.

ಕುವೆಂಪು ಮನೆಯತ್ತ ಕಾರು ಓಡುತ್ತಿತ್ತು. ಮನಸ್ಸಲ್ಲೇ ಮಂಡಿಗೆ ತಿನ್ನುತ್ತಿದ್ದವನು ಕಿವಿಯಲ್ಲಿ ಏನೋ ಉಸುರಿದ. ಕೇಳಲಿಲ್ಲ ಎಂಬಂತೆ ತಲೆಯಾಡಿಸಿದೆ. ಲೇ ಕೆಪ್ಪಾ, ಗಂಡು ವುಡುಕ್ತಾವರಂತೆ ಗೊತ್ತಾ!

ಗೊತ್ತಿಲ್ಲ ಎಂದೆ. ಅಧ್ಯಕ್ಷಗಿರಿ ಅಲ್ಪನಿಗೆ ಬಂದಿದ್ದ ಐಶ್ವರ್ಯ. ಚುನಾವಣೆ ಗೆದ್ದಾಗಿನಿಂದ ತಲೆಯಲ್ಲೇ ತೊಪ್ಪೆನ್ನುತ್ತಿದ್ದ. ಆರೇಳು ಸ್ಟ್ರೈಕ್ ಮಾಡಿಸಿ ವೀರನಂತೆ ಬೀಗುತ್ತಿದ್ದ. ಕುಲಪತಿಗಳು ಸೌಜನ್ಯಕ್ಕೆ ಅಂತೇನೋ ಹೆಗಲ ಮೇಲೆ ಕೈಹಾಕಿ ಮಾತಾಡಿಸಿದರೆ, ಇವನಾಗಲೇ ನೆಂಟಸ್ತಿಕೆಗೇ ಹೊಂಟವನೆ ಭೂಪ!

ಕುವೆಂಪು ಅವರು ಅನಾರೋಗ್ಯದ ಕಾರಣ ಹೇಳಿ ಬರಲಾಗುತ್ತಿಲ್ಲ ಎಂದರು. ಹಾಸನದ ಕಾಲೇಜನ್ನು ತಾವೇ ಪ್ರಾರಂಭಿಸಿದ ದಿನಗಳನ್ನು ನೆನೆದು, ಆಗ ಒಂದೆರಡು ಜಾತಿ ಹಾಸ್ಟೆಲ್‌ಗಳಿದ್ದವು. ದೂರದಿಂದ ಬರೋ ಹುಡುಗರು ಏನು ಮಾಡ್ಬೇಕು. ಇಡೀ ದಿನಕ್ಕೆ ಒಂದು ಬಸ್ಸು ಬಂದರೆ ಹೆಚ್ಚು, ಊರಿನ ಪ್ರಮುಖರನ್ನೆಲ್ಲಾ ಸಭೆ ಕರೆದು ನಿಮ್ಮ ಮನೆಗಳಲ್ಲಿರೋ ಒಪ್ಪಾರನ್ನು (ಮುಖ್ಯ ಮನೆಗೆ ಅಂಟಿಕೊಂಡಂತೆ ಇರುವ ಇಳಿಜಾರಿನ ಉದ್ದ ಕೊಠಡಿ.ಮನೆ ವಾತಾವರಣ ಸರಿಯಾಗದ ಹಿರಿಯರು ಅಲ್ಲಿ ಪ್ರತ್ಯೇಕವಾಗಿ ಇರುತ್ತಿದ್ದರು.) ಓದೋ ಹುಡುಗರಿಗೆ ಬಿಟ್ಟುಕೊಡಿ ಅಂತ ಕೇಳಿಕೊಂಡೆ. ಜನ ಒಪ್ಪೋದಿಲ್ಲವೇನೋ ಅಂದುಕೊಂಡಿದ್ದೆ, ಅಂತಹ ಮನೆಗಳನ್ನು ಬಿಟ್ಟುಕೊಟ್ಟಿದ್ದಷ್ಟೇ ಅಲ್ಲ, ಪ್ರತಿಯೊಬ್ಬರೂ ಅವರವರ ಮನೆಯ ಜಗಲಿಗಳನ್ನು ಒಡೆಸಿ ರೂಮುಗಳನ್ನು ಮಾಡಿಸಿದರಂತೆ. ವಿದ್ಯಾದಾನ ಪುಣ್ಯದ ಕೆಲಸ ಎಂದು ತುಂಬ ಜನ ಬಾಡಿಗೆಯನ್ನೇ ತೆಗೆದುಕೊಳ್ಳುತ್ತಿರಲಿಲ್ಲವಂತೆ. ಕೇಳಿ ನನಗೆ ತುಂಬಾ ಸಂತೋಷವಾಯಿತು. ನಿಮ್ಮ ಊರು ಹಾಸನ ಉದಾರಿಗಳ, ಧರ್ಮಾತ್ಮರ ಊರು. ಒಂದು ದಿನ ಹೋಗಿ ಇದ್ದು ಬರಬೇಕು.

ನಮಗಂತೂ ಆಶ್ಚರ್ಯ. ಕುವೆಂಪು ಯಾರ ಹತ್ರಾನೂ ಮಾತಾಡೋದೇ ಇಲ್ವಂತೆ. ಮೂಡಿಯಂತೆ. ಜನರನ್ನು ಕಂಡ್ರೆ ಅವರಿಗೆ ಆಗೋದಿಲ್ವಂತೆ ಇತ್ಯಾದಿ ಕಥೆಗಳು ಹರಡಿದ್ದವು. ನಾವು ಕಂಡ ಕುವೆಂಪು ತುಂಬ ಸಜ್ಜನಿಕೆಯ ಸಹಜ ವ್ಯಕ್ತಿ ಅನ್ನಿಸಿತು. ಮಾತು ಕೊಂಚ ಅಸ್ಪಷ್ಟ ಅನ್ನೋದು ಬಿಟ್ಟರೆ ಯಾವುದೇ ಅಹಂ ಇಲ್ಲದೆ ಮಾತಾಡಿದರು. ಒಮ್ಮೆ ನಕ್ಕರೂ ಕೂಡ.

ಅವರಾಡುವ ಮಾತುಗಳನ್ನು ಎಚ್ಚರಿಕೆಯಿಂದ ಕೇಳಿಸಿಕೊಳ್ಳುತ್ತ ನಾವೆಲ್ಲರೂ ಮೌನವಾಗಿ ಕುಳಿತಿದ್ದೆವು. ಕುವೆಂಪು ಮಾತು ನಿಲ್ಲಿಸಿದರು. ನಮ್ಮ ಅಧ್ಯಕ್ಷ, ನಾವೆಲ್ಲಾ ತುಂಬಾ ಆಸೆ ಇಟ್ಕೊಂಡಿದ್ದೇವೆ. ನೀವು ಆಸನಕ್ಕೆ ಬರ್ಲೆ ಬೇಕು. ವುಡುಗ್ರೆಲ್ಲಾ ನೀವು ಬತ್ತೀರಾ ಅಂತ ಆಸೆಯಾಗವ್ರೆ ಎಂದು ಕೇಳಿಕೊಂಡ.

ತಲೆಯಾಡಿಸಿದ ಕುವೆಂಪು, ಆರೋಗ್ಯ ಸರಿಯಿಲ್ಲ. ನಾನೆಲ್ಲೂ ಹೊರಗಡೆ ಹೋಗ್ತಾ ಇಲ್ಲ ಎಂದರು.

ಅಧ್ಯಕ್ಷನಿಗೆ ಏನನ್ನಿಸಿತೋ, ಬೇಕಾದ್ರೆ ದೇಜಗೌ ಕೈಲೂ ಹೇಳಿಸ್ತೀವಿ. ನೀವು ಒಪ್ಪಾಬೇಕು ಅಂದೇ ಬಿಟ್ಟ

ಆಯ್ತು. ಇರಲಿ ಬಿಡಿ ಎಂದು ನಿರ್ವಿಕಾರ ದನಿಯಲ್ಲಿ ಕುವೆಂಪು ಅಂದರು.

ನಮ್ಮ ಅಧ್ಯಾಪಕರೆಲ್ಲ ದಢ ದಢ ಎದ್ದು ಕುವೆಂಪು ಅವರಿಗೆ ಕೈಮುಗಿದರು. ಇನ್ನೊಂದು ಕ್ಷಣ ಅಲ್ಲಿದ್ದರೂ ರಸಾವ್ಯಾಪ ಮುಕ್ತಾಫಲ ಉದುರುತ್ತವೆಯೋ?! ಕಾರು ಹೋಟೆಲ್ ತಲುಪಿತು. ಮುಂದಿನ ಗೆಸ್ಟ್ ತರಾಸು ಎಂದಾಯಿತು.

ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಎಚ್.ಆರ್.ಲೀಲಾವತಿ, ಡಾ.ವಸುಂಧರಾ ದೊರೆಸ್ವಾಮಿಗೆ ಸನ್ಮಾನ

ಮೈಸೂರು, ಡಿ.27(ಎಸ್‌ಪಿಎನ್)– ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಗೆ ಆಯ್ಕೆಯಾಗಿರುವ ಸುಗಮ ಸಂಗೀತ ಕ್ಷೇತ್ರದ ಮೈಸೂರಿನ ಹಿರಿಯ ಕಲಾವಿದರಾದ ಎಚ್.ಆರ್.ಲೀಲಾವತಿ, ಭರತನಾಟ್ಯ ಕ್ಷೇತ್ರದ ಡಾ.ವಸುಂಧರಾ ದೊರೆಸ್ವಾಮಿ ಅವರನ್ನು ಮಂಗಳವಾರ ಸನ್ಮಾನಿಸಲಾಯಿತು.



ಮೈಸೂರು ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಕಲಾ ಸಂದೇಶ ಪ್ರತಿಷ್ಠಾನ, ಮೈಸೂರು ಬ್ರಹ್ಮವಿದ್ಯಾ ಸಂಸ್ಥೆ ಹಾಗೂ ಅಮೇರಿಕಾದ ವೀಣಾ ವಿಶ್ವೇಶ್ವರನ್ ಅಂತಾರಾಷ್ಟ್ರೀಯ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರನ್ನು ನವದೆಹಲಿಯ ಎಸ್‌ಎನ್‌ಎ ಸದಸ್ಯೆ ಡಾ.ನಾಗಮಣಿ ಶ್ರೀನಾಥ್ ಸನ್ಮಾನಿಸಿ, ಅವರು ಮಾತನಾಡಿದರು.

ಕಳೆದ 70 ವರ್ಷಗಳಿಂದ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡು ಕಲಾಕ್ಷೇತ್ರದಲ್ಲಿ ಸಾಧನೆ ಮಾಡಿರುವ ಅನೇಕ ಕಲಾವಿದರ ಪರಿಚಯ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಅಕಾಡೆಮಿಗಳ ಆಯ್ಕೆ ಸಮಿತಿಯಲ್ಲಿರುವ ಸದಸ್ಯರಿಗೆ ಪರಿಚಯವೇ ಇಲ್ಲ. ಹಾಗಾಗಿ ವಿವಿಧ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ಹಿರಿಯ ಕಲಾವಿದರು ತಮ್ಮ ವ್ಯಕ್ತಿ ಜೀವನದ ಸಾಧನಾ ಪಟ್ಟಿಯನ್ನು ದಾಖಲಾತಿ ಮಾಡಿಟ್ಟುಕೊಂಡು ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಅಕಾಡೆಮಿಗಳಿಂದ ಪ್ರತಿ ವರ್ಷ ಕೊಡಮಾಡುವ ಪ್ರಶಸ್ತಿಗಳಿಗೆ ಸೂಕ್ತ ದಾಖಲಾತಿಗಳನ್ನು ಸಲ್ಲಿಸಬೇಕು. ಆಗ ಮಾತ್ರ ಪ್ರಶಸ್ತಿಗೆ ಪರಿಗಣಿಸಲು ಮನಸ್ಸು ಮಾಡುತ್ತಾರೆ. ಇದು ಈಗಿನ ವ್ಯವಸ್ಥೆ ಎಂದು ತಿಳಿಸಿದರು. ಇಲ್ಲಿಯವರೆಗೆ ಸಂಗೀತ ನಾಟಕ ಅಕಾಡೆಮಿಯಿಂದ ನೀಡುವ ಪ್ರಶಸ್ತಿಗೆ ಆಯ್ಕೆಯಾಗಲು ದಾಖಲೆ ಸಹಿತ ಅರ್ಜಿ ಸಲ್ಲಿಸಬೇಕು. ಇಲ್ಲದಿದ್ದರೆ ನೀವು ಎಷ್ಟೇ ದೊಡ್ಡ ಕಲಾವಿದರಾದರೂ ಪ್ರಶಸ್ತಿಗೆ ಆಯ್ಕೆಯಾಗುವುದಿಲ್ಲ. ಆಯ್ಕೆ ಸಮಿತಿ ಸದಸ್ಯೆಯಾಗಿರುವ ನನಗೆ ಈ ಅಂಶ ತಿಳಿದಿದೆ. ನಿಮಗೆ ಬೇಕಿಲ್ಲದಿದ್ದರೂ ಪ್ರಶಸ್ತಿ ಹಿಡಿಯಲು ದಾಖಲಾತಿ ಸಲ್ಲಿಸುವುದು ಅನಿವಾರ್ಯ. ಎಷ್ಟೇ ಹಿರಿಯ ಕಲಾವಿದರಾದರೂ ತಮ್ಮ ವ್ಯಕ್ತಿ ಜೀವನದ ಬಗ್ಗೆ ದಾಖಲಾತಿ ಇಲ್ಲದಿದ್ದರೆ ಪ್ರಶಸ್ತಿಗೆ ಆಯ್ಕೆ ಮಾಡುವುದು ಕಠಿಣ ಎಂದು ತಿಳಿಸಿದರು.

ಈಗಿನ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಆಯ್ಕೆ ಸಮಿತಿಯಲ್ಲಿ 70 ಮಂದಿ ವಿವಿಧ ಕ್ಷೇತ್ರದ ವಿವಿಧ ರಾಜ್ಯದ ಸಾಧಕರಿದ್ದಾರೆ. ಅವರಿಗೆ ಬೇರೆ ರಾಜ್ಯದ ಸಾಧಕರ ಬಗ್ಗೆ ತಿಳಿದಿರುವುದಿಲ್ಲ. ನಾವು ಸಾಧಕರ ಬಗ್ಗೆ ಪ್ರಶಸ್ತಿ ಸಮಿತಿಯಲ್ಲಿ ಪ್ರಸ್ತಾಪಿಸುವಾಗ ನಮ್ಮ ಬಳಿ ದಾಖಲೆ ಇಲ್ಲದಿದ್ದರೆ ಶಿಫಾರಸ್ಸು ಮಾಡಿದವರ ಹೆಸರನ್ನು ಸಮರ್ಥಿಸಿಕೊಳ್ಳುವುದು ಕಷ್ಟ ಎಂದರು.

ಈ ವೇಳೆ ವೀಣಾ ವಿದ್ವಾಂಸರಾದ ವೀಣಾ ಆರ್.ವಿಶ್ವೇಶ್ವರನ್, ಹಿರಿಯ ಕಲಾವಿದೆ ಕೃಷ್ಣಾಕುಮಾರಿ, ಬ್ರಹ್ಮ ವಿದ್ಯಾ ಡಾ.ರಾ.ಸ.ನಂದಕುಮಾರ್, ಕಲಾ ಸಂದೇಶ ಪ್ರತಿಷ್ಠಾನದ ಸಂದೇಶ್ ಭಾರ್ಗವ್, ವೀಣಾ ವಿಶ್ವೇಶ್ವರನ್ ಅಂತಾರಾಷ್ಟ್ರೀಯ ಪ್ರತಿಷ್ಠಾನದ ಕಾರ್ತಿಕ್ ವಿಶ್ವೇಶ್ವರನ್ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಯಶಸ್ವಿನಿಗೆ 30 ಲಕ್ಷ ಸದಸ್ಯರ ನೋಂದಣಿ ಗುರಿ

- ಅವಶ್ಯವಿದ್ದರೆ ನೋಂದಣಿ ಅವಧಿ ವಿಸ್ತರಣೆ
- ಸಹಕಾರ ಸಚಿವ ಸೋಮಶೇಖರ್ ಮಾಹಿತಿ



ಬೆಂಗಳೂರು, ಡಿ.27(ಕೆಎಂಶಿ)-ಯಶಸ್ವಿನಿ ಯೋಜನೆಯಡಿ ಸಹಕಾರ ಸಂಘಗಳ 30 ಲಕ್ಷ ಸದಸ್ಯರನ್ನು ನೋಂದಾವಣಿ ಮಾಡುವ ಗುರಿ ಇದೆ. ಗುರಿ ತಲುಪದೇ ಇದ್ದಲ್ಲಿ ನೋಂದಣಿ ಅವಧಿಯನ್ನು ವಿಸ್ತರಣೆ ಮಾಡುವ ಕುರಿತು ಪರಿಶೀಲನೆ ನಡೆಸುವುದಾಗಿ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ವಿಧಾನಪರಿಷತ್ತಿನಲ್ಲಿ ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಸಿ.ಎನ್.ಮಂಜೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಗ್ರಾಮೀಣ ಭಾಗದಲ್ಲಿ ರೈತರು ಒಂದಲ್ಲ ಒಂದು ಸಹಕಾರ ಸಂಘದಲ್ಲಿ ಸದಸ್ಯರಾಗಿರುತ್ತಾರೆ. 30 ಸಾವಿರಕ್ಕಿಂತ ಹೆಚ್ಚಿನ ವೇತನ ಪಡೆಯುವ ನೌಕರರಿದ್ದರೆ ಅನ್ವಯವಾಗುತ್ತಿರಲಿಲ್ಲ. ನಿಯಮ ತಿದ್ದುಪಡಿ ಮಾಡಿ ಸರಿಪಡಿಸಲಾಗಿದೆ ಎಂದರು.

ಯೋಜನೆಯಡಿ ಒಟ್ಟು 30 ಲಕ್ಷ ಸದಸ್ಯರನ್ನು ನೋಂದಣಿ ಮಾಡುವ ಗುರಿಯಿದೆ. ನಿನ್ನೆಯವರೆಗೂ 19,67,287 ಮಂದಿ ಸದಸ್ಯರಾಗಿದ್ದಾರೆ. ನವೆಂಬರ್‌ನಿಂದ ನೋಂದಣಿ ಆರಂಭವಾಗಿದೆ. ಡಿ.31ರವರೆಗೆ ಕಾಲಾವಕಾಶವಿದೆ. ಅವಧಿ ವಿಸ್ತರಣೆ ಕುರಿತು ಪರಿಶೀಲಿಸಲು ಇನ್ನೂ ಸಮಯವಿದೆ. 30 ಲಕ್ಷ ಗುರಿ ತಲುಪದಿದ್ದರೆ ಯೋಜನೆಗಾಗಿ ರಚಿಸಿರುವ ಸಮಿತಿ ಅವಧಿ ವಿಸ್ತರಣೆ ಮಾಡಲು ಚರ್ಚಿಸಿ ನಿರ್ಧರಿಸಲಾಗುತ್ತದೆ. ಸರ್ಕಾರ ಅದಕ್ಕೆ ಪೂರಕವಾಗಿ ಸ್ಪಷ್ಟ ಸೂಚನೆ ನೀಡಲಿದೆ ಎಂದರು. ಈ ಯೋಜನೆಯನ್ನು ಸಹಕಾರ ಸಂಘಗಳ ಸದಸ್ಯರೆಲ್ಲರಿಗೂ ವಿಸ್ತರಣೆ ಮಾಡಲು ಸಾಧ್ಯವಿಲ್ಲ. ಯೋಜನೆಯಡಿ ಸದಸ್ಯರಿಗೆ ಉಚಿತ ಚಿಕಿತ್ಸೆ ನೀಡಲು 660 ಆಸ್ಪತ್ರೆಗಳನ್ನು ಸಂಪರ್ಕಿಸಲಾಗಿದೆ. 330 ಆಸ್ಪತ್ರೆಗಳ ಜೊತೆ ಈಗಾಗಲೇ ಒಪ್ಪಂದವಾಗಿದೆ. ಮತ್ತಷ್ಟು ಆಸ್ಪತ್ರೆಗಳ ಜೊತೆ ಒಪ್ಪಂದವಾಗಲಿದೆ ಎಂದರು.

ಕೈಗಾರಿಕಾ ಪ್ರದೇಶದಲ್ಲಿ ಸಂಗ್ರಹವಾಗುವ ಆದಾಯದಲ್ಲಿ ಶೇ.30 ಸ್ಥಳೀಯ ಅಭಿವೃದ್ಧಿಗೆ ಬಳಕೆ

ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಮಾಹಿತಿ



ಬೆಂಗಳೂರು,ಡಿ.27(ಕೆಎಂಶಿ)-ಕೈಗಾರಿಕಾ ಪ್ರದೇಶಗಳಲ್ಲಿ ಸಂಗ್ರಹವಾಗುವ ಆದಾಯದಲ್ಲಿ ಶೇ.30ರಷ್ಟನ್ನು ಸ್ಥಳೀಯ ಅಭಿವೃದ್ಧಿಗೆ ಬಳಸಿಕೊಳ್ಳಲು ಅನುಕೂಲವಾಗುವಂತೆ ವಿಶೇಷ ಹೂಡಿಕೆ ವಲಯ ರಚನೆ ಮಾಡಲಾಗುತ್ತಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ವಿಧಾನಪರಿಷತ್‌ಗೆ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಯು.ಬಿ.ವೆಂಕಟೇಶ್ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ವಿಶೇಷ ಹೂಡಿಕೆ ವಲಯಕ್ಕೆ ಸಂಬಂಧಿಸಿದಂತೆ ಸದನದಲ್ಲಿ ಹೊಸ ಕಾಯ್ದೆ ಮಂಡನೆ ಮಾಡಲಾಗುತ್ತಿದೆ. ಅದರ ಪ್ರಕಾರ ಕೈಗಾರಿಕಾ ಪ್ರದೇಶದಲ್ಲಿ ವಸೂಲಿಯಾಗುವ ತೆರಿಗೆಯಲ್ಲಿ ಶೇ.30ರಷ್ಟು ಸ್ಥಳೀಯ ಮೂಲ ಸೌಲಭ್ಯಗಳ ಅಭಿವೃದ್ಧಿಗೆ ಬಳಕೆಯಾಗಲಿದೆ. ಉಳಿದ ಶೇ.70ರಷ್ಟು ಇತರ ಉದ್ದೇಶಗಳಿಗೆ ತೊಡಗಿಸಲಾಗುವುದು ಎಂದರು.

ಕಳೆದ 2010-12ರಲ್ಲಿ ನಡೆದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದ ಬಳಿಕ 1.25 ಲಕ್ಷ ಎಕರೆಯನ್ನು ಭೂ ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಅದರ ಹಂಚಿಕೆಗೆ ಎಲ್ಲಾ ರೀತಿಯ ಸಿದ್ಧತೆಗಳಾಗಿದ್ದವು. ಆದರೆ, ಚುನಾವಣೆ ನಡೆದು ಸರ್ಕಾರ ಬದಲಾವಣೆಯಾಗಿತ್ತು. ನಂತರ ಅಧಿಕಾರಕ್ಕೆ ಬಂದ ಸರ್ಕಾರ ಮೊದಲ ಸಚಿವ ಸಂಪುಟ ಸಭೆಯಲ್ಲಿ ಈ ಭೂಮಿಯನ್ನು ಡಿ-ನೋಟಿಫಿಕೇಷನ್ ಮಾಡಿದೆ. ಕೈಗಾರಿಕಾ ನಿವೇಶನ ಪಡೆಯಲು ವಿವಿಧ ಸಂಸ್ಥೆಗಳು 2400 ಕೋಟಿ ಹಣವನ್ನು ಠೇವಣಿ ಮಾಡಿದ್ದವು. ಡಿ-ನೋಟಿಫಿಕೇಷನ್ ಆಗುತ್ತಿದ್ದಂತೆ ಕಂಪೆನಿಗಳು ಠೇವಣಿಯನ್ನು ಹಿಂಪಡೆದವು ಎಂದರು.

ಇತ್ತೀಚೆಗೆ ನಡೆದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಸುಮಾರು 10 ಲಕ್ಷ ಕೋಟಿ ರೂಪಾಯಿ ಬಂಡವಾಳ ಹೂಡಿಕೆಯ ಒಪ್ಪಂದಗಳಾಗಿವೆ. ಅದಕ್ಕಾಗಿ ರಾಜ್ಯ ಸರ್ಕಾರ 50 ಸಾವಿರ ಎಕರೆ ಭೂಮಿ ಸ್ವಾಧೀನಪಡಿಸಿಕೊಳ್ಳಲಾಗಿದೆ. ರಾಜ್ಯದಲ್ಲಿ ಲಭ್ಯವಿರುವ ಒಟ್ಟು ಭೂಮಿಯಲ್ಲಿ ಶೇ.1ರಷ್ಟು ಮಾತ್ರ ನಾವು ಕೈಗಾರಿಕೆಗಳಿಗೆ ಬಳಕೆ ಮಾಡುತ್ತಿದ್ದೇವೆ. ರೈತರಿಂದ ಬಲವಂತವಾಗಿ ಭೂಮಿ ಕಸಿಯಲಾಗಿದೆ ಎಂಬ ಆರೋಪ ಸರಿಯಲ್ಲ. ರೈತರ ಒಪ್ಪಿಗೆಯ ನಂತರ ಕೃಷಿಗೆ ಯೋಗ್ಯವಲ್ಲದ ಭೂಮಿಯನ್ನು ಮಾತ್ರ ಕೈಗಾರಿಕೆಗಳಿಗೆ ನೀಡಲಾಗುತ್ತಿದೆ. ಹೂಡಿಕೆ ಸಮಾವೇಶದಲ್ಲಿನ ಒಪ್ಪಂದಗಳು ಶೀಘ್ರವೇ ಸ್ಪಷ್ಟ ರೂಪ ಪಡೆಯಲಿವೆ. ಉನ್ನತ ಅನುಮೋದನಾ ಸಮಿತಿ ಅಂಗೀಕಾರ ಪಡೆದ ಬಳಿಕ ಭೂಮಿ ಹಂಚಲಾಗುವುದು ಎಂದರು.

ಟೈಲರಿಂಗ್ ಕೋರ್ಸ್ ತರಬೇತಿ

ಮೈಸೂರು,ಡಿ.27-ಪರಿವರ್ತನಾ ಗ್ರಾಮೀಣಾಭಿವೃದ್ಧಿ ಸಂಸ್ಥೆ ವತಿಯಿಂದ ಕೌಶಲ್ಯ ಕರ್ನಾಟಕದ ಯೋಜನೆಯಡಿ ಪರಿವರ್ತನಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯಲ್ಲಿ ಟೈಲರಿಂಗ್ ಕೋರ್ಸ್‌ಗಳನ್ನು 45 ದಿನ ಉಚಿತವಾಗಿ ಎಸ್‌ಸಿ, ಎಸ್‌ಟಿ ಹಾಗೂ ಎಲ್ಲಾ ವರ್ಗದ ನಿರುದ್ಯೋಗಿ ಮಹಿಳೆಯರಿಗೆ 45 ದಿನಗಳ ಕಾಲ ತರಬೇತಿ ನೀಡಲಾಗುವುದು. ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು.

ಕೊರೊನಾ ಮುಂಜಾಗ್ರತಾ ಕ್ರಮವಾಗಿ ಹಳೆಯ ಜಯದೇವ ಆಸ್ಪತ್ರೆಯಲ್ಲಿ ಫೀವರ್ ಕ್ಲಿನಿಕ್ ಆರಂಭ

ಮೈಸೂರು, ಡಿ.27 (ಎಂಕೆ)- ಮತ್ತೆ ಆತಂಕ ಸೃಷ್ಟಿಸುತ್ತಿರುವ ಕೊರೊನಾ ಸೋಂಕಿನ ಮುಂಜಾಗ್ರತಾ ಕ್ರಮವಾಗಿ ಕೆ.ಆರ್.ಆಸ್ಪತ್ರೆಯ ಹಳೇ ಜಯದೇವ ಕಟ್ಟಡದಲ್ಲಿ 'ಫೀವರ್ ಕ್ಲಿನಿಕ್' (ಜ್ವರ ತಪಾಸಣಾ ಕೇಂದ್ರ) ತೆರೆಯಲಾಗಿದೆ.

ಕೆಮ್ಮು, ನೆಗಡಿ, ಜ್ವರ, ಮೈ-ಕೈ ನೋವು ಸೇರಿದಂತೆ ಇನ್ನಿತರೆ ಕೊರೊನಾ ಸೋಂಕಿನ ಲಕ್ಷಣಗಳಿರುವವರಿಗೆ ಪ್ರತ್ಯೇಕವಾಗಿ ಹೊರರೋಗಿ ಚೀಟಿ ನೀಡಿ, ಫೀವರ್ ಕ್ಲಿನಿಕ್‌ನಲ್ಲಿ ತಪಾಸಣೆಗೆ ಒಳಪಡಿಸಲಾಗುತ್ತಿದೆ.

ಫೀವರ್ ಕ್ಲಿನಿಕ್‌ನಲ್ಲಿ ಸದ್ಯಕ್ಕೆ 20 ಬೆಡ್‌ಗಳ ವ್ಯವಸ್ಥೆ ಮಾಡಲಾಗಿದ್ದು, ಗಂಭೀರ ಸ್ಥಿತಿಯಲ್ಲಿದವರನ್ನು ದಾಖಲು ಮಾಡಿಕೊಂಡು ಚಿಕಿತ್ಸೆ ನೀಡಲಾಗುತ್ತದೆ. ಸಾಧಾರಣ ಜ್ವರ, ನೆಗಡಿ, ಕೆಮ್ಮು ಎಂಬುದು ಖಾತರಿಯಾದಲ್ಲಿ ಔಷಧಿ-ಮಾತ್ರೆಗಳನ್ನು ಸೇವಿಸುವುದರ ಜೊತೆಗೆ ಮನೆಯಲ್ಲೇ ಕ್ವಾರಂಟೈನ್‌ನಲ್ಲಿರುವಂತೆ ಸೂಚಿಸಲಾಗುತ್ತಿದೆ.

ಪರಿಶೀಲನೆ: ಕೆ.ಆರ್.ಆಸ್ಪತ್ರೆಯ ಹಳೇ ಜಯದೇವ ಕಟ್ಟಡದಲ್ಲಿ ತೆರೆದಿರುವ 'ಫೀವರ್ ಕ್ಲಿನಿಕ್'ಗೆ ಮಂಗಳವಾರ ಭೇಟಿ ನೀಡಿದ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಣಿ ಪರಿಶೀಲನೆ ನಡೆಸಿದರು.

ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಸರ್ಕಾರ ನೀಡಿರುವ ಮಾರ್ಗಸೂಚಿಗಳನ್ವಯ ಸಾರ್ವಜನಿಕರಲ್ಲಿ ಭಯ ಉಂಟುಮಾಡದಂತೆ ಚಿಕಿತ್ಸೆ ನೀಡುವ ದೃಷ್ಟಿಯಿಂದ ಪ್ರತ್ಯೇಕವಾಗಿ 'ಫೀವರ್ ಕ್ಲಿನಿಕ್' ತೆರೆಯಲಾಗಿದೆ. ಇಲ್ಲಿ ಜ್ವರ, ನೆಗಡಿ, ಕೆಮ್ಮು, ಮೈ-



ಕೈ ನೋವು ಎಂದು ಬರುವ ರೋಗಿಗಳು ಬೇರೆ ರೋಗಿಗಳ ಜೊತೆ ಬೆರೆಯದಂತೆ ಪ್ರತ್ಯೇಕವಾಗಿ ಇರಿಸಿ ಚಿಕಿತ್ಸೆ ನೀಡುವ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಇಲ್ಲಿಯೇ ಒಪಿಡಿ(ಹೊರರೋಗಿ ರಶೀದಿ) ಚೀಟಿ ನೀಡಿ ತಪಾಸಣೆ ನಡೆಸಿ, ಚಿಕಿತ್ಸೆ ನೀಡಲಾಗುವುದು. ಅಗತ್ಯವಿದ್ದರೆ ಮಾತ್ರ ದಾಖಲು ಮಾಡಿಕೊಳ್ಳಲಾಗುವುದು. ಇಲ್ಲದಿದ್ದರೆ ಮನೆಯಲ್ಲೇ ಕ್ವಾರಂಟೈನ್ ಇರುವಂತೆ ಸೂಚಿಸಲಾಗುವುದು. ಸದ್ಯಕ್ಕೆ 20 ಬೆಡ್‌ಗಳ ವ್ಯವಸ್ಥೆ ಮಾಡಿಕೊಂಡಿದ್ದು, ಮುಂದಿನ ದಿನಗಳಲ್ಲಿ ಅಗತ್ಯಕ್ಕನುಗುಣವಾಗಿ ಹೆಚ್ಚಿಸಲಾಗುವುದು ಎಂದರು.

ಸೋಂಕು ದೃಢಪಟ್ಟಿಲ್ಲ: ಕೆ.ಆರ್.ಆಸ್ಪತ್ರೆಯಲ್ಲಿ ಕಳೆದ ಮೂರು ದಿನಗಳಿಂದ ಪ್ರತಿದಿನ ಸರಾಸರಿ 50-60 ಮಂದಿಗೆ ಕೊರೊನಾ ತಪಾಸಣೆ ನಡೆಸಲಾಗುತ್ತಿದ್ದು, ಇಲ್ಲಿಯವರೆಗೆ ಯಾರಿಗೂ ಕೋವಿಡ್ ದೃಢಪಟ್ಟಿಲ್ಲ. ಸೋಂಕಿನ ಲಕ್ಷಣಗಳಿದ್ದು, ದಾಖಲಾಗುವವರಿಗೆ ಚಿಕಿತ್ಸೆ ನೀಡುತ್ತಿದ್ದೇವೆ ಎಂದು ಮಾಹಿತಿ ನೀಡಿದರು.

ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ನಂಜುಂಡಸ್ವಾಮಿ, ಆರ್‌ಎಂಓ ರಾಜೇಶ್, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಸಿಇಓ ರಕ್ಷಿತ್ ಮತ್ತಿತರರು ಉಪಸ್ಥಿತರಿದ್ದರು.

ಚಿಕಿತ್ಸೆಯಷ್ಟೇ ಪ್ರತ್ಯೇಕ.. ಉಳಿದೆಲ್ಲವೂ.. ಎಲ್ಲರೊಂದಿಗೆ...!

ಎಲ್ಲೆಡೆ ಆತಂಕ ಸೃಷ್ಟಿಸುತ್ತಿರುವ ಕೊರೊನಾ ಸೋಂಕಿನ ಮುಂಜಾಗ್ರತಾ ಕ್ರಮವಾಗಿ ಕೆ.ಆರ್.ಆಸ್ಪತ್ರೆಯಲ್ಲಿ ಪ್ರತ್ಯೇಕವಾಗಿ 'ಫೀವರ್ ಕ್ಲಿನಿಕ್' ತೆರೆಯಲಾಗಿದೆ. ಫೀವರ್ ಕ್ಲಿನಿಕ್‌ನಲ್ಲಿ ಚಿಕಿತ್ಸೆ ಮಾತ್ರ ಪ್ರತ್ಯೇಕವಾಗಿದೆಯೇ ಹೊರತು ರಕ್ತ ಪರೀಕ್ಷೆ, ಎಕ್ಸರೇ, ಔಷಧಿ-ಮಾತ್ರೆಗಳಿಗಾಗಿ ಬೇರೆ ರೋಗಿಗಳೊಂದಿಗೆ ಬೆರೆಯುವುದು ಅನಿವಾರ್ಯವಾಗಿದೆ.

ಕೆಮ್ಮು, ನೆಗಡಿ, ಜ್ವರ, ಮೈ-ಕೈ ನೋವೆಂದು ಬರುವವರಿಗೆ ಪ್ರತ್ಯೇಕವಾಗಿ ಚಿಕಿತ್ಸೆ ನೀಡುತ್ತೇವೆ ಎಂದು ಹೇಳುತ್ತಿರುವ ಕೆ.ಆರ್.ಆಸ್ಪತ್ರೆ ಅಧಿಕಾರಿಗಳು, ಮೂತ್ರ ಪರೀಕ್ಷೆ, ರಕ್ತ ಪರೀಕ್ಷೆ, ಎಕ್ಸರೇ, ಸ್ಕ್ಯಾನಿಂಗ್, ಮೆಡಿಕಲ್ ಸೇವೆಯಲ್ಲಿ ಪ್ರತ್ಯೇಕ ಮಾಡದಿರುವುದು ಇದೆಂಥಹಾ ಪ್ರತ್ಯೇಕ ಚಿಕಿತ್ಸೆ ಎನ್ನುವಂತಿದೆ. ಒಂದೆಡೆ ನಿಯಂತ್ರಿಸುವುದು, ಮತ್ತೊಂದು ಕಡೆ ಹರಡುವುದು ಆಸ್ಪತ್ರೆ ಅಧಿಕಾರಿಗಳ ಕೆಲಸದಲ್ಲಿ ಬದ್ಧತೆ ತೋರುತ್ತದೆ ಎಂದು ಹಲವರು ಗೊಣಗಿಕೊಳ್ಳುತ್ತಿದ್ದಾರೆ.

ವಿದೇಶದಿಂದ ಉಡುಗೊರೆ ಕಳಿಸಿರುವುದಾಗಿ ನಂಬಿಸಿ ಬ್ಯಾಂಕ್ ಉದ್ಯೋಗಿಗೆ 8.80 ಲಕ್ಷ ವಂಚನೆ

ಮೈಸೂರು,ಡಿ.27-ವಿದೇಶದಿಂದ ಉಡುಗೊರೆ ಕಳುಹಿಸಿರುವುದಾಗಿ ನಂಬಿಸಿ ಬ್ಯಾಂಕ್ ಉದ್ಯೋಗಿಗೆ 8.80 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ಆಲನಹಳ್ಳಿ ಬಳಿ ಇರುವ ಕೆಎಸ್‌ಆರ್‌ಟಿಸಿ ಲೇಔಟ್ ನಿವಾಸಿ, ಬ್ಯಾಂಕ್ ಉದ್ಯೋಗಿ ಎಸ್. ಗೀತಾ(34) ವಂಚನೆಗೊಳಗಾದವರಾಗಿದ್ದು, ಇವರಿಗೆ ಇನ್‌ಸ್ಟಾಗ್ರಾಂನಲ್ಲಿ ಪರಿಚಯವಾದ ವ್ಯಕ್ತಿ ವಿದೇಶದಿಂದ ಉಡುಗೊರೆ ಕಳುಹಿಸಿರುವುದಾಗಿ ನಂಬಿಸಿದ್ದಾನೆ. ಡಿಸೆಂಬರ್ 19ರಂದು ಇವರ ಮೊಬೈಲ್‌ಗೆ ಕರೆ ಮಾಡಿದ ವ್ಯಕ್ತಿ ತಾನು ಕೊರಿಯರ್ ಆಫೀಸ್‌ನಿಂದ ಕರೆ ಮಾಡುತ್ತಿರುವುದಾಗಿ ತಿಳಿಸಿದನಲ್ಲದೇ ಯುನೈಟೆಡ್ ಕಿಂಗ್‌ಡಂನಿಂದ ನಿಮಗೆ ಉಡುಗೊರೆ ಪಾರ್ಸೆಲ್ ಬಂದಿದ್ದು, ಅದಕ್ಕೆ ತೆರಿಗೆ ಪಾವತಿಸಬೇಕೆಂದು ಹೇಳಿ ಹಂತ ಹಂತವಾಗಿ 8.80 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾನೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೂಲಿ ಕಾರ್ಮಿಕನ ಅಪಹರಣ

ಬನ್ನೂರು,ಡಿ.27-ಕೂಲಿ ಕಾರ್ಮಿಕನೋರ್ವನನ್ನು ದುಷ್ಕರ್ಮಿಗಳು ಅಪಹರಿಸಿರುವ ಬಗ್ಗೆ ತಿ.ನರಸೀಪುರ ತಾಲೂಕು ಸೋಸಲೆ ಸಮೀಪದ ಹೊರಳಹಳ್ಳಿ ಕ್ರಾಸ್‌ನಿಂದ ವರದಿಯಾಗಿದೆ. ತಿ.ನರಸೀಪುರ ತಾಲೂಕು ಹೊಸನರಿಪುರ ಗ್ರಾಮದ ಗುರುಪ್ರಸಾದ್(32) ಅಪಹರಣಕ್ಕೊಳಗಾದವನಾಗಿದ್ದು, ಈಗ ಡಿಸೆಂಬರ್ 25ರಂದು ಬೆಳಗ್ಗೆ ಆಟೋದಲ್ಲಿ ತಿ.ನರಸೀಪುರದ ಆಸ್ಪತ್ರೆಗೆ ತೆರಳುತ್ತಿದ್ದ ವೇಳೆ ಬೈಕ್‌ನಲ್ಲಿ ಬಂದ ಮೂವರು ದುಷ್ಕರ್ಮಿಗಳು ಹೊರಳಹಳ್ಳಿ ಕ್ರಾಸ್‌ನಲ್ಲಿ ಆಟೋವನ್ನು ಅಡ್ಡ ಹಾಕಿ ಗುರುಪ್ರಸಾದ್ ಮೇಲೆ ಹಲ್ಲೆ ನಡೆಸಿ, ಅಪಹರಿಸಿದ್ದಾರೆ ಎಂದು ಈತನ ಸಹೋದರ ಕಾಂತರಾಜ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಬನ್ನೂರು ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.



ಮಂಗಳವಾರ ಮೈಸೂರು ನಗರಪಾಲಿಕೆಗೆ ಭೇಟಿ ನೀಡಿದ್ದ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಮೇಯರ್ ಈರೇಶ ಅಂಚಟ್ಗಾಗಿರಿ ಹಾಗೂ ನಗರಪಾಲಿಕೆ ಸದಸ್ಯರಾದ ತಿಪ್ಪಣ್ಣ ಮಜಗ್ಗಿ, ವಿಜಯಾನಂದ ಶೆಟ್ಟಿ, ಸಂತೋಷ್ ಚೌಹಾನ್, ಶಿವಕುಮಾರ್ ರಾಯನಗೌಡರ್ ಅವರನ್ನು ಮೈಸೂರು ಮೇಯರ್ ಶಿವಕುಮಾರ್ ಹಾಗೂ ಪಾಲಿಕೆ ಸದಸ್ಯರು ಆತ್ಮೀಯವಾಗಿ ಅಭಿನಂದಿಸಿದರು.

ಮೈಸೂರಲ್ಲಿ ನಾಳೆ ವಿಶ್ವಮಾನವ ದಿನಾಚರಣೆ

ಮೈಸೂರು,ಡಿ.27-ಜಿಲ್ಲಾಡಳಿತ ಮತ್ತು ಕನ್ನಡ ಸಂಸ್ಕೃತಿ ಇಲಾಖೆ ವತಿಯಿಂದ ಡಿ.29ರಂದು ಬೆಳಗ್ಗೆ 11 ಗಂಟೆಗೆ ಕಲಾಮಂದಿರದಲ್ಲಿ ವಿಶ್ವಮಾನವ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ. ಸಹಕಾರ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು. ಶಾಸಕ ಎಲ್.ನಾಗೇಂದ್ರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್ ಪ್ರಸಾದ್, ಸುಮಲತಾ ಅಂಬರೀಶ್, ವಿಧಾನಸಭೆ ಹಾಗೂ ವಿಧಾನಪರಿಷತ್‌ನ ಶಾಸಕರು ಹಾಗೂ ನಿಗಮ ಮಂಡಳಿ ಅಧ್ಯಕ್ಷರುಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಾರಾಷ್ಟ್ರದ ಕನ್ನಡ ಪ್ರದೇಶಗಳನ್ನು ಕರ್ನಾಟಕಕ್ಕೆ ಸೇರ್ಪಡೆಗೊಳಿಸುವಂತೆ ಆಗ್ರಹಿಸಿ ಪ್ರತಿಭಟನೆ

ಮೈಸೂರು,ಡಿ.27(ಪಿಎಂ)- ಮಹಾರಾಷ್ಟ್ರದ ಕನ್ನಡ ಪ್ರದೇಶಗಳನ್ನು ಕರ್ನಾಟಕಕ್ಕೆ ಸೇರ್ಪಡೆಗೊಳಿಸಬೇಕು ಹಾಗೂ ಡಾ.ಸರೋಜಿನಿ ಮಹಿಷಿ ಪರಿಷ್ಕೃತ ವರದಿಯನ್ನು ಸದನದಲ್ಲಿ ಮಂಡಿಸಿ ಕಾಯ್ದೆಯಾಗಿ ಜಾರಿಗೊಳಿಸಬೇಕೆಂದು ಒತ್ತಾಯಿಸಿ ಕದಂಬ ಸೈನ್ಯ ಕನ್ನಡ ಸಂಘಟನೆ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.



ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಮಹಾರಾಷ್ಟ್ರದ ಕನ್ನಡ ಪ್ರದೇಶಗಳನ್ನು ಕರ್ನಾಟಕಕ್ಕೆ ಸೇರ್ಪಡೆಗೊಳಿಸಲು ಮುಖ್ಯಮಂತ್ರಿಗಳು ಗಂಭೀರ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ಮಹಾರಾಷ್ಟ್ರದ ಕನ್ನಡ ಪ್ರದೇಶಗಳಲ್ಲಿ ಗಣನೀಯವಾಗಿ ಕನ್ನಡಿಗರಿದ್ದಾರೆ. ಅಜಂತಾ, ಎಲ್ಲೋರ ಗುಹಾಂತರ ದೇವಾಲಯಗಳನ್ನು ನಿರ್ಮಿಸಿದವರು ಕನ್ನಡದ ನಾಡಿನ ಅಂದಿನ ಚಕ್ರವರ್ತಿಗಳು. ವಚನಗಳ ಕವಿ ಸಿದ್ದರಾಮ ಸೊಲ್ಲಾಪುರದ ಕೆರೆ-ಕಟ್ಟೆಗಳನ್ನು ನಿರ್ಮಿಸಿದರು. ಇವರು ಬಸವಣ್ಣನವರ ಸಾಮಾಜಿಕ ಕ್ರಾಂತಿಯ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಮಹಾರಾಷ್ಟ್ರದಲ್ಲಿನ ಕನ್ನಡ ಪ್ರದೇಶಗಳಲ್ಲಿ ಕನ್ನಡಿಗರ ಮೇಲೆ ನಿರಂತರ ದಬ್ಬಾಳಿಕೆ ನಡೆಸಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಹಾರಾಷ್ಟ್ರದ ಕನ್ನಡ ಪ್ರದೇಶಗಳಾದ ಅಕ್ಕಲಕೋಟೆ, ಸೊಲ್ಲಾಪುರ, ಜತ್ತ, ಸಾಂಗ್ಲಿ, ಪಂಡರಾಪುರ, ಉಸ್ಮನಾಬಾದ್, ಕೊಲ್ಲಾಪುರ, ಅಜಂತಾ, ಎಲ್ಲೋರ, ಎಲಿಫೆಂಟ್, ಅರ್ಧ ಮುಂಬೈ ಪ್ರದೇಶಗಳನ್ನು ಕರ್ನಾಟಕಕ್ಕೆ ಸೇರಿಸಬೇಕು. ಈ ಸಂಬಂಧ ರಾಜ್ಯ ಸರ್ಕಾರವು ದಾಖಲೆಗಳ ಸಹಿತ ಸುಪ್ರಿಂಕೋರ್ಟ್‌ಗೆ ಅರ್ಜಿ ಸಲ್ಲಿಸಬೇಕು. ಅಲ್ಲದೆ, ಕೇಂದ್ರ ಸರ್ಕಾರಕ್ಕೂ ಒತ್ತಾಯಿಸಬೇಕು ಎಂದು ಆಗ್ರಹಿಸಿದರು.

ಮಹಾರಾಷ್ಟ್ರ ಸರ್ಕಾರ ಕನ್ನಡಿಗರ ಮೇಲೆ ಸಂಪೂರ್ಣ ನಿರ್ಲಕ್ಷ್ಯ ಧೋರಣೆ ತಾಳುತ್ತಾ ಬಂದಿದೆ. ಹಾಗಾಗಿ ಅಲ್ಲಿನ ಕನ್ನಡಿಗರು ತಮ್ಮ ಪ್ರದೇಶಗಳನ್ನು ಕರ್ನಾಟಕಕ್ಕೆ ಸೇರಿಸುವಂತೆ ಒತ್ತಾಯಿಸುತ್ತಿದ್ದಾರೆ. ಅಲ್ಲಿನ ಕನ್ನಡಿಗರ ಬೆಂಬಲಕ್ಕೆ ರಾಜ್ಯ ಸರ್ಕಾರ ಮತ್ತು ವಿರೋಧ ಪಕ್ಷಗಳು ಗಟ್ಟಿಯಾಗಿ ನಿಲ್ಲಬೇಕು ಎಂದು ಒತ್ತಾಯಿಸಿದರು. ಸಂಘಟನೆಯ ರಾಜ್ಯಾಧ್ಯಕ್ಷ ಬೇಕ್ರಿ ರಮೇಶ್, ರಾಜ್ಯ ಸಂಚಾಲಕ ಎಸ್.ಶಿವಕುಮಾರ್, ಪದಾಧಿಕಾರಿಗಳಾದ ನಾ.ಮಹದೇವಸ್ವಾಮಿ, ಉಮ್ಮಡಹಳ್ಳಿ ನಾಗೇಶ್, ಉಮೇಶ್ ರಾಂಪುರ, ಚಿಕ್ಕ ವೆಂಕಟಪ್ಪ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕುರುಬ ಸಮುದಾಯವನ್ನು ಎಸ್ಟಿಗೆ ಸೇರಿಸಲು ಒತ್ತಾಯಿಸಿ ಬೆಳಗಾವಿ ಸುವರ್ಣಸೌಧ ಮುಂದೆ ಪ್ರತಿಭಟನೆ

ಬೆಳಗಾವಿ: ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಒತ್ತಾಯಿಸಿ ಬೆಳಗಾವಿ ಸುವರ್ಣ ಸೌಧದ ಮುಂಭಾಗ ಲಕ್ಷಾಂತರ ಮಂದಿ ಕುರುಬ ಸಮುದಾಯದವರು ಪ್ರತಿಭಟನೆ ನಡೆಸಿದರು.

ಕರ್ನಾಟಕ ಪ್ರದೇಶ ಕುರುಬರ ಸಂಘದ ವತಿಯಿಂದ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಹಲವು ಗಣ್ಯರು ಕುರುಬ ಸಮುದಾಯವನ್ನು ಎಸ್ಟಿಗೆ ಸೇರಿಸುವಂತೆ ಒತ್ತಾಯಿಸಿದರು. ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಕರ್ನಾಟಕ ಸರ್ಕಾರದಿಂದ ಕುಲಶಾಸ್ತ್ರ ಅಧ್ಯಯನ ವರದಿಯನ್ನು ಪರಿಶಿಷ್ಟ ಮತ್ತು ಬುಡಕಟ್ಟು ಇಲಾಖೆಯ ನಿರ್ದೇಶಕರಿಂದ ಪಡೆದು, ಸದರಿ ವರದಿಯನ್ನು ಸಚಿವ ಸಂಪುಟದಲ್ಲಿಟ್ಟು ಚರ್ಚಿಸಿ,



ಅನುಮೋದನೆ ನೀಡಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಮಾತನಾಡಿ, ಹಲವು ವರ್ಷಗಳಿಂದ ಕುರುಬ ಸಮುದಾಯವನ್ನು ಎಸ್ಟಿಗೆ ಸೇರಿಸುವಂತೆ ಹೋರಾಟ ನಡೆಸಿಕೊಂಡು ಬರಲಾಗಿದೆ. ಈ ಚಳಿಗಾಲದ ಅಧಿವೇಶನ'ದ ಸಂದರ್ಭದಲ್ಲೇ ಈ ಬಗ್ಗೆ ನಿರ್ಧಾರ ಕೈಗೊಂಡು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ಪ್ರದೇಶ ಕುರುಬರ ಸಂಘದ ನಿರ್ದೇಶಕರು, ಪದಾಧಿಕಾರಿಗಳು ಹಾಗೂ ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಸ್ವಯಂ ಪ್ರೇರಿತವಾಗಿ ಆಗಮಿಸಿ ಪ್ರತಿಭಟನೆಯನ್ನು ಯಶಸ್ವಿಗೊಳಿಸಿದ ಎಲ್ಲರಿಗೂ ಸಂಘದಿಂದ ಕೃತಜ್ಞತೆ ಸಲ್ಲಿಸುತ್ತೇವೆ ಎಂದು ಸಂಘದ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ತಿಳಿಸಿದ್ದಾರೆ.

ನಾನಾ ಸೇವಾ ಕಾರ್ಯಗಳ ಮೂಲಕ ರಾಕೇಶ್ ಪಾಪಣ್ಣ ಹುಟ್ಟುಹಬ್ಬ ಆಚರಣೆ





ಮೈಸೂರು, ಡಿ.27- ಮೈಸೂರು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರೂ ಆದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಯುವ ಕಾಂಗ್ರೆಸ್ ಮುಖಂಡ ರಾಕೇಶ್ ಪಾಪಣ್ಣ ಅವರ ಹುಟ್ಟುಹಬ್ಬವನ್ನು ಮಂಗಳವಾರ ವಿವಿಧ ಸೇವಾ ಕಾರ್ಯಕ್ರಮಗಳ ಮೂಲಕ ಅದ್ಧೂರಿಯಾಗಿ ಆಚರಿಸಲಾಯಿತು.

ಮೊದಲು ನನ್ನೇಶ್ವರ ದೇವಾಲಯಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು. ನಂತರ ಹಿನಕಲ್‌ನ ಚಿಕ್ಕಮ್ಮ ಸ್ಕೂಲ್ ಆವರಣದಲ್ಲಿ ಏರ್ಪಡಿಸಲಾಗಿದ್ದ ರಕ್ತದಾನ ಶಿಬಿರದಲ್ಲಿ ರಾಕೇಶ್ ಪಾಪಣ್ಣನವರು ಪಾಲ್ಗೊಂಡಿದ್ದರು. ಈ ವೇಳೆ ಹಲವಾರು ಅಭಿಮಾನಿಗಳು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿದರು. ನಂತರ ರಕ್ತದಾನ ಮಾಡಿದವರಿಗೆ ಹಣ್ಣು-ಹಂಪಲು ಮತ್ತು ಕುಡಿಯಲು ಜ್ಯೂಸ್ ವಿತರಿಸಲಾಯಿತು.

ಇದಕ್ಕೂ ಮುನ್ನ ಹಿನಕಲ್ ಗ್ರಾಪಂ ಮಾಜಿ ಸದಸ್ಯರಾದ ಕೆ.ಜಿ.ನಾಗರಾಜು, ದಿನೇಶ್ ಹಾಗೂ ಪುಟ್ಟರಾಜು, ಗ್ರಾಮ





ಸ್ಥರ ಸಮ್ಮುಖದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ರಾಕೇಶ್ ಪಾಪಣ್ಣ ಕೇಕ್ ಕತ್ತರಿಸಿ, ಎಲ್ಲರಿಗೂ ವಿತರಿಸಿದರು. ಈ ವೇಳೆ ಅಭಿಮಾನಿಗಳು ಭಾರೀ ಗಾತ್ರದ ಹಾರ ಹಾಕಿ, ಮೈಸೂರು ಪೇಟ ತೊಡಿಸಿ ಅಭಿನಂದಿಸಿದರು.

ಬೋಗಾದಿಯ ತ್ಯಾಗು ಏಜೆನ್ಸಿಸ್ ಮಾಲೀಕ ತ್ಯಾಗರಾಜು ನೇತೃತ್ವದಲ್ಲಿ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಏರ್ಪಡಿಸಿದ್ದ ಹುಟ್ಟುಹಬ್ಬ ಸಮಾರಂಭದಲ್ಲಿ ರಾಕೇಶ್ ಅವರು ಕೇಕ್ ಕತ್ತರಿಸಿ ಮಕ್ಕಳಿಗೆ ಹಂಚಿದರಲ್ಲದೆ, ಮಕ್ಕಳಿಗೆ ತಟ್ಟೆ, ಲೋಟ, ಲೇಖನ ಸಾಮಗ್ರಿ ವಿತರಿಸಿದರು. ಇದೇ ವೇಳೆ ಶಾಲಾ ಮಕ್ಕಳು ಮತ್ತು ಶಿಕ್ಷಕರಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು. ಈ ವೇಳೆ ತ್ಯಾಗರಾಜು, ಹೊನ್ನಗಿರಿಗೌಡ, ಮಂಜುನಾಥ್, ರವಿಕುಮಾರ್, ಪ್ರೇಂಗೌಡ, ಸೋಮುಗೌಡ, ತಿಲಕ್, ಚಿದು, ರಾಕೇಶ್, ರಾಮು, ಮಹೇಶ್, ಮೋಹಿತ್ ಹಾಗೂ ರಾಕೇಶ್ ಪಾಪಣ್ಣ ಅಭಿಮಾನಿಗಳು ಉಪಸ್ಥಿತರಿದ್ದರು. ಕ್ಷೇತ್ರದಾದ್ಯಂತ ರಾಕೇಶ್ ಪಾಪಣ್ಣ ಅವರಿಗೆ ಶುಭ ಕೋರುವ ಕಟೌಟ್, ಬ್ಯಾನರ್‌ಗಳು ರಾರಾಜಿಸಿದವು. ಚಾಮುಂಡೇಶ್ವರಿ ಕ್ಷೇತ್ರದ ಹಲವು ಗ್ರಾಮಗಳಲ್ಲಿ ಕೇಕ್ ಕತ್ತರಿಸಿ, ಸಿಹಿ ಹಂಚಿ ಜನ್ಮದಿನವನ್ನು ಆಚರಿಸಲಾಯಿತು. ಈ ವೇಳೆ ರಾಕ್ ಜಿಮ್‌ನ ಶ್ರೀಧರ್ ಮಾಯಪ್ಪ, ಕಾರ್ತಿಕ್ ಸಿಂಗ್, ಪ್ರಕಾಶ್, ಮಂಜು, ಅಭಿ, ಶಿವಕುಮಾರ್, ಪ್ರಶಾಂತ್ ಸೇರಿದಂತೆ ಇನ್ನಿತರರು ಹಾಜರಿದ್ದರು.

ರಾತ್ರಿ ರಾಕೇಶ್ ಪಾಪಣ್ಣ ಅವರ ನಿವಾಸದ ಮುಂದೆ ಅಭಿಮಾನಿಗಳು, ಹಿತೈಷಿಗಳು ಬೃಹತ್ ಸಮಾರಂಭ ಏರ್ಪಡಿಸಿ, ಅವರಿಗೆ ಭಾರೀ ಹಾರಗಳನ್ನು ಹಾಕಿ ಮೈಸೂರು ಪೇಟ ತೊಡಿಸಿ ಅಭಿನಂದಿಸಿದರು. ಗ್ರಾಮಸ್ಥರು ಮತ್ತು ಸಾರ್ವಜನಿಕರಿಗೆ ಸಿಹಿ ವಿತರಿಸಲಾಯಿತು. ಈ ವೇಳೆ ಅಭಿಮಾನಿಗಳು ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಎಂಎಲ್‌ಎ ರಾಕೇಶ್ ಪಾಪಣ್ಣ ಅವರಿಗೆ ಜಯವಾಗಲಿ ಎಂದು ಘೋಷಣೆಗಳನ್ನು ಕೂಗಿ ಸಂಭ್ರಮಿಸಿದರು.

'ಪೊಮ್ಮಾಲೆ ಕೊಡಗ್' ಕೊಡವ ಸಿನಿಮಾ 'ಏಷ್ಯನ್ ನೆಟ್‌ಪ್ಯಾಕ್ ಅವಾರ್ಡ್' ಸ್ಪರ್ಧೆಗೆ ಆಯ್ಕೆ

ಮಡಿಕೇರಿ, ಡಿ.27– ಪ್ರಶಸ್ತಿ ವಿಜೇತ ನಿರ್ದೇಶಕ ಕೊಟ್ಟುಕತ್ತೀರ ಪ್ರಕಾಶ್ ಕಾರ್ಯಪ್ಪ ನಿರ್ದೇಶನದ 'ಪೊಮ್ಮಾಲೆ ಕೊಡಗ್' ಕೊಡವ ಸಿನಿಮಾ 28ನೇ ಕೊಲ್ಕತ್ತ ಇಂಟರ್ ನ್ಯಾಷನಲ್ ಫಿಲಂ ಫೆಸ್ಟಿವಲ್‌ನಲ್ಲಿ 'ಏಷ್ಯನ್ ನೆಟ್ ಪ್ಯಾಕ್ ಅವಾರ್ಡ್' ಸ್ಪರ್ಧೆಗೆ ಆಯ್ಕೆಯಾಗಿದೆ.



ಕಿಐಎಫ್ಎಫ್ ಮಾನ್ಯತೆ ಪಡೆದ ಭಾರತದ 5 ಫೆಸ್ಟಿವಲ್‌ಗಳಲ್ಲಿ ಒಂದಾಗಿರುವ ಈ ಚಿತ್ರೋತ್ಸವ ವರ್ಲ್ಡ್ ಪ್ರಿಮಿಯರ್ ಫೆಸ್ಟಿವಲ್ ಆಗಿದೆ. 8 ದೇಶಗಳ ಸಿನಿಮಾಗಳು ಸ್ಪರ್ಧೆಯಲ್ಲಿದ್ದು, 900ಕ್ಕೂ ಹೆಚ್ಚು ಚಿತ್ರಗಳು ಪ್ರದರ್ಶನಕ್ಕಾಗಿ ಅರ್ಜಿ ಸಲ್ಲಿಸಿದ್ದವು. ಇವುಗಳಲ್ಲಿ ಸಾಕ್ಷ್ಯಚಿತ್ರ, ಕಿರುಚಿತ್ರ, ಫ್ಯೂಚರ್ ಫಿಲ್ಮ್‌ಗಳು ಸೇರಿದಂತೆ ಒಟ್ಟು 183 ಚಿತ್ರಗಳು ಮಾತ್ರ ಆಯ್ಕೆಯಾದವು. ಕರ್ನಾಟಕದಿಂದ ಕನ್ನಡ, ತುಳು, ಕೊಡವ, ಬ್ಯಾರಿ ಸೇರಿ 4 ಸಿನಿಮಾಗಳು ಆಯ್ಕೆಯಾಗಿವೆ.

ಕೊಡವ ಸಿನಿಮಾಗಳನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಂತೆ ಮಾಡಿದ ಹೆಗ್ಗಳಿಕೆಯ ನಿರ್ದೇಶಕ ಕೊಟ್ಟುಕತ್ತೀರ ಪ್ರಕಾಶ್ ಕಾರ್ಯಪ್ಪ ಹಾಗೂ ನಿರ್ಮಾಪಕಿ ಯಶೋಧ ಪ್ರಕಾಶ್ ದಂಪತಿ 'ಪೊಮ್ಮಾಲೆ ಕೊಡಗ್' ಮೂಲಕ ಕೊಲ್ಕತ್ತ ಇಂಟರ್ ನ್ಯಾಷನಲ್ ಫಿಲಂ ಫೆಸ್ಟಿವಲ್‌ನ ಏಷ್ಯನ್ ನೆಟ್ ಪ್ಯಾಕ್ ಅವಾರ್ಡ್‌ನ ಹೊಸ್ತಿಲಲ್ಲಿದ್ದಾರೆ.

ಸಿದ್ದಾಪುರ ವ್ಯಾಪ್ತಿಯಲ್ಲಿ ಪುಂಡಾನೆಗಳ ಸೆರೆ ಕಾರ್ಯಾಚರಣೆ

ಐದು ಸಾಕಾನೆಗಳು, 72 ಮಂದಿ ಅರಣ್ಯ ಸಿಬ್ಬಂದಿ ಭಾಗಿ



ಮಡಿಕೇರಿ, ಡಿ.27– ಸಿದ್ದಾಪುರ ವ್ಯಾಪ್ತಿಯ ಕರಡಿಗೋಡು ಗ್ರಾಮದ ವ್ಯಾಪ್ತಿಯಲ್ಲಿ ಗ್ರಾಮಸ್ಥರಿಗೆ ಉಪಟಳ ನೀಡುತ್ತಿದ್ದ ಎರಡು ಪುಂಡಾನೆಗಳ ಸೆರೆಗೆ ಅರಣ್ಯ ಇಲಾಖೆ ಕಾರ್ಯಾಚರಣೆ ಆರಂಭಿಸಿದ್ದು, ಕಾಡಾನೆಗಳ ಜಾಡು ಹಿಡಿದು ಅದನ್ನು ಸೆರೆ ಹಿಡಿಯುವ ಪ್ರಯತ್ನಗಳು ನಡೆದಿವೆ.

ಕರಡಿಗೋಡು ವ್ಯಾಪ್ತಿಯಲ್ಲಿ ಕಳೆದ ಕೆಲ ದಿನಗಳಿಂದ ಕಾಡಾನೆಗಳ ಉಪಟಳ ಮಿತಿ ಮೀರಿದ್ದು, ರೈತರು ಬೆಳೆದ ಭತ್ತದ ಬೆಳೆ, ಕಾಫಿ ಫಸಲಿಗೆ ಅಪಾರ ಹಾನಿಯಾಗಿದೆ. ಸಮಸ್ಯೆ ಬಗೆಹರಿಸಲೇಬೇಕೆನ್ನುವ ಗ್ರಾಮಸ್ಥರ ಆಗ್ರಹದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಪುಂಡಾನೆಗಳ ಸೆರೆಗೆ ಮುಂದಾಗಿದೆ.

ಕಾಫಿ ತೋಟಗಳಲ್ಲಿ ಬೀಡು ಬಿಟ್ಟು ದಾಂಧಲೆ ನಡೆಸುವ ಕಾಡಾನೆಗಳನ್ನು ಪತ್ತೆ ಮಾಡಿ ಸೆರೆ ಹಿಡಿಯಲೇಬೇಕಾದ್ದರಿಂದ ಅರಣ್ಯ ಇಲಾಖೆ ದುಬಾರೆ ಸಾಕಾನೆ ಶಿಬಿರದ ಪ್ರಶಾಂತ, ಸುಗ್ರೀವ, ಧನಂಜಯ ಮತ್ತು ಮತ್ತಿಗೋಡು ಶಿಬಿರದಿಂದ ಅಭಿಮನ್ಯು ಮತ್ತು ಭೀಮ ಸೇರಿದಂತೆ ಒಟ್ಟು 5 ಸಾಕಾನೆಗಳನ್ನು ಕಾರ್ಯಾಚರಣೆಗೆ ಬಳಸಿಕೊಳ್ಳಲಾಗುತ್ತಿದೆ. ಜಿಲ್ಲಾ ಮುಖ್ಯ ಅರಣ್ಯ ಸಂರಕ್ಷಾಧಿಕಾರಿ ಬಿ.ಎಸ್. ಮೂರ್ತಿ ಅವರ ಮಾರ್ಗದರ್ಶನದಲ್ಲಿ ವಿರಾಜಪೇಟೆ ತಾಲೂಕು ಡಿಸಿಎಫ್ ಚಕ್ರಪಾಣಿ, ಎಸಿಎಫ್ ನೆಹರು ನೇತೃತ್ವದಲ್ಲಿ ವಲಯ ಅರಣ್ಯಾಧಿಕಾರಿ ಕಳ್ಳಿರ ದೇವಯ್ಯ, ಉಪವಲಯ ಅರಣ್ಯಾಧಿಕಾರಿ ಸಂಜಿತ್ ಪೂವಯ್ಯ, ಶಾರ್ಪ್ ಶೂಟರ್ ಅಕ್ರಂ, ವನ್ಯಜೀವಿ ವೈದ್ಯಾಧಿಕಾರಿ ಡಾಕ್ಟರ್ ಚಿಟ್ಟಿಯಪ್ಪ ಸೇರಿದಂತೆ ಸುಮಾರು 72 ಮಂದಿ ಅರಣ್ಯ ಸಿಬ್ಬಂದಿಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದಾರೆ.

ಕಾಡಾನೆ ಸೆರೆ ಕಾರ್ಯಾಚರಣೆ ಬುಧವಾರವೂ ಮುಂದುವರೆಯಲಿದ್ದು, ಅದಷ್ಟು ಶೀಘ್ರ ಅವುಗಳನ್ನು ಸೆರೆಹಿಡಿಯಲು ಅರಣ್ಯ ಇಲಾಖೆ ಅಗತ್ಯ ಕಾರ್ಯ ಯೋಜನೆಗಳನ್ನು ರೂಪಿಸುತ್ತಿದೆ.

ತಿರುಗಿ ಬಿದ್ದ ಕಾಡಾನೆ

ಕಾಫಿ ತೋಟಗಳ ಒಳಗೆ ಅವಿತಿದ್ದ ಕಾಡಾನೆಗಳ ತಾಣವನ್ನು ಅದಾಗಲೇ ಪತ್ತೆ ಮಾಡಿದ್ದ ಅರಣ್ಯ ಇಲಾಖಾ ತಂಡ ಇಂದು ಬೆಳಗ್ಗಿನಿಂದಲೇ ಅವುಗಳ ಜಾಡು ಹಿಡಿದು, ಸೆರೆಗೆ ಸಾಕಷ್ಟು ಪ್ರಯತ್ನಗಳನ್ನು ನಡೆಸಿತು. ಈ ಸಂದರ್ಭ ಸುಮಾರು 7 ಕಾಡಾನೆಗಳ ಹಿಂಡಿನಲ್ಲಿದ್ದ 3 ಕಾಡಾನೆಗಳು ವಿಕಾರಿ ಅರಣ್ಯ ಸಿಬ್ಬಂದಿಗಳ ಮೇಲೆ ತಿರುಗಿ ಬಿದ್ದ ಘಟನೆಯೂ ನಡೆದಿದ್ದು, ಕೆಲ ಕಾಲ ಸಾಕಷ್ಟು ಗೊಂದಲಗಳನ್ನು ಸೃಷ್ಟಿಸಿತು.

ಕಾಫಿ ತೋಟ, ಮರಕಾಡುಗಳ ನಡುವಿನ ಕಾರ್ಯಾಚರಣೆಯ ವೇಳೆ ಸೆರೆಹಿಡಿಯಬೇಕಾದ ಕಾಡಾನೆಗಳೇ ತಿರುಗಿ ಬಿದ್ದಿದ್ದು, ಅರಣ್ಯ ಸಿಬ್ಬಂದಿಗಳು ಸ್ಥಳದಿಂದ ಓಡಿ ಅಪಾಯದಿಂದ ಪಾರಾಗಲು ಸಾಕಷ್ಟು ತಿಣುಕಾಡಬೇಕಾಯಿತು. ಈ ಎಲ್ಲಾ ಘಟನೆಗಳ ಬಳಿಕ ಕಾಡಾನೆ ಮತ್ತೆ ದೂರ ಸರಿದ ಹಿನ್ನೆಲೆಯಲ್ಲಿ ಕಾರ್ಯಾಚರಣೆ ಮತ್ತೆ ಹಿನ್ನಡೆ ಉಂಟಾಯಿತು.

ಮಂಡಲ ಪೂಜೆ



ಗುಡ್ಡೆಹೊಸೂರು, ಡಿ.27– ಇಲ್ಲಿಗೆ ಸಮೀಪದ ಮಾದಾಪಟ್ಟಣದ ವಿಶ್ವನಾಥ ದೇವಸ್ಥಾನದಲ್ಲಿ ಅಯ್ಯಪ್ಪ ಸ್ವಾಮಿಯವರ ಮಂಡಲ ಪೂಜಾ ಕಾರ್ಯಕ್ರಮ ಇತ್ತೀಚೆಗೆ ಅದ್ದೂರಿಯಾಗಿ ನಡೆಯಿತು. ಕಾವೇರಿ ನದಿಯಿಂದ ಅಯ್ಯಪ್ಪ ವ್ರತಧಾರಿಗಳು ದೇವಸ್ಥಾನಕ್ಕೆ ಕಳಸ ತಂದು ನಂತರ ದೇವಸ್ಥಾನದಲ್ಲಿ ವಿವಿಧ ಪೂಜಾ ಕಾರ್ಯವನ್ನು ನಡೆಸಲಾಯಿತು. ದೇವಸ್ಥಾನದ ಸಮೀಪದ ಸಮುದಾಯ ಭವನದಲ್ಲಿ ಮಂಡಲ ಪೂಜೆಯು ನಡೆಯಿತು. ಈ ಪೂಜೆಯನ್ನು ಅಲ್ಲಿನ ಮಂಜುನಾಥ ಗುರುಸ್ವಾಮಿಯವರು ನಡೆಸಿದರು. ಈ ಪೂಜೆಯಲ್ಲಿ ನೂರಾರು ಮಂದಿ ಗ್ರಾಮಸ್ಥರು ಭಾಗವಹಿಸಿದ್ದರು.

ಈ ಸಂದರ್ಭದ ಅನ್ನಸಂತರ್ಪಣೆ ಕಾರ್ಯ ನಡೆಯಿತು. ಅಲ್ಲಿನ ಶ್ರೀ ಕಾಶಿ ವಿಶ್ವನಾಥ ದೇವಸ್ಥಾನ ಸಮಿತಿಯವರು ಈ ಪೂಜಾಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

ಭಾರತ ಕಮ್ಯುನಿಸ್ಟ್ ಪಕ್ಷದ 98ನೇ ಸಂಸ್ಥಾಪನಾ ದಿನಾಚರಣೆ

ಬೆಲೆ ಏರಿಕೆ, ಟ್ಯಾಕ್ಸ್‌ನಿಂದ ಸಂಕಷ್ಟದಲ್ಲಿ ದುಡಿಯುವ ವರ್ಗ

ಮಡಿಕೇರಿ, ಡಿ.27– ಭಾರತ ಕಮ್ಯುನಿಸ್ಟ್ ಪಕ್ಷ ಕೊಡಗು ಜಿಲ್ಲಾ ಸಮಿತಿ ವತಿಯಿಂದ ಭಾರತ ಕಮ್ಯುನಿಸ್ಟ್ ಪಕ್ಷದ 98ನೇ ಸಂಸ್ಥಾಪನಾ ದಿನಾಚರಣೆಯನ್ನು ಮಾದಾಪುರ ಆದಿ ದ್ರಾವಿಡ ಸಭಾಂಗಣದಲ್ಲಿ ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಎಐಟಿಯುಸಿ ಜಿಲ್ಲಾಧ್ಯಕ್ಷ ಹೆಚ್.ಎಂ. ಸೋಮಪ್ಪ, ಬೆಲೆ ಏರಿಕೆ, ಟ್ಯಾಕ್ಸ್‌ನಿಂದಾಗಿ ದುಡಿಯುವ ವರ್ಗ, ಲೈನ್‌ಮನೆಯಲ್ಲಿ ವಾಸಿಸುತ್ತಿರುವ ಕೂಲಿ ಕಾರ್ಮಿಕರು ಪ್ರತಿದಿನ ತೊಂದರೆ ಅನುಭವಿಸುವಂತಾಗಿದೆ. ಇದೀಗ ಚುನಾವಣೆ ಸಮೀಪಿಸುತ್ತಿದ್ದು, ರಾಜಕಾರಣಿಗಳು ಹಾಗೂ ಅಧಿಕಾರಿಗಳು ಅಭಿವೃದ್ಧಿ ಹೆಸರಿನಲ್ಲಿ ಆಮಿಷಗಳನ್ನು ಒಡ್ಡಿ ಜನ ಸಾಮಾನ್ಯರನ್ನು ವಂಚಿಸುತ್ತಿದ್ದಾರೆ ಹೊರತು ಶ್ರಮಿಕರ ನೋವಿಗೆ ಯಾವುದೇ ಸ್ಪಂದನೆ ನೀಡುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಸಿಪಿಐ ಕೊಡಗು ಜಿಲ್ಲಾ ಕಾರ್ಯದರ್ಶಿ ಕೆ.ಸುನಿಲ್ ಮಾತನಾಡಿ, ಭಾರತ ಕಮ್ಯುನಿಸ್ಟ್ ಪಕ್ಷ ದುಡಿಯುವ ವರ್ಗ, ಕೂಲಿ ಕಾರ್ಮಿಕರು ಹಾಗೂ ಈ ದೇಶದ ಅತ್ಯಂತ ಕೆಳವರ್ಗದ ಪರವಾಗಿ, ಕಾರ್ಮಿಕರ ಪರವಾಗಿ ಕಾರ್ಯ ನಿರ್ವಹಿಸುತ್ತಿದೆ. ರೈತರು ಹಾಗೂ ಕಾರ್ಮಿಕರು ಒಗ್ಗಟ್ಟು ಪ್ರದರ್ಶಿಸಿದರೆ ನಮಗೆ ಈ ದೇಶವನ್ನು ಆಳ್ವಿಕೆ ಮಾಡುವ ಶಕ್ತಿ ದೊರಕಲಿದೆ ಎಂದರು.

ರೈತ ಮುಖಂಡ ಲಕ್ಷ್ಮಣ್ ಮಾತನಾಡಿ, ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ಬೆಲೆ ಏರಿಕೆಯಿಂದ ದುರ್ಬಲರು ಸಂಕಷ್ಟ ಪಡುವಂತಾಗಿದೆ. ಈ ನಿಟ್ಟಿನಲ್ಲಿ ಎಲ್ಲಾ ಕ್ಷೇತ್ರದ ಕಾರ್ಮಿಕರು ಹಾಗೂ ದುರ್ಬಲರು ಸಂಘಟನೆಯಲ್ಲಿ ತೊಡಗಿಸಿಕೊಂಡು, ಒಗ್ಗಟ್ಟನ್ನು ಪ್ರದರ್ಶಿಸುವ ಮೂಲಕ ನಮ್ಮ ಹಕ್ಕನ್ನು ಕೇಳುವ ಧೈರ್ಯ ಮಾಡಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಸಿಪಿಐ ಉಪ ಕಾರ್ಯದರ್ಶಿ ರಫಿಕ್, ಸಲಹೆಗಾರ ಶೇಷಪ್ಪ, ಕಟ್ಟಡ ಕಾರ್ಮಿಕ ಕಾರ್ಯದರ್ಶಿ ಕೃಷ್ಣ, ಸಿಪಿಐ ಸದಸ್ಯರಾದ ಗಣೇಶ್, ಮಂಜುನಾಥ್, ಕುಸುಮಾವತಿ, ರಮೇಶ್, ಸೋಮು ಹಾಗೂ ಇತರರು ಹಾಜರಿದ್ದರು.

ಕೊಡಗಿಗೆ ಮಂಜೂರಾದ 2852 ಮನೆ ಪೈಕಿ ಪೂರ್ಣಗೊಂಡಿದ್ದು 81 ಮಾತ್ರ

ಕೆ.ಜಿ. ಬೋಪಯ್ಯಗೆ ವಿ. ಸೋಮಣ್ಣ ಉತ್ತರ

ಮಡಿಕೇರಿ, ಡಿ.27– ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ವಿವಿಧ ವಸತಿ ಯೋಜನೆಗಳಡಿ ಮಂಜೂರಾಗಿರುವ 2852 ಮನೆಗಳಲ್ಲಿ ಇಲ್ಲಿಯವರೆಗೆ ಕೇವಲ 81 ಮಾತ್ರ ಪೂರ್ಣಗೊಂಡು, 1008 ಮನೆಗಳು ವಿವಿಧ ಹಂತಗಳಲ್ಲಿರುವ ಮಾಹಿತಿಯನ್ನು ಸರ್ಕಾರ ಅಧಿವೇಶನದಲ್ಲಿ ನೀಡಿದೆ.


ಕೆ.ಜಿ.ಬೋಪಯ್ಯ


ವಿ. ಸೋಮಣ್ಣ

ವಿರಾಜಪೇಟೆ ಶಾಸಕ ಕೆ.ಜಿ.ಬೋಪಯ್ಯ ಅವರ ಪ್ರಶ್ನೆಗೆ ಉತ್ತರಿಸಿದ ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವ ವಿ.ಸೋಮಣ್ಣ, ಬಸವ ವಸತಿ ಯೋಜನೆ ಯಡಿ 1846 ಮನೆಗಳು ಮಂಜೂರಾಗಿದ್ದು, ಇದರಲ್ಲಿ 48 ಮನೆಗಳು ಪೂರ್ಣ ಗೊಂಡಿವೆ. ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಯಡಿ (ಗ್ರಾಮೀಣ) ಮಂಜೂರಾದ 654 ಮನೆಗಳಲ್ಲಿ 8 ಮನೆಗಳಷ್ಟೆ ಪೂರ್ಣವಾಗಿವೆ. ದೇವರಾಜ ಅರಸು ಯೋಜನೆಯಡಿ(ಗ್ರಾಮೀಣ) 5 ಮನೆಗಳು ಮಂಜೂರಾಗಿದ್ದು, 1 ಮನೆ ಮಾತ್ರ ಪೂರ್ಣವಾಗಿದೆ, ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ (ಗ್ರಾಮೀಣ) 2 ಮನೆ ಮಂಜೂರಾಗಿದ್ದು, 1 ಮನೆ ಪೂರ್ಣವಾಗಿದೆ.

ವಾಜಪೇಯಿ ನಗರ ವಸತಿ ಯೋಜನೆಯಡಿ 143 ಮನೆಗಳು ಮಂಜೂರಾಗಿದ್ದು, ಯಾವುದೇ ಮನೆಗಳು ಪೂರ್ಣವಾಗಿಲ್ಲ. ಡಾ. ಬಿ.ಆರ್. ಅಂಬೇಡ್ಕರ್ ನಿವಾಸ್(ನಗರ) ಯೋಜನೆ ಯಲ್ಲಿ ಮಂಜೂರಾದ 52 ಮನೆಗಳಲ್ಲಿ ಯಾವುದೂ ಪೂರ್ಣವಾಗಿಲ್ಲ. ಪ್ರಧಾನ ಮಂತ್ರಿ ಆವಾಸ್(ನಗರ) ಯೋಜನೆಯಡಿ 150 ಮನೆಗಳು ಮಂಜೂರಾಗಿದ್ದರೆ, 23 ಪೂರ್ಣವಾಗಿದೆ.

ಒಟ್ಟಾಗಿ ನಗರ ಪ್ರದೇಶಕ್ಕೆ ಮಂಜೂರಾದ 345 ಮನೆಗಳಲ್ಲಿ 23 ಪೂರ್ಣವಾಗಿದ್ದರೆ ಎಂದು ಸಚಿವರು ಮಾಹಿತಿ ನೀಡಿದರು.

ಮಹಾಕಾಳಿ ಖ್ಯಾತಿಯ ಮುಬೀನ್ ತಾಜ್ ನಿಧನ

ಕುಶಾಲನಗರ, ಡಿ.27– ಪಟ್ಟಣದ ಖಾಸಗಿ ವಿದ್ಯಾಸಂಸ್ಥೆಯ ಮುಖ್ಯಸ್ಥೆಯಾಗಿದ್ದ ಮುಬೀನ್ ತಾಜ್ (38) ಅಮರ ಅನಾರೋಗ್ಯದಿಂದ ಸೋಮವಾರ ನಿಧನರಾದರು.



ತಮ್ಮ ಮೇಲೆ ಮಹಾಕಾಳಿ ಆವಾಹನೆಯಾಗಿದೆ, ಖಾಸಗಿ ಭೂಮಿಯಲ್ಲಿ ದೇವರ ವಿಗ್ರಹವಿದ್ದು, ಅಲ್ಲಿ ದೇವಾಲಯ ನಿರ್ಮಿಸಬೇಕಿದೆ ಎಂದು ಮುಬೀನ್ ತಾಜ್ ಹೋರಾಟ ನಡೆಸಿದ್ದರು. ತಮ್ಮ ಹೋರಾಟಕ್ಕೆ ಸ್ಪಂದನೆ ದೊರಕದ ಹಿನ್ನೆಲೆಯಲ್ಲಿ ಮಾನಸಿಕವಾಗಿ ಜರ್ಝರಿತರಾಗಿ ಅನಾರೋಗ್ಯಕ್ಕೆ ಒಳಗಾಗಿದ್ದರು. ಮುಬೀನ್ ತಾಜ್ ನಿಧನದಿಂದಾಗಿ ಖಾಸಗಿ ಭೂಮಿಯಲ್ಲಿ ದೇವರ ವಿಗ್ರಹವಿದೆ ಎಂಬ ಗೊಂದಲಕ್ಕೆ ಉತ್ತರ ಸಿಗದಂತಾಗಿದೆ.

ಡಿ.31, ಹೆಗ್ಗಳ ಗ್ರಾಮಕ್ಕೆ ಶ್ರೀ ಬೈತೂರು ದೇವರ ಆಗಮನ

ವಿರಾಜಪೇಟೆ, ಡಿ.27– ವಿರಾಜಪೇಟೆ ತಾಲೂಕಿನ ಹೆಗ್ಗಳ ಗ್ರಾಮದಲ್ಲಿರುವ ಶ್ರೀ ಅಯ್ಯಪ್ಪ ಭಗವತಿ ದೇವಸ್ಥಾನಕ್ಕೆ ವರ್ಷಂಪ್ರತಿ ಬರುವ ಶ್ರೀ ಬೈತೂರು ದೇವರು ಡಿ.31 ರಂದು ಆಗಮಿಸಿ ದೇವಸ್ಥಾನದಲ್ಲಿ ತಂಗಲಿದ್ದಾರೆ.

ಜ.1 ರಂದು ಭಗವತಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿ, ನಂತರ ದೇವರ ದರ್ಶನದಲ್ಲಿ ಆಶೀರ್ವಚನ ನೀಡಲಿದ್ದು, ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದೇವರ ಕೃಪೆಗೆ ಪಾತ್ರರಾಗುವಂತೆ ಹಾಗೂ ಅಂದು ನಡೆಯುವ ಪೂಜಾ ಕಾರ್ಯದಲ್ಲಿ ಭಕ್ತಾದಿಗಳಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ ಎಂದು ದೇವಾಲಯ ಸಮಿತಿ ಅಧ್ಯಕ್ಷ ಅಮ್ಮಣಕುಟ್ಟಂಡ ಜಿ. ಬೋಪಣ್ಣ ತಿಳಿಸಿದ್ದಾರೆ.

ಮಡಿಕೇರಿ ಬಯಲು ಶೌಚಮುಕ್ತ ಪ್ಲಸ್ ಪ್ರದೇಶವೆಂದು ಘೋಷಣೆ

ಮಡಿಕೇರಿ, ಡಿ.27– ಮಡಿಕೇರಿ ನಗರಸಭೆ ವ್ಯಾಪ್ತಿಯ ಎಲ್ಲಾ 1 ರಿಂದ 23 ವಾರ್ಡ್‌ಗಳಲ್ಲಿರುವ ವಾಸದ ಮನೆ, ವಾಣಿಜ್ಯ ಕಟ್ಟಡ ಹಾಗೂ ಶಾಲಾ ಕಾಲೇಜುಗಳು ಶೌಚಾಲಯಗಳನ್ನು ಹೊಂದಿದ್ದು, ಯಾರು ಸಹ ಬಯಲು ಶೌಚ ಮಾಡದಿರುವುದು ಕಂಡು ಬಂದಿರುವ ಹಿನ್ನೆಲೆಯಲ್ಲಿ ಸರ್ಕಾರದಿಂದ ಈಗಾಗಲೇ ಬಯಲು ಶೌಚ ಮುಕ್ತ ಎಂದು ಘೋಷಣೆಯಾಗಿದೆ.

ಪ್ರಸಕ್ತ ಪಟ್ಟಣದಲ್ಲಿ ಸಾರ್ವಜನಿಕ ಹಾಗೂ ಸಮುದಾಯ ಶೌಚಾಲಯಗಳು ಕಾರ್ಯ ನಿರ್ವಹಿಸುತ್ತಿದ್ದು, ಪಟ್ಟಣ ವ್ಯಾಪ್ತಿಯಲ್ಲಿ ಯಾರು ಸಹ ಬಯಲು ಶೌಚ ಮಾಡದಿರುವುದು ಕಂಡು ಬಂದಿರುವ ಹಿನ್ನೆಲೆಯಲ್ಲಿ ಹಾಗೂ ಸ್ವಚ್ಛ ಭಾರತ್ ಮಿಷನ್‌ನ ಬಯಲು ಶೌಚ ಮುಕ್ತ ಪ್ರದೇಶದ ಮಾರ್ಗಸೂಚಿಯನ್ನು ಕ್ರಮಬದ್ಧವಾಗಿ ಅನುಷ್ಠಾನ ಪರಿಗಣಿಸಿ ಮಡಿಕೇರಿ ನಗರವನ್ನು ಬಯಲು ಶೌಚ ಮುಕ್ತ ಪ್ಲಸ್ ಪ್ರದೇಶ ಎಂದು ಘೋಷಣೆ ಮಾಡಲಾಗಿದೆ ಎಂದು ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.

ಕೋವಿಡ್ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಿ: ಸಿಎಸ್‌ಪಿ

ಪಾಂಡವಪುರ, ಡಿ.27– ಹರಡುತ್ತಿರುವ ರೂಪಾಂತರ ಕೋವಿಡ್–19ಕ್ಕೆ ಸಂಬಂಧಿಸಿದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಶಾಸಕ ಸಿ.ಎಸ್. ಪುಟ್ಟರಾಜು ಸೂಚಿಸಿದರು.



ಪಟ್ಟಣದ ತಾಪಂ ಸಭಾಂಗಣದಲ್ಲಿ ನಡೆದ ತಾಲೂಕು ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಸಾರ್ವಜನಿಕರಿಗೆ ಕೋವಿಡ್ ಬಗ್ಗೆ ಜಾಗೃತಿ ಮೂಡಿಸಿ ಕಡ್ಡಾಯವಾಗಿ ಮಾಸ್ಕ್ ಬಳಕೆ, ಶುಚಿತ್ವ ಕಾಪಾಡುವುದು ಜೊತೆಗೆ ಕೆಮ್ಮು, ನೆಗಡಿ, ಶೀತದ ಲಕ್ಷಣ ಕಂಡುಬಂದಲ್ಲಿ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುವಂತೆ ಜನರಲ್ಲಿ ಅರಿವು ಮೂಡಿಸಿ ಎಂದು ಸಲಹೆ ನೀಡಿದರು.

ಪಟ್ಟಣದ ಬಿಸಿಎಂ, ಸಮಾಜಕಲ್ಯಾಣ ಇಲಾಖೆಯ ವಸತಿ ನಿಲಯಗಳು, ಕಿತ್ತೂರ ರಾಣಿ ಚನ್ನಮ್ಮ ವಸತಿ ಶಾಲೆ, ಪಟ್ಟಣದ ಟಿಎಪಿಸಿಎಂಎಸ್ ಕಲ್ಯಾಣ ಮಂಟಪದಲ್ಲಿ ಕೋವಿಡ್ ಕೇರ್ ಸೆಂಟರನ್ನು ಸಿದ್ಧ ಮಾಡಿಕೊಳ್ಳಿ ಎಂದು ತಹಶೀಲ್ದಾರ್ ಕುಮಾರ್, ಇಓ ಲೋಕೇಶ್ ಮೂರ್ತಿಗೆ ಸೂಚಿಸಿದರು.

ಆಸ್ಪತ್ರೆಯಲ್ಲಿ ಆಕ್ಸಿಜನ್ ಪ್ಲಾಂಟ್ ಸಿದ್ಧವಾಗಿದೆ. ಎಲ್‌ಎಂಓ ಟ್ಯಾಂಕ್ ಬರಬೇಕಾಗಿದೆ. 100 ಬೆಡ್‌ಗಳ ವ್ಯವಸ್ಥೆ ಮಾಡಲಾಗಿದೆ. ಇದರಲ್ಲಿ 19 ಐಸಿಯು ಬೆಡ್ ವ್ಯವಸ್ಥೆ ಸೇರಿದೆ ಎಂದರು. ಟಿಎಚ್‌ಓ ಡಾ.ಸಿ.ಎ. ಅರವಿಂದ್, ತಹಶೀಲ್ದಾರ್ ಕುಮಾರ್, ತಾಪಂ ಇಓ ಲೋಕೇಶ್‌ಮೂರ್ತಿ, ಎಸ್‌ಐ ಮಂಜುನಾಥ್, ಟಿಎಚ್‌ಓ ಡಾ.ಸಿ.ಎ.ಅರವಿಂದ್, ಮುಖ್ಯ ವೈದ್ಯಾಧಿಕಾರಿ ಡಾ.ಕುಮಾರ್ ಸೇರಿದಂತೆ ಹಲವರಿದ್ದರು.

ಡಿ.30, ಸಕ್ಕರೆ ನಾಡಿಗೆ ಕೇಂದ್ರ ಗೃಹಸಚಿವ ಅಮಿತ್ ಶಾ

▸ ಬೃಹತ್ ಬಹಿರಂಗ ಸಮಾವೇಶದಲ್ಲಿ ಭಾಗಿ ▸ ಗೆಜ್ಜಲಗೆರೆಯಲ್ಲಿ ಮೆಗಾ ಡೈರಿ ಉದ್ಘಾಟನೆ: ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಮಾಹಿತಿ

ಮಂಡ್ಯ, ಡಿ.27– ರಾಜ್ಯ ವಿಧಾನಸಭಾ ಚುನಾವಣೆಗೆ ಕೇವಲ ಮೂರ್‍ನಾಲ್ಕು ತಿಂಗಳು ಬಾಕಿ ಇರುವ ಹಿನ್ನೆಲೆಯಲ್ಲಿ ಜೆಡಿಎಸ್ ಭದ್ರಕೋಟೆ ಮಂಡ್ಯದಲ್ಲಿ ಬಿಜೆಪಿ ಶಕ್ತಿ ಪ್ರದರ್ಶನಕ್ಕೆ ಮುಂದಾಗಿದ್ದು, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಚುನಾವಣೆ ಹೊಸ್ತಿಲಿನಲ್ಲಿ ಮಂಡ್ಯ ಜಿಲ್ಲೆಗೆ ಕರೆಸಿ, ಬಿಜೆಪಿ ನೆಲೆ ಗಟ್ಟಿಗೊಳಿಸಲು ಕಮಲ ಕಲಿಗಳು ಮುಂದಾಗಿದ್ದಾರೆ.

ನಗರದ ಮಂಡ್ಯ ವಿಶ್ವವಿದ್ಯಾನಿಲಯ (ಬಾಯ್ಸ್ ಕಾಲೇಜು)ದ ಆವರಣದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ, ಡಿ.30ರಂದು ನಗರದ ವಿವಿ ಆವರಣದಲ್ಲಿ ಬೃಹತ್ ಸಮಾವೇಶ ನಡೆಯಲಿದ್ದು ಅಮಿತ್ ಶಾ ಆಗಮಿಸಲಿದ್ದಾರೆ ಎಂದು ತಿಳಿಸಿದರು.



ಅಂದು ಮಧ್ಯಾಹ್ನ 1.45ಕ್ಕೆ ಆಗಮಿಸುವ ಅವರು, ಮಂಡ್ಯದಲ್ಲಿ ನಡೆಯುವ ಬೃಹತ್ ಸಮಾವೇಶದಲ್ಲಿ ಭಾಗವಹಿಸಲಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಡಿ.ವಿ.ಸದಾನಂದಗೌಡ, ಬಿಜೆಪಿ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್, ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್‌ಸಿಂಗ್ ಸೇರಿದಂತೆ ಸಮಾವೇಶದಲ್ಲಿ ಕೇಂದ್ರ ಸಚಿವರು ಹಳೇ ಮೈಸೂರು ಭಾಗದ ಎಲ್ಲಾ ಸಚಿವರು, ಶಾಸಕರು, ಜನಪ್ರತಿನಿಧಿಗಳು, ಮುಖಂಡರು ಭಾಗವಹಿಸಲಿದ್ದಾರೆ ಎಂದರು.

ಬೃಹತ್ ಸಮಾವೇಶಕ್ಕೆ ಜಿಲ್ಲೆಯ 8 ತಾಲೂಕಿನಿಂದ ಲಕ್ಷಕ್ಕೂ ಹೆಚ್ಚು ಬಿಜೆಪಿ ಕಾರ್ಯಕರ್ತರನ್ನು ಕರೆತರಲು ಎಲ್ಲಾ ಸಿದ್ಧತೆ ನಡೆದಿದೆ. ಅಲ್ಲದೆ, ಹಳೇ ಮೈಸೂರು ಭಾಗದಿಂದಲೂ ಕಾರ್ಯಕರ್ತರು ಭಾಗವಹಿಸುವ ನಿರೀಕ್ಷೆ ಇದ್ದು, ಸಮಾವೇಶ ಮುಗಿದ ಬಳಿಕ ಗೆಜ್ಜಲಗೆರೆಗೆ ತೆರಳಿ ಮೆಗಾ ಡೈರಿ ಉದ್ಘಾಟಿಸುವರು ಎಂದರು.

ಕಪ್ಪು ಬಾವುಟ ತೋರದಂತೆ ಮನವಿ: ರೈತ ಸಂಘದ ಕಾರ್ಯಕರ್ತರು ನಡೆಸುತ್ತಿರುವ ಅಹೋರಾತ್ರಿ ಧರಣಿ 50 ದಿನ ಪೂರೈಸಿದೆ. ಈ ಕುರಿತು ಈಗಾಗಲೇ ಮುಖ್ಯಮಂತ್ರಿಗಳೊಂದಿಗೆ ಮಾತುಕತೆ ನಡೆಸಲಾಗಿದೆ. ಆದರೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಬಂದಾಗ ರೈತ ಮುಖಂಡರು ಕಪ್ಪು ಬಾವುಟ ಪ್ರದರ್ಶನಕ್ಕೆ ಮುಂದಾಗಿದ್ದಾರೆ. ಆದ್ದರಿಂದ ಕೂಡಲೇ ರೈತ ರೊಂದಿಗೆ ಮಾತುಕತೆ ನಡೆಸಿ ಕಪ್ಪು ಬಾವುಟ ಪ್ರದರ್ಶನ ಮಾಡದಂತೆ ಮನವಿ ಮಾಡಲಾಗುವುದು. ಕಬ್ಬಿಗೆ ದರ ನಿಗದಿ ಇಡೀ ದೇಶಕ್ಕೆ ಅನ್ವಯಿಸುವಂತೆ ಮಾಡ ಬೇಕಾಗಿದೆ. ಆದ್ದರಿಂದ ಸ್ವಲ್ಪ ವಿಳಂಬವಾಗುತ್ತಿದೆ. ಅಲ್ಲದೇ ಬೇಡಿಕೆ ಈಡೇರಿಸುವ ಕುರಿತು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲಾಗುವುದು ಎಂದರು.

ಜಿಲ್ಲೆ ಅಭಿವೃದ್ಧಿ ವಿಚಾರದಲ್ಲಿ ಯಾವುದೇ ರಾಜಿ ಇಲ್ಲ. ಈಗಾಗಲೇ ಗುಂಡಿ ಬಿದ್ದಿರುವ ರಸ್ತೆ ಅಭಿವೃದ್ಧಿಪಡಿಸಲು ಅನುದಾನ ಬಿಡುಗಡೆಯಾಗಿದ್ದು, ಕೆಲಸಗಳು ಪ್ರಾರಂಭವಾಗಲಿದೆ. ಅಲ್ಲದೆ, ಭಾರೀ ಮಳೆಯಿಂದ ಕೋಡಿ ಬಿದ್ದಿರುವ ಕೆರೆಗಳ ಅಭಿವೃದ್ಧಿಗೂ ಹಣ ಬಿಡುಗಡೆ ಮಾಡಲಾಗಿದ್ದು, ದುರಸ್ತಿಪಡಿಸುವಂತೆ ಸೂಚಿಸಲಾಗಿದೆ ಎಂದರು.

ಕೊರೊನಾ ಸೋಂಕು ಹರಡುವ ಭೀತಿ ಇದೆ. ಆದರೆ ಭಾರತದಲ್ಲಿ ಇನ್ನೂ ಆ ಪರಿಸ್ಥಿತಿ ಬಂದಿಲ್ಲ. ಕೊರೊನಾ ಪ್ರಕರಣ ಹೆಚ್ಚಾದಂತೆ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಲಿದೆ. ಅಲ್ಲದೆ, ಸಮಾವೇಶವನ್ನು ಕೊರೊನಾ ಮುನ್ನೆಚ್ಚರಿಕೆ ಕ್ರಮ ವಹಿಸಿ ನಡೆಸಲಾಗುತ್ತಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಗೋಷ್ಠಿಯಲ್ಲಿ ರೇಷ್ಮೆ ಹಾಗೂ ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ, ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ಮುಖಂಡರಾದ ಡಾ.ಸಿದ್ದ ರಾಮಯ್ಯ, ಇಂಡುವಾಳು ಎಸ್. ಸಚ್ಚಿದಾನಂದ, ಅಶೋಕ್ ಜಯರಾಂ ಇದ್ದರು.

ಅಮಿತ್ ಶಾ ರಾಜ್ಯ ಪ್ರವಾಸದ ವಿವರ

ಕೇಂದ್ರ ಗೃಹ ಸಚಿವ ಅಮಿತ್ ಶಾ 3 ದಿನಗಳ ಕಾಲ ರಾಜ್ಯ ಪ್ರವಾಸ ಹಮ್ಮಿಕೊಂಡಿದ್ದು, ಡಿ.29ರಂದು ಬಂದಿಳಿಯಲಿದ್ದಾರೆ. ನವದೆಹಲಿಯಿಂದ 29ರ ಸಂಜೆ 7.30ಕ್ಕೆ ವಿಶೇಷ ವಿಮಾನದ ಮೂಲಕ ಹೊರಟು ಬೆಂಗಳೂರಿನ ಯಲಹಂಕ ವಾಯು ನೆಲೆಗೆ ರಾತ್ರಿ 10 ಗಂಟೆಗೆ ಬಂದಿಳಿಯಲಿದ್ದಾರೆ. ಬಳಿಕ ಬೆಂಗಳೂರಿನ ತಾಜ್ ವೆಸ್ಟೆಂಡ್ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಲಿರುವ ಅವರು, ಡಿ.30 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 12.45 ರವರೆಗೆ ರಾಜ್ಯ ಬಿಜೆಪಿ ನಾಯಕರೊಂದಿಗೆ ಸಭೆಗಳನ್ನು ನಡೆಸಲಿದ್ದು, ಇದಕ್ಕಾಗಿ ಎರಡು ಮುಕ್ಕಾಲು ಗಂಟೆ ಸಮಯವನ್ನು ಕಾಯ್ದಿರಿಸಲಾಗಿದೆ.

ಬಳಿಕ ಮಧ್ಯಾಹ್ನದ ಊಟ ಮುಗಿಸಿ, 1.05ಕ್ಕೆ ಬೆಂಗಳೂರಿನ ಯಲಹಂಕ ವಾಯುನೆಲೆಯಿಂದ ವಿಶೇಷ ಹೆಲಿಕ್ಯಾಪ್ಟರ್‌ನಲ್ಲಿ ಮಂಡ್ಯದ ತೂಬಿನಕೆರೆ ಹೆಲಿಪ್ಯಾಡ್ ಅಥವಾ ಸರ್ ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಬಂದಿಳಿಯಲಿರುವ ಶಾ, ರಸ್ತೆ ಮೂಲಕ ಮಂಡ್ಯ ನಗರದ ಮಂಡ್ಯ ವಿಶ್ವವಿದ್ಯಾನಿಲಯ (ಬಾಯ್ಸ್ ಕಾಲೇಜು)ಕ್ಕೆ ಆಗಮಿಸಿ, 1.45ರಿಂದ 3.15ರವರೆಗೆ ಬೃಹತ್ ಬಹಿರಂಗ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ.

ಬಳಿಕ ರಸ್ತೆ ಮೂಲಕವೇ ಗೆಜ್ಜಲಗೆರೆಯ ಮನ್‌ಮುಲ್ ತಲುಪಲಿರುವ ಅವರು, ಮಧ್ಯಾಹ್ನ 3.30ಕ್ಕೆ ಮನ್‌ಮುಲ್‌ನಲ್ಲಿ ಬೃಹತ್ ಮೆಗಾ ಡೈರಿ ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮ ಮುಗಿದ ಬಳಿಕ ಮತ್ತೆ ಮಂಡ್ಯ ನಗರಕ್ಕೆ ಆಗಮಿಸಿ, ಸಂಜೆ 4.45ಕ್ಕೆ ಮಂಡ್ಯದಿಂದ ಬೆಂಗಳೂರಿನತ್ತ ಹೆಲಿಕ್ಯಾಪ್ಟರ್‌ನಲ್ಲಿ ತೆರಳಲಿದ್ದಾರೆ. ಬಳಿಕ ಸಂಜೆ 6.45ಕ್ಕೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿರುವ ಸಹಕಾರ ಇಲಾಖೆ ಬೃಹತ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿರುವ ಅವರು, ರಾತ್ರಿ 8 ರಿಂದ 9.30ರವರೆಗೆ ತಾಜ್ ಹೋಟೆಲ್‌ನಲ್ಲಿ ರಾಜ್ಯ ಬಿಜೆಪಿ ಪ್ರಮುಖರೊಂದಿಗೆ ಸಭೆಯಲ್ಲಿ ಪಾಲ್ಗೊಂಡು, ಹೋಟೆಲ್‌ನಲ್ಲೇ ವಾಸ್ತವ್ಯ ಹೂಡಿ, ಡಿ.31ರ ಶನಿವಾರ ಬೆಂಗಳೂರಿನಲ್ಲೇ ವಿವಿಧ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಂಜೆ ವೇಳೆಗೆ ನವದೆಹಲಿ ತಲುಪಲಿದ್ದಾರೆ.

ರಾಜ್ಯದ ಜನರ ಅಭಿವೃದ್ಧಿ ಜೆಡಿಎಸ್‌ನಿಂದ ಸಾಧ್ಯ

ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ವಿಶ್ವಾಸ

ಮದ್ದೂರು, ಡಿ.27– ರಾಜ್ಯದ ಜನರ ಅಭಿವೃದ್ಧಿ ಪ್ರಾದೇಶಿಕ ಪಕ್ಷ ಜೆಡಿಎಸ್‌ನಿಂದ ಮಾತ್ರ ಸಾಧ್ಯ ಎಂದು ಜನರಿಗೆ ಮನವರಿಕೆಯಾಗಿದ್ದು ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಬಹುಮತ ಪಡೆಯಲಿದೆ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು.



ತಾಲೂಕಿನ ಗುಡಿದೊಡ್ಡಿ ಗ್ರಾಮದ ಚನ್ನಕೇಶ್ವರ ಬೀರೇಶ್ವರ ಸ್ವಾಮಿ ದೇಗುಲದ ಆವರಣದಲ್ಲಿ ಸೋಮವಾರ ರಾತ್ರಿ ವಾಸ್ತವ್ಯ ಹೂಡಿದ್ದ ಕುಮಾರಸ್ವಾಮಿ ಮಂಗಳವಾರ ಬೆಳಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದರು. ಕಾಂಗ್ರೆಸ್ ಮತ್ತು ಬಿಜೆಪಿ ರಾಜ್ಯದ ಜನರಿಗೆ ಯಾವುದೇ ರೀತಿಯಲ್ಲಿ ಅನುಕೂಲ ಕಲ್ಪಿಸಿಲ್ಲ. ಅಧಿಕಾರ ಸಿಕ್ಕಿದ ಸಂದರ್ಭದಲ್ಲಿ ಕೇವಲ ಭರವಸೆಯನ್ನು ನೀಡಿ , ಕಾಲಹರಣ ಮಾಡಿವೆ. ಇದನ್ನು ಗಮನಿಸಿರುವ ರಾಜ್ಯದ ಜನರು ಜೆಡಿಎಸ್ ಪಕ್ಷಕ್ಕೆ ಒಂದು ಬಾರಿ ಪೂರ್ಣ ಬಹುಮತ ನೀಡಬೇಕು ಎಂದು ತೀರ್ಮಾನಿಸಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಜಿಲ್ಲೆಯಲ್ಲಿ ಕಳೆದ ಹಲವು ದಿನಗಳಿಂದ ಪಂಚರತ್ನ ರಥಯಾತ್ರೆ ಸಂಚರಿಸಿದ್ದು, ಇದಕ್ಕೆ ಜಿಲ್ಲೆ ಜನರು ಅಭೂತಪೂರ್ವ ಬೆಂಬಲ ನೀಡಿದ್ದಾರೆ. ಇದು ಜೆಡಿಎಸ್ ಕಾರ್ಯಕರ್ತರಲ್ಲಿ ಹೊಸ ಹುಮ್ಮಸ್ಸು ಮೂಡಿದೆ ಎಂದರು.

ಕೇಂದ್ರದ ಗೃಹ ಸಚಿವರು ರಾಜ್ಯಕ್ಕೆ ಬರುತ್ತಾರೆ ಹೋಗುತ್ತಾರೆ. ಅದರಿಂದ ರಾಜ್ಯಕ್ಕೆ ಯಾವ ಅನುಕೂಲವಾಗಿದೆ ಎಂದ ಅವರು, ಜಿಲ್ಲೆಯಲ್ಲಿ ಜೆಡಿಎಸ್ ಧೂಳೀಪಟ ಮಾಡುತ್ತೇವೆ ಎಂದವರು ಮೂಲೆಗುಂಪು ಸೇರಿದ್ದಾರೆ ಎಂದರು.

ಮಂಗಳವಾರ ಜಿಲ್ಲೆಯಲ್ಲಿ ಪಂಚರತ್ನ ಯಾತ್ರೆಯನ್ನು ಮುಗಿಸಿದ ಎಚ್‌ಡಿಕೆ ತುಮಕೂರು ಜಿಲ್ಲೆ ತುರುವೇಕೆರೆಗೆ ಪ್ರಯಾಣಿಸಿದರು. ಪಂಚರತ್ನ ಯೋಜನೆಯ ಮಾಹಿತಿ ಇರುವ ಬೃಹತ್ ಹಾರವನ್ನು ಎಚ್‌ಡಿಕೆ ಅವರಿಗೆ ಹಾಕಲಾಯಿತು.

ಶಾಸಕ ಸುರೇಶ್‌ಗೌಡ, ವಿಧಾನಪರಿಷತ್ ಮಾಜಿ ಸದಸ್ಯ ಎನ್.ಅಪ್ಪಾಜಿಗೌಡ, ಮನ್‌ಮುಲ್ ನಿರ್ದೇಶಕ ನೆಲ್ಲಿಗೆರೆಬಾಲು, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಉಪಾಧ್ಯಕ್ಷ ಬಿದರಕೋಟೆ ಬಿ.ಎಂ.ಕುಶ, ನಾಗಮಂಗಲ ತಾಲೂಕು ಅಧ್ಯಕ್ಷ ಬಿ.ಟಿ. ಶ್ರೀನಿವಾಸ್, ತಾಪಂ ಮಾಜಿ ಅಧ್ಯಕ್ಷೆ ಲಕ್ಷ್ಮಿ ಚೆನ್ನರಾಜು, ಮುಖಂಡರಾದ ಚೊಟ್ಟನಹಳ್ಳಿ ಇಂದು ಶೇಖರ್, ಕೋಣಸಾಲೆ ಮಧು, ಚಿಕ್ಕೊನಹಳ್ಳಿ ತಮ್ಮಯ್ಯ ಸೇರಿ ಇತರರು ಇದ್ದರು.

ವಿವಿಧ ಪಕ್ಷದ ಕಾರ್ಯಕರ್ತರು ಬಿಜೆಪಿ ಸೇರ್ಪಡೆ

ಮಂಡ್ಯ, ಡಿ.27– ತಾಲೂಕಿನ ಬೇಲೂರು ಗ್ರಾಮದಲ್ಲಿ ಜೆಡಿಎಸ್ ಹಾಗೂ ಕಾಂಗ್ರೆಸ್‌ನ ಕಾರ್ಯಕರ್ತರು ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಮತ್ತು ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ ಅವರ ಸಮ್ಮುಖದಲ್ಲಿ ಬಿಜೆಪಿ ಸೇರ್ಪಡೆಗೊಂಡರು.

ಜಿಲ್ಲಾ ಉಸ್ತುವಾರಿ ಸಚಿವ ಕೆ. ಗೋಪಾಲಯ್ಯ ಮಾತನಾಡಿ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ರೈತರ ಪರವಾಗಿ ಹಲವು ಯೋಜನೆಗಳನ್ನು ಜಾರಿಗೆ ತಂದು ನೆರವಾಗಿದ್ದಾರೆ, ರೈತರಿಗೆ ಆಶ್ರಯ ಸೇರಿದಂತೆ ಹದಿಮೂರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಜಲಜೀವನ್ ಯೋಜನೆಯಡಿ ದೇಶದ ಎಲ್ಲ ಕುಟುಂಬಗಳಿಗೂ ಕುಡಿಯುವ ನೀರು ಕೊಡಲು ಮಾಡುತ್ತಿರುವ ಏಕೈಕ ಸರ್ಕಾರ ನಮ್ಮದು ಎಂದರು.

ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ಮಾತನಾಡಿ, ಮಂಡ್ಯ ಜಿಲ್ಲೆಯಲ್ಲಿ ಬಿಜೆಪಿ ಪಕ್ಷಕ್ಕೆ ನೆಲೆ ಸಿಗುತ್ತಿದೆ. 25 ಸ್ಥಾನ ಗೆದ್ದರೂ ನಾನು ಮುಖ್ಯಮಂತ್ರಿ ಆಗುತ್ತೇನೆ ಎಂದು ಎಚ್‌ಡಿಕೆ ಭ್ರಮೆಯಲ್ಲಿದ್ದಾರೆ, ಇವರು ಮುಖ್ಯಮಂತ್ರಿ ಆದಾಗ ಮಂಡ್ಯ ಜಿಲ್ಲೆಗೆ ಏನು ಮಾಡಿದ್ದಾರೆ ಎಂಬುದು ಗೊತ್ತಿದೆ. ಮಂಡ್ಯ ಒಂದು ಕಣ್ಣು, ಹಾಸನ ಇನ್ನೊಂದು ಕಣ್ಣು ಎಂದು ಹೇಳುತ್ತಾರೆ, ಮಂಡ್ಯಕ್ಕೆ ಮಾತ್ರ ಸುಣ್ಣ, ಹಾಸನಕ್ಕೆ ಬೆಣ್ಣೆ ಕೊಟ್ಟಿದ್ದಾರೆ ಎಂದು ವ್ಯಂಗ್ಯವಾಡಿದರು.



ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಬೇಲೂರು ಮಾಯಿಗಯ್ಯ, ಸತೀಶ್, ಉಮೇಶ್, ಶಂಕರ್, ಚೆನ್ನಯ್ಯ, ರಾಮಕೃಷ್ಣ, ಪುಟ್ಟಸ್ವಾಮಿ ಸೇರಿದಂತೆ 50ಕ್ಕೂ ಹೆಚ್ಚು ಮುಖಂಡರು ಬಿಜೆಪಿ ಪಕ್ಷದ ಸಿದ್ಧಾಂತ ಒಪ್ಪಿ ಸೇರ್ಪಡೆಗೊಂಡರು. ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸಿ.ಪಿ. ಉಮೇಶ್, ಮುಖಂಡರಾದ ಸಿದ್ದರಾಮಯ್ಯ, ಇಂಡುವಾಳು ಸಚ್ಚಿದಾನಂದ, ಸಾದೊಳಲು ಸ್ವಾಮಿ, ಅಂಬರೀಷ್, ಬಸವರಾಜು ಸೇರಿದಂತೆ ಗ್ರಾಮಸ್ಥರು ಮತ್ತು ಮುಖಂಡರು ಇದ್ದರು.

ಶ್ರೀರಂಗಪಟ್ಟಣ ಪಿಕಾರ್ಡ್ ಬ್ಯಾಂಕ್‌ಗೆ ಆರ್.ಎನ್. ಗುರುಪ್ರಸಾದ್ ಅಧ್ಯಕ್ಷ



ಶ್ರೀರಂಗಪಟ್ಟಣ, ಡಿ.27– ತಾಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ (ಪಿಕಾರ್ಡ್) ಬ್ಯಾಂಕ್ ನೂತನ ಅಧ್ಯಕ್ಷರಾಗಿ ಆರ್.ಎನ್.ಗುರುಪ್ರಸಾದ್, ಉಪಾಧ್ಯಕ್ಷರಾಗಿ ಶಿವಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ದೇವರಾಜು, ಉಪಾಧ್ಯಕ್ಷ ಗುರುಪ್ರಸಾದ್ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಇವರಿಬ್ಬರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯಾದರು. ಈ ವೇಳೆ ನಿರ್ದೇಶಕ ರಾದ ನಿಂಗೇಗೌಡ, ಶಂಕರ್, ನಾಗೇಶ್ ಪ್ರಭು, ರಾಮಚಂದ್ರ, ಬಿ.ಸಿ.ಇಂದಿರಾ, ಪಾಪಚಾರಿ, ಬಿ.ಸಿ.ಕೃಷ್ಣೇಗೌಡ, ಸಿ.ಎಲ್.ಪದ್ಮ, ನಾಗರಾಜು, ಶ್ರೀನಿವಾಸ್ ಇತರರಿದ್ದರು.



'ಅಮ್ಮ' ನೀರ್ ಸಾಬ್' ಕರ್ಮಭೂಮಿಯಲ್ಲಿ ಕಾಂಗ್ರೆಸ್, ಬಿಜೆಪಿ ನಡುವೆ ಇತರರ ಅದೃಷ್ಟ ಪರೀಕ್ಷೆ

ಗುಂಡ್ಲುಪೇಟೆ ಶಾಸಕರ ಪರಂಪರೆ

1952–ತ್ರಿಸದಸ್ಯ ಕ್ಷೇತ್ರ ಹೆಚ್.ಕೆ.ಶಿವರುದ್ರಪ್ಪ, ಸಿದ್ದಯ್ಯ (ಪಕ್ಷೇತರ)
1957–ಕೆ.ಎಸ್.ನಾಗರತ್ನಮ್ಮ –ಪಕ್ಷೇತರ
1962–ಕೆ.ಎಸ್.ನಾಗರತ್ನಮ್ಮ –ಪಕ್ಷೇತರ
1967–ಕೆ.ಎಸ್.ನಾಗರತ್ನಮ್ಮ –ಕಾಂಗ್ರೆಸ್
1972–ಕೆ.ಎಸ್.ನಾಗರತ್ನಮ್ಮ –ಕಾಂಗ್ರೆಸ್
1978–ಹೆಚ್.ಕೆ.ಶಿವರುದ್ರಪ್ಪ –ಕಾಂಗ್ರೆಸ್
1983–ಕೆ.ಎಸ್.ನಾಗರತ್ನಮ್ಮ –ಕಾಂಗ್ರೆಸ್
1985–ಕೆ.ಎಸ್.ನಾಗರತ್ನಮ್ಮ –ಕಾಂಗ್ರೆಸ್
1989–ಕೆ.ಎಸ್.ನಾಗರತ್ನಮ್ಮ –ಕಾಂಗ್ರೆಸ್
1994–ಹೆಚ್.ಎಸ್.ಮಹದೇವ ಪ್ರಸಾದ್–ಜನತಾ ದಳ
1999–ಹೆಚ್.ಎಸ್.ಮಹದೇವ ಪ್ರಸಾದ್–ಜೆಡಿಯು
2004–ಹೆಚ್.ಎಸ್.ಮಹದೇವ ಪ್ರಸಾದ್–ಜೆಡಿಎಸ್
2008–ಹೆಚ್.ಎಸ್.ಮಹದೇವ ಪ್ರಸಾದ್–ಕಾಂಗ್ರೆಸ್
2013–ಹೆಚ್.ಎಸ್.ಮಹದೇವ ಪ್ರಸಾದ್–ಕಾಂಗ್ರೆಸ್
2017–ಡಾ. ಗೀತಾ ಮಹದೇವ ಪ್ರಸಾದ್–ಕಾಂಗ್ರೆಸ್ (ಉಪ ಚುನಾವಣೆ)
2018–ಸಿ.ಎಸ್.ನಿರಂಜನ ಕುಮಾರ್ –ಬಿಜೆಪಿ


ನಿರಂಜನ್‌ಕುಮಾರ್


ಗಣೇಶ್‌ಪ್ರಸಾದ್


ಹೆಚ್.ಎಸ್.ನಂಜಪ್ಪ


ಎಂ.ಪಿ.ಸುನೀಲ್


ಕಡಬೂರು ಮಂಜುನಾಥ್


ರಾಜೂಗೌಡ

● ಸಿದ್ದಲಿಂಗಸ್ವಾಮಿ

ಚಾಮರಾಜನಗರ, ಡಿ.27– ಕೇರಳ ಮತ್ತು ತಮಿಳುನಾಡಿಗೆ ಹೊಂದಿಕೊಂಡಿರುವ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರ ಪ್ರಸಿದ್ಧ ಪುಣ್ಯಕ್ಷೇತ್ರ ಹಾಗೂ ಪ್ರವಾಸಿ ತಾಣ ಹಿಮವದ್ ಗೋಪಾಲಸ್ವಾಮಿ ಬೆಟ್ಟ, ಸುಪ್ರಸಿದ್ಧ ಹುಲಿ ಸಂರಕ್ಷಿತ ಪ್ರದೇಶವಾದ ಬಂಡೀಪುರ ಅಭಯಾರಣ್ಯವನ್ನು ಹೊಂದಿದೆ. ತಮಿಳುನಾಡಿನ ಊಟಿ ಹಾಗೂ ಕೇರಳದ ವಯನಾಡು ಜಿಲ್ಲೆಗೆ ಗುಂಡ್ಲುಪೇಟೆ ಪಟ್ಟಣದ ಮೂಲಕವೇ ತೆರಳಬೇಕಾಗಿರುವುದರಿಂದ ಈ ಕ್ಷೇತ್ರವು ಎರಡು ರಾಷ್ಟ್ರೀಯ ಹೆದ್ದಾರಿಗಳನ್ನು ಹೊಂದಿದೆ.

ಇಡೀ ರಾಜ್ಯಕ್ಕೆ ಕೊಳವೆ ಬಾವಿಗಳ ಮೂಲಕ ನೀರುಣಿಸಿ, 'ನೀರ್ ಸಾಬ್' ಎಂದೇ ಖ್ಯಾತಿ ಗಳಿಸಿದ ನಜೀರ್ ಸಾಬ್ ಅವರು ಗುಂಡ್ಲುಪೇಟೆ ತಾಲೂಕಿನವರು ಎಂಬುದು ವಿಶೇಷ. ಆದರೆ ಇವರು ಒಮ್ಮೆಯೂ ಕೂಡ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದವರಲ್ಲ. ವಿಧಾನಪರಿಷತ್ ಸದಸ್ಯರಾಗಿ ಸಚಿವ ಸ್ಥಾನಕ್ಕೇರಿ ಖ್ಯಾತಿ ಪಡೆದವರು.

ಕರ್ನಾಟಕ ವಿಧಾನಸಭೆಯ ಏಕೈಕ ಮಹಿಳಾ ಅಧ್ಯಕ್ಷೆ ಎಂಬ ಹಿರಿಮೆಗೆ ಪಾತ್ರಾಗಿರುವ ದಿವಂಗತ ಕೆ.ಎಸ್. ನಾಗರತ್ನಮ್ಮ ಇದೇ ಕ್ಷೇತ್ರದಿಂದ ಆಯ್ಕೆಯಾಗಿದ್ದವರು. ತಮ್ಮ ಜನಪರ ಕಾರ್ಯಗಳಿಂದ 'ಅಮ್ಮ' ಎಂದೇ ಕ್ಷೇತ್ರದ ಜನತೆಯಿಂದ ಕರೆಯಲ್ಪಡುತ್ತಿದ್ದವರು. ಇಲ್ಲಿನ ಮತದಾರರು ನಾಗರತ್ನಮ್ಮ ಅವರನ್ನು ಬರೋಬ್ಬರಿ 7 ಬಾರಿ ಆಯ್ಕೆ ಮಾಡಿ ವಿಧಾನಸಭೆಗೆ ಕಳುಹಿಸಿದ್ದಾರೆ. ಮೊದಲ ಎರಡು ಚುನಾವಣೆಗಳಲ್ಲಿ ಪಕ್ಷೇತರರಾಗಿ ಆಯ್ಕೆಯಾಗಿದ್ದ ನಾಗರತ್ನಮ್ಮ, 5 ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಆಯ್ಕೆಯಾದರು. 1957ರಿಂದ 1989 ರವರೆಗೆ ನಡೆದ 8 ಚುನಾವಣೆಗಳ ಪೈಕಿ 1978ರ ಚುನಾವಣೆಯಲ್ಲಿ ಮಾತ್ರ ಅವರು ಪರಾಭವಗೊಂಡಿದ್ದರು. ಕೊನೆಗೆ ಶಾಸಕರಾಗಿದ್ದಾಗಲೇ ನಿಧನ ಹೊಂದಿದರು.

ಈ ಕ್ಷೇತ್ರದ ವಿಶೇಷತೆ ಎಂದರೆ ಒಮ್ಮೆ ಶಾಸಕರಾಗಿ ಆಯ್ಕೆಯಾಗಿರುವವರು ಸುದೀರ್ಘ ಕಾಲ ಸತತವಾಗಿ ಆಯ್ಕೆಯಾಗುತ್ತಲೇ ಇರುತ್ತಾರೆ. ಅವರ ನಿಧನದ ನಂತರ ಈ ಹಿಂದೆ ಅವರ ವಿರುದ್ಧ ಸ್ಪರ್ಧಿಸಿ ಪರಾಭವಗೊಂಡವರು ಶಾಸಕರಾಗಿ ಸುದೀರ್ಘ ಕಾಲ ಆಯ್ಕೆಯಾಗಿದ್ದಾರೆ. ಇದಕ್ಕೆ ಉದಾಹರಣೆ ಎಂದರೆ 1983ರ ಚುನಾವಣೆಯಲ್ಲಿ ಮಾಜಿ ಸಚಿವ ದಿವಂಗತ ಹೆಚ್.ಎಸ್.ಮಹದೇವ ಪ್ರಸಾದ್ ಅವರ ತಂದೆ ಶ್ರೀಕಂಠಶೆಟ್ಟಿ ಅವರು ಜನತಾ ಪಕ್ಷದಿಂದ ಸ್ಪರ್ಧಿಸಿ ನಾಗರತ್ನಮ್ಮ ಅವರ ವಿರುದ್ಧ ಸೋಲನನುಭವಿಸಿದ್ದರು. 1985 ಮತ್ತು 1989ರ ಚುನಾವಣೆಗಳಲ್ಲಿ ಹೆಚ್.ಎಸ್.ಮಹದೇವ ಪ್ರಸಾದ್ ಅವರು ಕ್ರಮವಾಗಿ ಜನತಾ ಪಕ್ಷ ಹಾಗೂ ಜನತಾ ದಳದಿಂದ ನಾಗರತ್ನಮ್ಮ ಅವರ ವಿರುದ್ಧ ಸ್ಪರ್ಧಿಸಿ ಸೋಲನನುಭವಿಸಿದ್ದರು.

ನಾಗರತ್ನಮ್ಮ ಅವರ ನಿಧನದ ನಂತರ 1994ರಲ್ಲಿ ನಡೆದ ಚುನಾವಣೆಯಲ್ಲಿ ಜನತಾ ದಳ ಅಭ್ಯರ್ಥಿಯಾಗಿ ಗೆಲುವು ಸಾಧಿಸಿದ ಮಹದೇವ ಪ್ರಸಾದ್ ಸತತ 5 ಬಾರಿ ಜೆಡಿಯು, ಜೆಡಿಎಸ್ ಹಾಗೂ ಕಾಂಗ್ರೆಸ್ ಪಕ್ಷಗಳಿಂದ ಸ್ಪರ್ಧಿಸಿ ಜಯಗಳಿಸಿದರು. ಅವರ ನಿಧನದ ನಂತರ ನಡೆದ ಉಪ ಚುನಾವಣೆಯಲ್ಲಿ ಅವರ ಪತ್ನಿ ಡಾ. ಗೀತಾ ಮಹದೇವ ಪ್ರಸಾದ್ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಗೆಲುವಿನ ನಗೆ ಬೀರಿದ್ದರು.



ಹೆಚ್.ಎಸ್.ಮಹದೇವ ಪ್ರಸಾದ್ 3 ಬಾರಿ ಸಚಿವರಾದರೆ, ಉಪ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದ ಗೀತಾ ಮಹದೇವ ಪ್ರಸಾದ್ ಕೂಡ ಸಚಿವರಾಗಿದ್ದರು.

2008ರಲ್ಲಿ ಬಿಜೆಪಿ, 2013ರಲ್ಲಿ ಕೆಜೆಪಿಯಿಂದ ಹೆಚ್.ಎಸ್.ಮಹದೇವ ಪ್ರಸಾದ್ ವಿರುದ್ಧ ಹಾಗೂ 2017ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಗೀತಾ ಮಹದೇವ ಪ್ರಸಾದ್ ವಿರುದ್ಧ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋಲುಂಡಿದ್ದ ಸಿ.ಎಸ್. ನಿರಂಜನ ಕುಮಾರ್ 2018 ರಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಗೆಲುವು ಸಾಧಿಸಿದ್ದಾರೆ. 1952ರಲ್ಲಿ ದ್ವಿಸದಸ್ಯ ಕ್ಷೇತ್ರವಾಗಿದ್ದು, ಆನಂತರ ಏಕ ಸದಸ್ಯ ಕ್ಷೇತ್ರವಾದ ಗುಂಡ್ಲುಪೇಟೆಯಲ್ಲಿ ನಡೆದ ಒಟ್ಟು 16 ಚುನಾವಣೆಗಳಲ್ಲಿ ಕೇವಲ 6 ಮಂದಿ ಮಾತ್ರ ಶಾಸಕರಾಗಿರುವುದು ವಿಶೇಷ.

ಮುಂದಿನ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್‌ಗಾಗಿ ಹಾಲಿ ಶಾಸಕ ಕೆ.ಎಸ್.ನಿರಂಜನ ಕುಮಾರ್ ಪ್ರಬಲ ಆಕಾಂಕ್ಷಿಯಾಗಿದ್ದರೆ, ಎಂಸಿಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಎಂ.ಪಿ. ಸುನೀಲ್ ಕೂಡ ಟಿಕೆಟ್‌ಗಾಗಿ ಪೈಪೋಟಿ ನಡೆಸಿದ್ದಾರೆ. ಕಾಂಗ್ರೆಸ್‌ನಲ್ಲಿ ಹೆಚ್.ಎಸ್.ಮಹದೇವ ಪ್ರಸಾದ್ ಪುತ್ರ ಗಣೇಶ್ ಪ್ರಸಾದ್ ಪ್ರಬಲ ಆಕಾಂಕ್ಷಿಯಾಗಿದ್ದು, 1999ರಲ್ಲಿ ಮಹದೇವ ಪ್ರಸಾದ್ ಜೆಡಿಯು ಅಭ್ಯರ್ಥಿಯಾಗಿ, 2004ರಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾಗ ಅವರ ವಿರುದ್ಧ ಆ ಚುನಾವಣೆಗಳಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಪರಾಭವಗೊಂಡಿದ್ದ ಕಾಡಾ ಮಾಜಿ ಅಧ್ಯಕ್ಷ ಹೆಚ್.ಎಸ್.ನಂಜಪ್ಪ ಅವರೂ ಕೂಡ ಕಾಂಗ್ರೆಸ್ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದಾರೆ. ಗಣೇಶ್‌ಪ್ರಸಾದ್ ಅವರಿಗೆ ಮಹದೇವ ಪ್ರಸಾದ್ ಅವರ ಪುತ್ರ ಎಂಬುದು ಪ್ಲಸ್ ಪಾಯಿಂಟ್ ಆದರೆ, ಅದೇ ಮಹದೇವ ಪ್ರಸಾದ್ ವಿರುದ್ಧ 2 ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡಿರುವುದು ಹೆಚ್.ಎಸ್. ನಂಜಪ್ಪ ಅವರಿಗೆ ಪ್ಲಸ್ ಪಾಯಿಂಟ್ ಆಗಿದೆ.

ಈ ಕ್ಷೇತ್ರದಲ್ಲಿ ನಡೆದ 16 ಚುನಾವಣೆಗಳ ಪೈಕಿ 8ರಲ್ಲಿ ಕಾಂಗ್ರೆಸ್, 3ರಲ್ಲಿ ಜನತಾ ಪರಿವಾರ, ಒಮ್ಮೆ ಬಿಜೆಪಿ, 3 ಬಾರಿ ಪಕ್ಷೇತರರು ಗೆಲುವು ಸಾಧಿಸಿದ್ದರೂ ಕೂಡ ಗುಂಡ್ಲುಪೇಟೆ ಮತದಾರರು ಪಕ್ಷಕ್ಕಿಂತ ವ್ಯಕ್ತಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಾ ಬಂದಿದ್ದಾರೆ. ಇದಕ್ಕೆ ಉದಾಹರಣೆ ಎಂದರೆ 7 ಬಾರಿ ಗೆಲುವು ಸಾಧಿಸಿದ್ದ ನಾಗರತ್ನಮ್ಮ 2 ಬಾರಿ ಪಕ್ಷೇತರರಾಗಿ ಹಾಗೂ 5 ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದಾರೆ. 5 ಬಾರಿ ಸತತವಾಗಿ ಗೆದ್ದಿರುವ ಮಹದೇವ ಪ್ರಸಾದ್ ಅವರು ಜನತಾ ದಳ, ಜೆಡಿಯು ಮತ್ತು ಜೆಡಿಎಸ್‌ನಿಂದ ತಲಾ ಒಮ್ಮೆ ಹಾಗೂ ಕಾಂಗ್ರೆಸ್‌ನಿಂದ 2 ಬಾರಿ ಜಯ ಗಳಿಸಿದ್ದಾರೆ. ಜೆಡಿಎಸ್ ಟಿಕೆಟ್‌ಗಾಗಿ ಉದ್ಯಮಿ ರಾಜೂಗೌಡ ಮತ್ತು ರೈತ ಮುಖಂಡ ಕಡಬೂರು ಮಂಜುನಾಥ್ ಪ್ರಯತ್ನಿಸುತ್ತಿದ್ದು, ಬಿಎಸ್‌ಪಿ ಕೂಡ ಈ ಕ್ಷೇತ್ರದಿಂದ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಸಾಧ್ಯತೆ ಇದೆ.

ವಿಕಲಚೇತನರ ನೂತನ ಬಸ್ ಪಾಸ್, ನವೀಕರಣಕ್ಕಾಗಿ ಅವಕಾಶ

ಚಾಮರಾಜನಗರ, ಡಿ.27– ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ 2023ನೇ ಸಾಲಿನ ವಿಕಲಚೇತನರ ರಿಯಾಯಿತಿ ಬಸ್‌ಪಾಸ್‌ಗಳನ್ನು ಪಡೆಯಲು ಹಾಗೂ ನವೀಕರಣಕ್ಕಾಗಿ ಅವಕಾಶ ಕಲ್ಪಿಸಲಾಗಿದೆ.

ಬಸ್‌ಪಾಸ್‌ಗಳನ್ನು ಪಡೆಯಲು ಸೇವಾಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಿ ಪಾಸ್‌ಗಳ ನವೀಕರಣ ಮತ್ತು ನೂತನ ಪಾಸ್‌ಗಳಿಗೆ 660 ರೂ. ಶುಲ್ಕವನ್ನು ನಗದಾಗಿ ಪಾವತಿಸಿ ನವೀಕರಿಸಿಕೊಳ್ಳಬಹುದಾಗಿದೆ. 2022ನೇ ಸಾಲಿನಲ್ಲಿ ವಿತರಿಸಲಾಗಿರುವ ಡಿ.31 ರವರೆಗೆ ಮಾನ್ಯತೆ ಇರುವ ವಿಕಲಚೇತನರ ಪಾಸ್‌ಗಳನ್ನು ಫೆ.28 ರವರೆಗೆ ಮಾನ್ಯ ಮಾಡಲಾಗುವುದು.

ಚಾಮರಾಜನಗರ, ಯಳಂದೂರು, ಟಿ. ನರಸೀಪುರ ತಾಲೂಕಿಗೆ ಸಂಬಂಧಿಸಿದಂತೆ ಚಾಮರಾಜನಗರ ಬಸ್ ನಿಲ್ದಾಣದಲ್ಲಿ, ಗುಂಡ್ಲುಪೇಟೆ ತಾಲೂಕಿಗೆ ಸಂಬಂಧಿಸಿದಂತೆ ಗುಂಡ್ಲುಪೇಟೆ ಬಸ್ ನಿಲ್ದಾಣ, ಕೊಳ್ಳೇಗಾಲ, ಹನೂರು ತಾಲೂಕಿಗೆ ಸಂಬಂಧಿಸಿದಂತೆ ಕೊಳ್ಳೇಗಾಲ ಘಟಕದಲ್ಲಿ ಹಾಗೂ ನಂಜನಗೂಡು ತಾಲೂಕಿಗೆ ಸಂಬಂಧಿಸಿದಂತೆ ನಂಜನಗೂಡು ಹೊಸ ಬಸ್ ನಿಲ್ದಾಣದಲ್ಲಿ 2023ನೇ ಸಾಲಿನ ವಿಕಲಚೇತನರ ರಿಯಾಯಿತಿ ಬಸ್ ಪಾಸ್‌ಗಳನ್ನು ನವೀಕರಿಸಲಾಗುವುದು ಎಂದು ಕೆಎಸ್‌ಆರ್‌ಟಿಸಿ ಚಾಮರಾಜನಗರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಗ್ರಾಹಕರ ದಿನಾಚರಣೆ

ಚಾಮರಾಜನಗರ, ಡಿ.27– ಜಿಲ್ಲಾಡಳಿತ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ, ಅಳತೆ ಮತ್ತು ತೂಕ ಮಾಪನ ಇಲಾಖೆ ಹಾಗೂ ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರ ಆಶ್ರಯದಲ್ಲಿ ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಕಾರ್ಯಕ್ರಮವನ್ನು ಡಿ.28ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜೆ.ಎಚ್. ಪಟೇಲ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಗ್ರಾಹಕ ಆಯೋಗದಲ್ಲಿ ಪ್ರಕರಣಗಳ ಪರಿಣಾಮಕಾರಿ ವಿಲೇವಾರಿ ಎಂಬ ಘೋಷವಾಕ್ಯದೊಂದಿಗೆ ಈ ಬಾರಿಯ ರಾಷ್ಟ್ರೀಯ ಗ್ರಾಹಕ ದಿನ ಆಚರಿಸಲಾಗುತ್ತಿದ್ದು, ಕಾರ್ಯಕ್ರಮವನ್ನು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಎ.ಕೆ. ನವೀನ್ ಕುಮಾರಿ ಉದ್ಘಾಟಿಸುವರು. ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅಧ್ಯಕ್ಷತೆ ವಹಿಸುವರು.

ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯರಾದ ಶ್ರೀನಿಧಿ, ಭಾರತಿ, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ. ಶ್ರೀಧರ, ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರ, ಶ್ರೀಗಂಧ ಮಹಿಳಾ ಅಭಿವೃದ್ಧಿ ಸಂಘದ ಶಿವರಾಜಮ್ಮ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಕ್ವಾರಿಯಲ್ಲಿ ಬಂಡೆ ಕುಸಿದು ಮೂವರು ಕಾರ್ಮಿಕರು ಸಾವು ಪ್ರಕರಣ

ಕ್ವಾರಿ ಮಾಲಕಿ ಸೇರಿ ನಾಲ್ವರ ವಿರುದ್ಧ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ನ್ಯಾಯಾಲಯದಲ್ಲಿ ಪ್ರತ್ಯೇಕ ಪ್ರಕರಣ

ಇದಕ್ಕೂ ಮುನ್ನ ಮೃತನೋರ್ವನ ಪತ್ನಿಯಿಂದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು

ಚಾಮರಾಜನಗರ, ಡಿ.27– ಚಾಮರಾಜನಗರ ತಾಲೂಕಿನ ಬಿಸಲವಾಡಿ ಗ್ರಾಮದ ಬಳಿ ಬಿಳಿಕಲ್ಲು ಕ್ವಾರಿಯಲ್ಲಿ ಬಂಡೆ ಕುಸಿದು ಮೂವರು ಕಾರ್ಮಿಕರು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲೆಯ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಉಪನಿರ್ದೇಶಕ ಕೆ.ಎಂ. ನಂಜುಂಡಸ್ವಾಮಿ ಅವರು ಗಣಿ ಮಾಲಕಿ ಕೆ.ರೇಣುಕಾದೇವಿ, ಮ್ಯಾನೇಜರ್ ವರ್ಷ ಹಾಗೂ ಕ್ವಾರಿಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಚಂದ್ರಶೇಖರ್ ಮತ್ತು ಮಹದೇವ ಎಂಬುವವರ ವಿರುದ್ಧ ನ್ಯಾಯಾಲಯದಲ್ಲಿ ಪ್ರತ್ಯೇಕ ಪ್ರಕರಣ ದಾಖಲಿಸಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತಾವು ಚಾಮರಾಜನಗರ ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಿಸಲು ತೆರಳಿದಾಗ, ಅಲ್ಲಿನ ಇನ್ಸ್‌ಪೆಕ್ಟರ್, ಈಗಾಗಲೇ ಮೃತ ಕಾರ್ಮಿಕನೊಬ್ಬನ ಪತ್ನಿ ದೂರು ದಾಖಲಿಸಿದ್ದಾರೆ ಎಂದು ತಿಳಿಸಿ, ತಮ್ಮ ದೂರು ಸ್ವೀಕರಿಸಲು ನಿರಾಕರಿಸಿದ ಹಿನ್ನೆಲೆಯಲ್ಲಿ ತಾವು ನ್ಯಾಯಾಲಯದಲ್ಲಿ ಪ್ರತ್ಯೇಕ ಪ್ರಕರಣ ದಾಖಲಿಸಿದ್ದಾಗಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಉಪ ನಿರ್ದೇಶಕ ನಂಜುಂಡಸ್ವಾಮಿ ಮೈಸೂರು ಮಿತ್ರ'ನಿಗೆ ತಿಳಿಸಿದರು.


ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಹೆಚ್ಚುವರಿ ನಿರ್ದೇಶಕ ಮತ್ತು ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸುತ್ತಿರುವುದು.

ಇದಕ್ಕೂ ಮುನ್ನ ಮೃತ ಕಾರ್ಮಿಕರಲ್ಲಿ ಒಬ್ಬನಾದ ಕುಮಾರ ಎಂಬಾತನ ಪತ್ನಿ ಭಾಗ್ಯ ಎಂಬಾಕೆ ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕ್ವಾರಿ ಮ್ಯಾನೇಜರ್ ಶರವಣ ಹಾಗೂ ಇತರರ ವಿರುದ್ಧ ದೂರು ದಾಖಲಿಸಿದ್ದಾರೆ.

ಕ್ವಾರಿಯಲ್ಲಿ ಕಾರ್ಮಿಕರನ್ನು ಅಪಾಯಕಾರಿ ಕೆಲಸಕ್ಕೆ ನಿಯೋಜಿಸಿದ್ದಾರೆ. ಮಾನವ ಜೀವಕ್ಕೆ ಅಪಾಯವಾಗುತ್ತಿದೆ ಎಂದು ಅರಿವಿದ್ದರೂ ಯಾವುದೇ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳದೆ ನಿರ್ಲಕ್ಷತೆ ವಹಿಸಲಾಗಿದೆ. ಕಾರ್ಮಿಕರ ಸಾವಿಗೆ ಕಾರಣರಾದ ಕ್ವಾರಿಯ ಮ್ಯಾನೇಜರ್ ಶರವಣ ಹಾಗೂ ಇತರರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ದೂರಿನಲ್ಲಿ ತಿಳಿಸಲಾಗಿದೆ. ಇತರರು ಎಂದರೆ ಕ್ವಾರಿ ಮಾಲೀಕರಾದ ರೇಣುಕಾದೇವಿಯೂ ಸೇರಿದ್ದಾರೆ ಎಂದು ಗ್ರಾಮಾಂತರ ಠಾಣೆಯ ಇನ್‌ಸ್ಪೆಕ್ಟರ್ ತಿಳಿಸಿದರು.

ಮೃತ ಕಾರ್ಮಿಕನ ಪತ್ನಿ ಪೊಲೀಸರಿಗೆ ನೀಡಿರುವ ದೂರಿನಲ್ಲಿ ಮ್ಯಾನೇಜರ್ ಹೆಸರನ್ನು ಶರವಣ ಎಂದು ನಮೂದಿಸಿದ್ದರೆ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಉಪ ನಿರ್ದೇಶಕರು ನ್ಯಾಯಾಲಯದಲ್ಲಿ ದಾಖಲಿಸಿರುವ ಪ್ರಕರಣದಲ್ಲಿ ಮ್ಯಾನೇಜರ್ ಹೆಸರನ್ನು ವರ್ಷ ಎಂದು ನಮೂದಿಸಲಾಗಿದೆ. ಈ ಕ್ವಾರಿಯ ಮ್ಯಾನೇಜರ್ ಯಾರು? ಎಂಬುದರ ಬಗ್ಗೆ ಗೊಂದಲ ಉಂಟಾಗಿದ್ದು, ಈ ವಿಚಾರದಲ್ಲಿ ಪೊಲೀಸ್ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನಡುವೆ ಸಮನ್ವಯ ಕೊರತೆ ಇರಬಹುದು ಎಂಬ ಮಾತುಗಳು ಕೇಳಿಬರುತ್ತಿವೆ.

ಅಂತ್ಯಕ್ರಿಯೆ: ನಗರದ ಸಿಮ್ಸ್ ಆಸ್ಪತ್ರೆಯಲ್ಲಿ ಸೋಮವಾರ ರಾತ್ರಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಶವಗಳನ್ನು ಒಪ್ಪಿಸಲಾಯಿತು. ಅಂತ್ಯಕ್ರಿಯೆ ಸ್ವಗ್ರಾಮ ಕಾಗಲವಾಡಿ ಮೋಳೆಯಲ್ಲಿ ನಡೆಸಲಾಯಿತು.

ಸರ್ಕಾರಕ್ಕೆ ವರದಿ: ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಹೆಚ್ಚುವರಿ ನಿರ್ದೇಶಕ ಮಹಂತೇಶ್, ಸುರಕ್ಷಿತ ವಿಭಾಗದ ನಿರ್ದೇಶಕ ಮುರುಳಿಧರನ್ ಬಿದರಿ ಅವರು ಮಂಗಳವಾರ ಬಿಸಲವಾಡಿಯಲ್ಲಿ ಸಂಭವಿಸಿದ ಗಣಿ ದುರಂತ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಚಾ.ನಗರ ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ; ಬಡ ಕಾರ್ಮಿಕರ ಪ್ರಾಣಕ್ಕೆ ಬೆಲೆ ಇಲ್ಲವೇ?

ಚಾಮರಾಜನಗರ, ಡಿ.27– ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದು, ಆಗಾಗ್ಗೆ ಅವಘಡಗಳು ಸಂಭವಿಸುತ್ತಿವೆ. ಇದರಿಂದ ಬಡ ಕೂಲಿ ಕಾರ್ಮಿಕರು ಪ್ರಾಣ ಕಳೆದುಕೊಳ್ಳುತ್ತಿದ್ದು, ಇವರ ಪ್ರಾಣಕ್ಕೆ ಬೆಲೆ ಇಲ್ಲವೇ? ಎಂಬ ಪ್ರಶ್ನೆ ಪ್ರಜ್ಞಾವಂತ ನಾಗರಿಕರನ್ನು ಕಾಡುತ್ತಿದೆ.

ಗುಂಡ್ಲುಪೇಟೆ ತಾಲೂಕಿನ ಮಡಹಳ್ಳಿ ಗ್ರಾಮದ ಬಳಿ ಮಾರ್ಚ್ 4ರಂದು ಕ್ವಾರಿಯ ಗುಡ್ಡ ಕುಸಿದು ಉತ್ತರ ಪ್ರದೇಶ ಮೂಲದ ಮೂವರು ಕಾರ್ಮಿಕರು ಮೃತಪಟ್ಟಿದ್ದರು. ಈ ದುರಂತ ನಡೆದು ವರ್ಷ ಕಳೆಯುವ ಮುನ್ನವೇ ಇಂತಹ ದುರಂತವೊಂದು ಚಾಮರಾಜನಗರ ತಾಲೂಕಿನ ಬಿಸಲವಾಡಿ ಗ್ರಾಮದ ಬಳಿ ಸಂಭವಿಸಿ ಸ್ಥಳೀಯ ಮೂವರು ಬಡ ಕೂಲಿ ಕಾರ್ಮಿಕರು ಸಾವನ್ನಪ್ಪಿದ್ದಾರೆ. ಕ್ವಾರಿಗಳಲ್ಲಿ ಕಾರ್ಮಿಕರ ರಕ್ಷಣೆಗಾಗಿ ಅನುಸರಿಸಬೇಕಾದ ನಿಯಮಗಳನ್ನು ಪಾಲಿಸದೇ ಇರುವುದು ಸ್ಪಷ್ಟವಾಗಿರುವುದರಿಂದ ಜಿಲ್ಲೆಯಲ್ಲಿ ಪದೇ ಪದೆ ಗಣಿ ದುರಂತ ಸಂಭವಿಸುತ್ತಲೇ ಇದೆ. ಇದಲ್ಲದೇ ಸರ್ಕಾರದ ನಿಯಮಗಳನ್ನು ಪಾಲಿಸದೇ ಇರುವುದು ಸಹ ಕಂಡು ಬರುತ್ತಿದ್ದು, ಇದು ಸ್ಥಳೀಯರ ಆಕ್ರೋಶಕ್ಕೆ ಕಾರಣವಾಗಿದೆ.

ಜಿಲ್ಲೆಯಲ್ಲಿ ಒಟ್ಟು 165 ಕ್ವಾರಿಗಳು ನಡೆಯುತ್ತಿವೆ. ಇದರಲ್ಲಿ 107 ಕ್ವಾರಿಗಳು ಕಪ್ಪು ಶಿಲೆಗಳಾಗಿವೆ. ಇನ್ನುಳಿದ 58 ಕ್ವಾರಿಗಳು ಬಿಳಿಕಲ್ಲಿನದ್ದಾಗಿದೆ ಎಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಉಪನಿರ್ದೇಶಕ ಕೆ.ಎಂ. ನಂಜುಂಡಸ್ವಾಮಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಜಿಲ್ಲೆಯಲ್ಲಿ 165ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕ್ವಾರಿಗಳು ನಡೆಯುತ್ತಿವೆ. ಅನುಮತಿ ಪಡೆದ ವಿಸ್ತೀರ್ಣಕ್ಕಿಂತ ಹೆಚ್ಚು ಜಾಗದಲ್ಲಿ ಕಲ್ಲುಗಳನ್ನು ತೆಗೆಯಲಾಗುತ್ತಿದೆ. ಸರ್ಕಾರದ ನೀತಿ–ನಿಯಮಗಳನ್ನು ಸಂಪೂರ್ಣವಾಗಿ ಗಾಳಿಗೆ ತೂರಿ ಜಿಲ್ಲೆಯಲ್ಲಿ ಎಗ್ಗಿಲ್ಲದೇ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ. ಈ ಬಗ್ಗೆ ಜಿಲ್ಲಾಡಳಿತವಾಗಲಿ ಅಥವಾ ಸಂಬಂಧಪಟ್ಟ ಅಧಿಕಾರಿಗಳಾಗಲಿ ಗಮನ ಹರಿಸುತ್ತಿಲ್ಲ ಎಂದು ಪರಿಸರವಾದಿಗಳು ಆರೋಪಿಸಿದ್ದಾರೆ.

ಜಿಲ್ಲೆಯಲ್ಲಿ ಗಣಿಗಾರಿಕೆಯನ್ನು ಜನಪ್ರತಿನಿಧಿಗಳು, ರಾಜಕಾರಣಿಗಳು, ಪ್ರಭಾವಿಗಳು ಹಾಗೂ ಉಳ್ಳವರು ನಡೆಸುತ್ತಿರುವುದರಿಂದ ಅಧಿಕಾರಿ ವರ್ಗ ಕೈಕಟ್ಟಿ ಕುಳಿತಿದೆ ಎಂಬ ಆರೋಪ ಕೇಳಿ ಬಂದಿದೆ.

ಜಿಲ್ಲೆಯಲ್ಲಿ ದೊರೆಯುವ ಕಪ್ಪು ಶಿಲೆಗೆ ದೇಶ ವಿದೇಶಗಳಿಂದಲೂ ಭಾರೀ ಬೇಡಿಕೆ ಇದೆ. ಹೀಗಾಗಿ, ಜಿಲ್ಲೆಯಲ್ಲಿ ಗಣಿಗಾರಿಕೆ ನಡೆಸಲು ಜಿಲ್ಲೆಯವರಲ್ಲದೇ ಹೊರಗಿನವರು ಸಹ ಬಹಳ ಆಸಕ್ತಿ ವಹಿಸುವುದು ಗುಟ್ಟಾಗಿ ಉಳಿದಿಲ್ಲ. ಹೊರ ಊರಿನವರು ಸಾಕಷ್ಟು ಸಂಖ್ಯೆಯಲ್ಲಿ ಜಿಲ್ಲೆಯಲ್ಲಿ ಗಣಿಗಾರಿಕೆ ನಡೆಸುತ್ತಿರುವುದು ಸಾಕಷ್ಟು ಸಂದರ್ಭಗಳಲ್ಲಿ ಸಾಬೀತಾಗಿದೆ.

ಶ್ರೀಮಂತ ಉದ್ಯಮಿಗಳ ಹಣದಾಸೆಗೆ ಜಿಲ್ಲೆಯ ಭೂ ಒಡಲು ಬರಿದಾಗುತ್ತಿದೆ. ಭೂಮಿಯನ್ನು ನೂರಾರು ಅಡಿಗಳ ಆಳ ತೋಡಲಾಗುತ್ತಿದೆ. ಇದಕ್ಕೆ ಕೊನೆ ಎಂದು ಎಂಬ ಪ್ರಶ್ನೆ ಉದ್ಭವವಾಗಿದೆ. ಇದಲ್ಲದೇ ಬಡ ಕಾರ್ಮಿಕರ ಪ್ರಾಣ ರಕ್ಷಿಸುವರ್ಯಾರು ಎಂಬುದು ಯಕ್ಷ ಪ್ರಶ್ನೆಯಾಗಿದೆ.



ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದು, ಆಗಾಗ್ಗೆ ಕಾರ್ಮಿಕರ ಸಾವು–ನೋವುಗಳು ಸಂಭವಿಸುತ್ತಲೇ ಇದೆ. ಗಣಿ ಮಾಲೀಕರೊಂದಿಗೆ ಜಿಲ್ಲಾಡಳಿತ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಶಾಮೀಲಾಗಿರುವುದರಿಂದ ಜಿಲ್ಲೆಯಲ್ಲಿ ಎಗ್ಗಿಲ್ಲದೇ ಅಕ್ರಮ ಗಣಿಗಾರಿಕೆ ನಿರಂತರವಾಗಿ ಕಳೆದ 30–40 ವರ್ಷಗಳಿಂದ ನಡೆಯುತ್ತಿದೆ. ಜಿಲ್ಲೆಯ ಅಕ್ರಮ ಗಣಿಗಾರಿಕೆ ನಿಲ್ಲಬೇಕು. ಬಡ ಕಾರ್ಮಿಕರ ಜೀವ ಉಳಿಯಬೇಕಾಗಿದೆ.
-ಪುಣಜನೂರು ದೊರೆಸ್ವಾಮಿ, ಪರಿಸರವಾದಿ, ಚಾಮರಾಜನಗರ.


ಚಾಮರಾಜನಗರದ ಬಸವೇಶ್ವರ ಚಿತ್ರಮಂದಿರದಲ್ಲಿ ಪ್ರದರ್ಶನಗೊಳ್ಳುತ್ತಿರುವ ತಮ್ಮ ಅಭಿನಯದ 'ವೇದ' ಚಿತ್ರವನ್ನು ನಟ ಶಿವರಾಜ್‌ಕುಮಾರ್ ವೀಕ್ಷಿಸಿದರು. ಈ ವೇಳೆ ನೆಚ್ಚಿನ ನಟನಿಗೆ ಅಭಿಮಾನಿಗಳು ಅದ್ದೂರಿ ಸ್ವಾಗತ ನೀಡಿದರು. ಈ ವೇಳೆ ಗೀತಾ ಶಿವರಾಜ್‌ಕುಮಾರ್, ನಿರ್ದೇಶಕ ಹರ್ಷ ಸೇರಿದಂತೆ ಸಿನಿತಂಡದ ಕಲಾವಿದರು ಇದ್ದರು.

ನಾಳೆ ಅಸ್ಪೃಶ್ಯತೆ ಅಳಿಯಲಿ, ಮಾನವತೆ ಬೆಳಗಲಿ ಜಾಗೃತಿ ಜಾಥಾ

ಚಾಮರಾಜನಗರ, ಡಿ.27– ಕುವೆಂಪು ಜನ್ಮದಿನದ ಅಂಗವಾಗಿ ನಗರದಲ್ಲಿ ಡಿ.29 ರಂದು ಅಸ್ಪೃಶ್ಯತೆ ಅಳಿಯಲಿ, ಮಾನವತೆ ಬೆಳಗಲಿ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ಸಾಹಿತಿ ಹೊರೆಯಾಲ ದೊರೆಸ್ವಾಮಿ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಡಿ.29 ಕುವೆಂಪು ಅವರ ಜನ್ಮದಿನ. ಅವರು ಜನರಲ್ಲಿ ವೈಜ್ಞಾನಿಕ ಜಾಗೃತಿ ಆಗಬೇಕೆಂದು ಪ್ರಯತ್ನಿಸಿದರು. ತಮ್ಮ ಆರಂಭದ ಬರಹಗಳಿಂದಲೂ ವೈಚಾರಿಕತೆ, ವೈಜ್ಞಾನಿಕತೆಯನ್ನು ಪ್ರತಿಪಾದಿಸಿದರು. ಕೊನೆಗೆ ಅದರ ಸಾರ ರೂಪಿಯಾಗಿ ವಿಶ್ವಮಾನ ಸಂದೇಶವನ್ನು ಜಗತ್ತಿಗೆ ನೀಡಿದರು. ಅದು ಪಂಚಮಂತ್ರ, ಸಪ್ತಸೂತ್ರ ಮತ್ತು ವಿಶ್ವಮಾನವ ಗೀತೆಯನ್ನು ಒಳಗೊಂಡಿದೆ. ಈ ಎಲ್ಲಾ ಕಾರಣಗಳಿಂದ ನಾವು ಆ ದಿನದಂದು ಅಸ್ಪೃಶ್ಯತೆ ಅಳಿಯಲಿ, ಮಾನವತೆ ಬೆಳಗಲಿ ಎಂಬ ವಿಷಯ ಇರಿಸಿಕೊಂಡು ಜಾಗೃತಿ ಜಾಥಾ ಮಾಡುತ್ತಿದ್ದೇವೆ. ಇದು ಈ ದಾರಿಯಲ್ಲಿ ಒಂದು ಕಿರು ಪ್ರಯತ್ನದ ಮೊದಲ ಹೆಜ್ಜೆ ಎಂದರು. ಅಂದು ಬೆಳಗ್ಗೆ 10 ಗಂಟೆಗೆ ನಗರದ ಪ್ರವಾಸಿ ಮಂದಿರದಿಂದ ಜಾಥಾಕ್ಕೆ ಚಾಲನೆ ದೊರೆಯಲಿದೆ. ಜಾಥಾವು ದೊಡ್ಡಂಗಡಿ, ಚಿಕ್ಕಂಗಡಿ ಬೀದಿ, ಡಿವಿಯೇಷನ್ ರಸ್ತೆ, ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಅಲ್ಲಿ ಧರಣಿ ನಡೆಸಲಾಗುವುದು ಎಂದು ತಿಳಿಸಿದರು.

ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪಗೆ ಮಾನಸ ಪ್ರಶಸ್ತಿ, 3 ದಿನಗಳ ಕಾಲ ಮಾನಸ ಸಾಂಸ್ಕೃತಿಕ ಉತ್ಸವ

ಡಿ.30ರಂದು ಸಚಿವ ವಿ ಸೋಮಣ್ಣರಿಂದ ಪ್ರಶಸ್ತಿ ಪ್ರದಾನ

ಕೊಳ್ಳೇಗಾಲ, ಡಿ.27– ಕೊಳ್ಳೇಗಾಲದಲ್ಲಿ ಮಾನಸ ಶಿಕ್ಷಣ ಸಂಸ್ಥೆಗಳ ಸಹಯೋಗದೊಂದಿಗೆ ಡಿ.30ರಿಂದ ಮೂರು ದಿನಗಳ ಕಾಲ ಮಾನಸೋತ್ಸವ ಸಮಾರಂಭ ಜರುಗಲಿದ್ದು, ಈ ಬಾರಿ ಮಾನಸ ಪ್ರಶಸ್ತಿಯನ್ನು ಹಿರಿಯ ಜಾನಪದ ವಿದ್ವಾಂಸರಾದ ಗೊ.ರು. ಚನ್ನಬಸಪ್ಪ ಅವರಿಗೆ ನೀಡಿ ಗೌರವಿಸಲಾಗುವುದು ಎಂದು ಮಾನಸ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಡಾ.ದತ್ತೇಶ್ ಕುಮಾರ್ ಹೇಳಿದರು



ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಡಿ 30, 31 ಹಾಗೂ ಜ.1ರಂದು ಮೂರು ದಿನಗಳ ಕಾಲ ಮಾನಸೋತ್ಸವ ಜರುಗಲಿದ್ದು, ಈಗಾಗಲೇ ಮುಖ್ಯಮಂತ್ರಿ ಚಂದ್ರು, ಉಮಾಶ್ರೀ, ಶ್ರೀನಿವಾಸ ಪ್ರಸಾದ್, ಡಾ. ಮಹದೇವಪ್ಪ, ಎಚ್. ಎಸ್ ದೊರೆಸ್ವಾಮಿ ಸೇರಿದಂತೆ ಅನೇಕ ಗಣ್ಯರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದ್ದು ಡಿ.30ರ ಮೊದಲ ದಿನದ ಸಮಾರಂಭವನ್ನು ಜಿಲ್ಲಾ ಉಸ್ತುವಾರಿ ಸಚಿವರಾದ ಸೋಮಣ್ಣ ಅವರು ಉದ್ಘಾಟಿಸುವರು. ಹಿರಿಯ ಜಾನಪದ ವಿದ್ವಾಂಸರಾದ ಗೊ.ರು. ಚನ್ನಬಸಪ್ಪ ಅವರಿಗೆ ಇದೆ ವೇಳೆ ಮಾನಸ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಆದಿಚುಂಚನಗಿರಿ ಶಾಖಾ ಮಠದ ಕಾರ್ಯದರ್ಶಿಗಳಾದ ಶ್ರೀ ಸೌಮ್ಯನಾಥಸ್ವಾಮಿ ಸಾನ್ನಿಧ್ಯ ವಹಿಸುವರು.

ಹಿರಿಯರು, ದೀನಬಂಧು ಸಂಸ್ಥಾಪಕರಾದ ಪ್ರೊ. ಜಯದೇವ, ಸೇವಾ ಭಾರತಿ ಸಂಸ್ಥೆಯ ವೆಂಕಟರಾಮ್ ಜಿ, ಪ್ರೊ ಡಾ. ಎಸ್. ಶಿವರಾಜಪ್ಪ ಇನ್ನಿತರರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 1 ಗಂಟೆಗೆ ಕಾಲೇಜು ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ, 3 ಗಂಟೆಗೆ ನಿಸರ್ಗ ವಿದ್ಯಾನಿಕೇತನ ಶಾಲಾ ವಾರ್ಷಿಕೋತ್ಸವ, ಪ್ರತಿಭಾ ಪುರಸ್ಕಾರದಲ್ಲಿ ಮಾಜಿ ಶಾಸಕಿ ಪರಿಮಳಾ ನಾಗಪ್ಪ, ಡಾ. ಎಸ್. ಶ್ರೀಕಂಠಸ್ವಾಮಿ, ಪ್ರೇಮಲತಾ ಕೃಷ್ಣಸ್ವಾಮಿ, ನಗರಸಭೆ ಅಧ್ಯಕ್ಷೆ ರೇಖಾ, ಡಿಡಿಪಿಐ ಮಂಜುನಾಥ್, ಬಿಇಓ ಚಂದ್ರಪಾಟೀಲ್ ಪಾಲ್ಗೊಳ್ಳಲಿದ್ದಾರೆ. ಸಂಜೆ 5 ಗಂಟೆಗೆ ಸಾಂಸ್ಕೃತಿಕ ಕಲವರ ಜರುಗಲಿದೆ

ಡಿ.31ರಂದು ಬೆಳಗ್ಗೆ ಸಾಂಸ್ಕೃತಿಕ ಸಡಗರ, 11 ಗಂಟೆಗೆ ಗುರುವಂದನೆ ಕಾರ್ಯಕ್ರಮ ಜರುಗಲಿದ್ದು, ಶಾಸಕ ನಿರಂಜನ್‌ಕುಮಾರ್, ಸಾಲೂರು ಮಠದ ಶಾಂತಮಲ್ಲಿಕಾರ್ಜುನಸ್ವಾಮೀಜಿ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ರಾಜಶೇಖರ್, ಜಿಲ್ಲಾಧಿಕಾರಿ ರಮೇಶ್, ಎಎಸ್ಪಿ ಸುಂದರರಾಜು ಪಾಲ್ಗೊಳ್ಳಲಿದ್ದಾರೆ. 1 ಗಂಟೆಗೆ ಮಿಮಿಕ್ರಿ ಗೋಪಿ ಅವರಿಂದ ನಗೆಹಬ್ಬ, 3 ಗಂಟೆಗೆ ಚಲನಚಿತ್ರ ನಿರ್ದೇಶಕರೂ ಹಾಗೂ ಸಾಹಿತಿ ವಿ.ನಾಗೇಂದ್ರಪ್ರಸಾದ್ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ಜರುಗಲಿದ್ದು, ಸಂಜೆ ಕವನ ವಾಚನ, ಜಾನಪದ ವೈವಿಧ್ಯ, ಸಾಂಸ್ಕೃತಿಕ ಸಂಜೆ ಕಾರ್ಯಕ್ರಮಗಳು ಜರುಗಲಿವೆ.

ಜ.1 ರಂದು ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಸಾನಿಧ್ಯವನ್ನು ಸಿದ್ದಲಿಂಗಶಿವಾಚಾರ್ಯ ಸ್ವಾಮೀಜಿ ವಹಿಸಲಿದ್ದಾರೆ, ಮಧ್ಯಾಹ್ನ ಮೈಸೂರಿನ ಮೈಮು ತಂಡದವರಿಂದ ಷೋ, 3 ಗಂಟೆಗೆ ಸಮಾರೋಪ ಹಾಗೂ ಸಾಧಕರಿಗೆ ಸನ್ಮಾನ ಆಯೋಜಿಸಲಾಗಿದ್ದು, ಶಾಸಕ ಮಹೇಶ್, ಸಂಸದ ಶ್ರೀನಿವಾಸಪ್ರಸಾದ್, ಹುಬ್ಬಳ್ಳಿ ಕಾನೂನು ವಿಶ್ವವಿದ್ಯಾನಿಲಯದ ಕುಲಪತಿ ಬಸವರಾಜು, ಎಸ್ಪಿ ಶಿವಕುಮಾರ್ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ವಿವರಿಸಿದರು.

ಚಿಕ್ಕಕೆರೆ ಉದ್ಯಾನವನ್ನಾಗಿ ಅಭಿವೃದ್ಧಿಪಡಿಸಲು ಹೆಚ್ಚಿನ ಅನುದಾನ: ಶಾಸಕ ನಿರಂಜನ್



ಗುಂಡ್ಲುಪೇಟೆ, ಡಿ.27– ಪಟ್ಟಣದ ಚಿಕ್ಕಕೆರೆಯನ್ನು ಉದ್ಯಾನವನ್ನಾಗಿ ಅಭಿವೃದ್ಧಿಪಡಿಸಲು ಹೆಚ್ಚಿನ ಅನುದಾನ ನೀಡಲಾಗುವುದು ಎಂದು ಶಾಸಕ ಸಿ.ಎಸ್. ನಿರಂಜನ ಕುಮಾರ್ ಭರವಸೆ ನೀಡಿದರು.

ಪಟ್ಟಣದಲ್ಲಿರುವ ಚಿಕ್ಕಕೆರೆಯಲ್ಲಿ ಗುಂಡ್ಲು ಪರಿಸರ ಬಳಗದ ವತಿಯಿಂದ ಕೆರೆಯ ಸುತ್ತಲೂ ಪಾದಚಾರಿ ರಸ್ತೆ ನಿರ್ಮಿಸಿ ಮೈಸೂರಿನ ಕುಕ್ಕರಹಳ್ಳಿ ಕೆರೆ ಮಾದರಿಯಲ್ಲಿ ನಿರ್ಮಿಸಲು ಶ್ರಮದಾನ ಮಾಡುತ್ತಿರುವ ಹಿನ್ನೆಲೆಯಲ್ಲಿ ಕೆರೆಯಂಗಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಅವರು ಮಾತನಾಡಿದರು.

ತಾವು ಶಾಸಕರಾಗಿ ಆಯ್ಕೆಯಾದ ನಂತರ ಕ್ಷೇತ್ರದಲ್ಲಿ ಕೆರೆಗಳ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದ್ದು ಹೊಸದಾಗಿ 5 ಕೆರೆಗಳನ್ನು ನಿರ್ಮಿಸಲಾಗಿದೆ. ನದಿ ಮೂಲದಿಂದ ಕೆರೆಗಳಿಗೆ ನೀರು ತುಂಬಿಸುತ್ತಿದ್ದು ತಾಲೂಕು ಸಮೃದ್ಧಿಯತ್ತ ಸಾಗುತ್ತಿದೆ. ಚಿಕ್ಕಕೆರೆಯನ್ನು ಉದ್ಯಾನವಾಗಿ ಅಭಿವೃದ್ಧಿಪಡಿಸಿದರೆ ಪಟ್ಟಣದ ನಾಗರಿಕರ ವಾಯುವಿಹಾರಕ್ಕೆ ಪ್ರಶಸ್ತ ತಾಣವಾಗಲಿದೆ. ಸಣ್ಣ ನೀರಾವರಿ, ಜಿಪಂ, ಪುರಸಭೆ ಹಾಗೂ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಹಾಗೂ ಆಸಕ್ತ ಪರಿಸರ ಪ್ರೇಮಿಗಳನ್ನು ಒಳಗೊಂಡ ಸಮಿತಿ ರಚಿಸಿ ಸೂಕ್ತ ಸಲಹೆ ನೀಡಿದರೆ ಇದರ ಅಭಿವೃದ್ಧಿಗೆ ಅಗತ್ಯವಾದ ಅನುದಾನವನ್ನು ತಮ್ಮ ನಿಧಿಯಿಂದಲೇ ನೀಡಲಾಗುವುದು. ಈ ನಿಟ್ಟಿನಲ್ಲಿ ಗುಂಡ್ಲು ಪರಿಸರ ಬಳಗವು ಉತ್ತಮ ಕಾರ್ಯಕ್ಕೆ ಕೈ ಹಾಕಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಎನ್. ಮಲ್ಲೇಶ್ ಮಾತನಾಡಿ, ಪಟ್ಟಣದ ಕುಡಿಯುವ ನೀರಿನ ಪ್ರಮುಖ ಮೂಲವಾದ ಕೆರೆ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಈ ಬಾರಿ ಉತ್ತಮ ಮಳೆಬಿದ್ದು ಇತ್ತೀಚೆಗೆ ಎಲ್ಲಾ ಕೆರೆಗಳಿಗೆ ನೀರು ತುಂಬಿದರೂ ಚಿಕ್ಕ ಕೆರೆಗೆ ನೀರು ಬರುತ್ತಿರಲಿಲ್ಲ. ಗುಂಡ್ಲು ಪರಿಸರ ಬಳಗದ ವತಿಯಿಂದ ಯುವಕರು ಶ್ರಮದಾನ ಮಾಡಿ ಮುಚ್ಚಿಹೋಗಿದ್ದ ಕಾಲುವೆಯ ಹೂಳೆತ್ತಿದ್ದರಿಂದ ನೀರು ತುಂಬಿಕೊಳ್ಳುತ್ತಿದ್ದು ಸದ್ಯದಲ್ಲಿಯೇ ಕೋಡಿ ಬೀಳಲಿದೆ. ಪಟ್ಟಣದ ಜನತೆಗೆ ಉತ್ತಮ ಪರಿಸರ ದೊರಕಲಿದೆ.

ನಾಗಾರ್ಜುನಕುಮಾರ್, ಮಧುಕುಮಾರ್, ಸಚಿನ್, ಆರ್.ಕೆ.ಮಧು, ಜಿ.ಜಿ. ಮಲ್ಲಿಕಾರ್ಜುನ, ಶಂಕರನಾರಾಯಣ ಇತರರಿದ್ದರು.

ಒಂದನೇ ಪುಟದಿಂದ

43 ಹಾಲಿ ಶಾಸಕರಿಗೆ ಟಿಕೆಟ್ ಕೈತಪ್ಪುವ ಸಾಧ್ಯತೆ

ಅಲ್ಲಿನ ನಾಯಕರು ಲಘುವಾಗಿ ತೆಗೆದುಕೊಂಡಿದ್ದೇ ಪಕ್ಷದ ಸೋಲಿಗೆ ಕಾರಣವಾಯಿತು. ಹಿಮಾಚಲ ನಮಗೆ ಬುದ್ಧಿ ಕಲಿಸಿದೆ. ಅದು ಕರ್ನಾಟಕದಲ್ಲಿ ಪುನರಾವರ್ತನೆಯಾಗಲು ಬಿಡುವುದಿಲ್ಲ. ಮುಂದೆ ನಾವು ಹೇಳಿದಂತೆ ನೀವು ನಡೆದುಕೊಂಡು ಹೋಗಿ.

ನಾವು ಚುನಾವಣೆ ನಡೆಸುತ್ತೇವೆ, ಅದನ್ನು ಯಥಾವತ್ತಾಗಿ ಪಾಲಿಸಿ. ಕಾಂಗ್ರೆಸ್ ಮತ್ತು ಜೆಡಿಎಸ್‌ಗೆ ಕೆಲವರು ಚುನಾವಣಾ ವೆಚ್ಚ ತಲುಪಿಸುತ್ತಿದ್ದಾರೆ. ಇದು ನಿಮಗೆ ತಿಳಿದಿಲ್ಲವೇ. ಆ ಮೂಲವನ್ನು ಪತ್ತೆ ಹಚ್ಚಿ ನಮಗೆ ಮಾಹಿತಿ ನೀಡಿ ಎಂದು ವರಿಷ್ಠರು ಮುಖ್ಯಮಂತ್ರಿಯವರಿಗೆ ತಿಳಿಸಿದ್ದಾರೆ ಎನ್ನಲಾಗಿದೆ. ನಿನ್ನೆ ದಿಲ್ಲಿಗೆ ದೌಡಾಯಿಸಿದ್ದ ಬಸವರಾಜ ಬೊಮ್ಮಾಯಿ ಅವರು ಕೇಂದ್ರ ಗೃಹ ಸಚಿವ ಅಮಿತ್ ಷಾ ಮತ್ತು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಜತೆ ಸುದೀರ್ಘ ಚರ್ಚೆ ನಡೆಸಿದರಾದರೂ ತಾವು ತೆಗೆದುಕೊಂಡು ಹೋದ ಅಜೆಂಡಾಗಳಿಗೆ ತಕ್ಷಣವೇ ಫಲ ದೊರೆಯಲಿಲ್ಲ.

ಬದಲಿಗೆ,ರಾಜ್ಯ ಸಚಿವ ಸಂಪುಟವನ್ನು ವಿಸ್ತರಿಸುವ ಕುರಿತು ಮತ್ತೊಮ್ಮೆ ಮಾತುಕತೆ ನಡೆಸೋಣ ಎಂದ ಅಮಿತ್ ಷಾ ಮತ್ತು ನಡ್ಡಾ ಅವರು,ಪಂಚಮಸಾಲಿಗಳಿಗೆ ಮೀಸಲಾತಿ ಒದಗಿಸಿಕೊಡುವ ಪ್ರಸ್ತಾಪದ ಬಗ್ಗೆಯೂ ಒಲವು ತೋರಿಲ್ಲ.

ಪಂಚಮಸಾಲಿ ಲಿಂಗಾಯತರನ್ನು ಪ್ರವರ್ಗ 2ಎ ಅಡಿಯಲ್ಲಿ ತರುವ ಕುರಿತು ಮುಖ್ಯಮಂತ್ರಿಗಳು ನೀಡಿದ ವಿವರಣೆ ಅಮಿತ್ ಷಾ ಅವರಿಗೆ ಸಮಾಧಾನ ತರಲಿಲ್ಲ ಎಂದು ಉನ್ನತ ಮೂಲಗಳು ತಿಳಿಸಿವೆ. ಪಂಚಮಸಾಲಿ ಲಿಂಗಾಯತರನ್ನು ಪ್ರವರ್ಗ 2ಎ ಅಡಿ ಸೇರಿಸಿದರೆ ಈಗಾಗಲೇ ಈ ಪಟ್ಟಿಯಲ್ಲಿರುವ 70ಕ್ಕೂ ಅಧಿಕ ಹಿಂದುಳಿದ ವರ್ಗದ ಹೆಚ್ಚು ಜಾತಿಗಳು ನಮ್ಮ ವಿರುದ್ಧ ತಿರುಗಿಬೀಳುತ್ತವೆ ಎಂಬ ತಮಗಿರುವ ಮಾಹಿತಿಯ ಕುರಿತು ಅಮಿತ್ ಷಾ ಅವರು ವಿವರಿಸಿದಾಗ ಬೊಮ್ಮಾಯಿ ಅವರು ಹೆಚ್ಚು ಮಾತನಾಡಲು ಸಾಧ್ಯವಾಗಲಿಲ್ಲ. ಹೀಗಾಗಿ ಈ ವಿಷಯ ಕುರಿತು ಮತ್ತಷ್ಟು ಚರ್ಚೆ ನಡೆಯಲಿ.ಯಾವ ಮಾದರಿಯಲ್ಲಿ ಪಂಚಮಸಾಲಿ ಲಿಂಗಾಯತರಿಗೆ ಮೀಸಲಾತಿಯ ಸೌಲಭ್ಯ ದೊರಕಿಸಿಕೊಡಬಹುದು ಎಂಬ ಬಗ್ಗೆ ನಿಖರ ಧೋರಣೆ ತಳೆಯುವ ಅಗತ್ಯವಿದೆ ಎಂದು ಅಮಿತ್ ಷಾ ಅವರು ಹೇಳಿದಾಗ, ಆರ್ಥಿಕವಾಗಿ ದುರ್ಬಲರಿಗೆ ಶೇಕಡಾ ಹತ್ತರಷ್ಟು ಮೀಸಲಾತಿ ನೀಡಿರುವ ಕೇಂದ್ರ ಸರ್ಕಾರದ ನಿಲುವಿನ ವ್ಯಾಪ್ತಿಯಲ್ಲೇ ಪಂಚಮಸಾಲಿಗಳಿಗೆ ಅವಕಾಶ ಸೃಷ್ಟಿಸಬಹುದೇ ಎಂಬ ಬಗ್ಗೆ ಬೊಮ್ಮಾಯಿ ಪ್ರಸ್ತಾಪಿಸಿದರಾದರೂ, ಸದ್ಯಕ್ಕೆ ಈ ಕುರಿತು ಯಾವ ತೀರ್ಮಾನವೂ ಬೇಡ ಎಂದು ಅಮಿತ್ ಷಾ ಹೇಳಿದರೆನ್ನಲಾಗಿದೆ. ಕರ್ನಾಟಕದಲ್ಲಿ ಮೀಸಲಾತಿ ಕೋರಿ ಹಲವು ಜಾತಿಗಳು ಮೇಲೆದ್ದು ನಿಂತಿದ್ದು, ಈ ಹಿನ್ನೆಲೆಯಲ್ಲಿ ನಾವು ಕೈಗೊಳ್ಳುವ ತೀರ್ಮಾನ ದೂರಗಾಮಿ ನೆಲೆಯಲ್ಲಿ ನಮಗೆ ಸಂಕಷ್ಟ ತರಬಾರದು. ಹೀಗಾಗಿ ಮೀಸಲಾತಿ ವಿಷಯದಲ್ಲಿ ತರಾತುರಿ ಬೇಡ ಎಂದು ಅಮಿತ್ ಷಾ ವಿವರಿಸಿದರು ಎನ್ನಲಾಗಿದೆ. ಈ ಮಧ್ಯೆ ಹಿರಿಯ ನಾಯಕ ಕೆ.ಎಸ್.ಈಶ್ವರಪ್ಪ,ರಮೇಶ್ ಜಾರಕಿಹೊಳಿ ಸೇರಿದಂತೆ ನಾಲ್ಕು ಮಂದಿಯನ್ನು ಸಚಿವ ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳುವ ಕುರಿತು ಮುಖ್ಯ ಮಂತ್ರಿಗಳು ಮುಂದಿಟ್ಟ ಪ್ರಸ್ತಾಪಕ್ಕೆ ಅಮಿತ್ ಷಾ ನೀವು ಹೋಗಿ ನಂತರ ತಿಳಿಸುತ್ತೇವೆ ಎಂದಿದ್ದಾರೆ.

ಉಚಿತ ಚಿಕಿತ್ಸೆ: ರಾಜ್ಯ ಸರ್ಕಾರ ಘೋಷಣೆ

ಆರ್.ಅಶೋಕ್ ಅವರು, 'ನಾವು ಬೆಂಗಳೂರಿನ ಬೌರಿಂಗ್ ಆಸ್ಪತ್ರೆ ಹಾಗೂ ಮಂಗಳೂರಿನ ವೆನ್ಲಾಕ್ ಆಸ್ಪತ್ರೆಯಲ್ಲಿ ಎಲ್ಲ ಶಂಕಿತ ಪ್ರಕರಣ ಹೊಂದಿರುವವರನ್ನು ಐಸೋಲೇಟ್ ಮಾಡುತ್ತೇವೆ. ಚಿಕಿತ್ಸೆ ಕೂಡಾ ಇಲ್ಲಿ ನೀಡಲಾಗುತ್ತದೆ. ಹಾಗೆಯೇ ಕೋವಿಡ್‌ನ ಹೊಸ ತಳಿ BF.7 ಸೋಂಕಿತರಿಗೆ ಉಚಿತ ಚಿಕಿತ್ಸೆಯನ್ನು ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ. ಎಲ್ಲ ಜಿಲ್ಲೆಗಳಲ್ಲಿ ಸಮಿತಿಯನ್ನು ರಚನೆ ಮಾಡಲಾಗಿದ್ದು, ಈ ಸಮಿತಿಯು ಎಲ್ಲ ಆಸ್ಪತ್ರೆ ಹಾಗೂ ಕೋವಿಡ್ ಕೇಂದ್ರ ಮೊದಲಾದವುಗಳಿಗೆ ಭೇಟಿ ನೀಡಲಿದೆ. ಆಸ್ಪತ್ರೆಯಲ್ಲಿ ಹೇಗೆ ಸಿದ್ಧತೆ ನಡೆಸಲಾಗಿದೆ, ಆಕ್ಸಿಜನ್ ಪ್ಲಾಂಟ್ ವ್ಯವಸ್ಥೆ ಹೇಗಿದೆ, ಐಸಿಯು ವೆಂಟಿಲೇಟರ್ ಎಷ್ಟಿದೆ, ಸ್ಥಿತಿ ಹೇಗಿದೆ ಎಂದು ಪರಿಶೀಲಿಸಲಿದೆ ಎಂದು ಕೂಡಾ ಹೇಳಿದ್ದಾರೆ.

ಪ್ರಧಾನಿ ಮೋದಿ ರೋಡ್ ಶೋ

ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಲೇಬೇಕೆಂದು ಹಠಕ್ಕೆ ಬಿದ್ದಿರುವ ಬಿಜೆಪಿ ವರಿಷ್ಠರು ಮೋದಿಯವರ ವರ್ಚಸ್ಸನ್ನು ಚುನಾವಣೆಗೆ ಬಳಸಿಕೊಳ್ಳಲು ನಿರ್ಧರಿಸಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಷಾ, ಹಾಗೂ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ನಿನ್ನೆ ದೆಹಲಿಗೆ ಕರೆಸಿಕೊಂಡು ತಡರಾತ್ರಿಯವರೆಗೂ ಕರ್ನಾಟಕ ರಾಜ್ಯ ವಿಧಾನಸಭೆ ಚುನಾವಣೆಗೆ ಸಂಬಂಧಿಸಿದಂತೆ ರೋಡ್ ಮ್ಯಾಪ್ ಸಿದ್ಧಪಡಿಸಿದ್ದಾರೆ. ಪ್ರಧಾನಿ ಮೋದಿ ಅವರಲ್ಲದೆ ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯ ನಾಥ್ ಅವರು ನಗರ, ಪಟ್ಟಣ ಪ್ರದೇಶಗಳಲ್ಲಿ ರೋಡ್ ಶೋಗಳನ್ನು ನಡೆಸಲಿದ್ದಾರೆ.

ರ‍್ಯಾಲಿ ಮತ್ತು ರೋಡ್ ಶೋಗೆ ಡಿ.30ರಂದು ಮಂಡ್ಯದಿಂದಲೇ ಚಾಲನೆ ದೊರೆಯಲಿದೆ. ನಂತರ ಪ್ರಧಾನಿಯವರು 10ರಿಂದ 15 ಬಾರಿ ಚುನಾವಣೆಗೆ ಮುನ್ನ ರಾಜ್ಯದಲ್ಲಿ ರೋಡ್ ಶೋ ಮತ್ತು ರ‍್ಯಾಲಿಗಳಲ್ಲಿ ಭಾಗವಹಿಸಲಿದ್ದಾರೆ. ಮೈಸೂರು, ಮಂಗಳೂರು, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಗುಲ್ಬರ್ಗಾ, ಬೆಂಗಳೂರು ನಗರ ಹಾಗೂ ಬಳ್ಳಾರಿ ನಗರ ಪಾಲಿಕೆ ವ್ಯಾಪ್ತಿಯಲ್ಲಿ ನರೇಂದ್ರ ಮೋದಿ ಅವರು ರೋಡ್ ಶೋ ನಡೆಸಲಿದ್ದಾರೆ. ಮೈಸೂರು ನಗರ ಮತ್ತು ಗ್ರಾಮಾಂತರದಲ್ಲಿ ಪ್ರಧಾನಿ ರೋಡ್ ಶೋ ನಡೆಸಲಿದ್ದು, ಇವರು ನಡೆಸುವ ಎಲ್ಲಾ ರೋಡ್ ಶೋಗಳು ನಗರ ವ್ಯಾಪ್ತಿಯ 10 ವಿಧಾನಸಭೆ ಕ್ಷೇತ್ರಗಳಲ್ಲಿ ಪರಿಣಾಮ ಬೀರಬೇಕು. ಇದಕ್ಕೆ ತಕ್ಕಂತೆ ನೀಲಿನಕ್ಷೆ ಮತ್ತು ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಮುಖ್ಯಮಂತ್ರಿಗಳಿಗೆ ಆದೇಶ ನೀಡಿದ್ದಾರೆ.

ಅಮಿತ್ ಷಾ ಹಾಗೂ ಆದಿತ್ಯನಾಥ್ ಉಳಿದ ಪಾಲಿಕೆ ಮತ್ತು ನಗರ ಕೇಂದ್ರಗಳಲ್ಲಿ ರೋಡ್ ಶೋ ನಡೆಸಲಿದ್ದಾರೆ. ರ‍್ಯಾಲಿ ಮತ್ತು ರೋಡ್ ಶೋಗಳಿಗೆ ಜನತೆ ಸಕ್ರಿಯವಾಗಿ ಭಾಗವಹಿಸುವಂತೆ ನೋಡಿಕೊಳ್ಳಬೇಕು. ಪಕ್ಷದ ಕಾರ್ಯಕರ್ತರು ಈ ಮೂವರು ನಾಯಕರು ಹಾದು ಹೋಗುವ ರಸ್ತೆಗಳ ಎರಡು ಬದಿಯಲ್ಲಿ ನಿಂತು ಬಿಜೆಪಿಯ ಬಾವುಟಗಳನ್ನು ಪ್ರದರ್ಶಿಸಿ, ಎಲ್ಲೆಡೆ ಬಿಂಬಿಸುವಂತಿರಬೇಕು. ಎರಡು ಜಿಲ್ಲೆಗಳಿಗೆ ಒಬ್ಬರಂತೆ ಕೇಂದ್ರ ಸಚಿವರನ್ನು ಚುನಾವಣಾ ಉಸ್ತುವಾರಿ ಹಾಗೂ ಹೊಣೆಗಾರಿಕೆ ವಹಿಸಲಾಗುವುದು. ಬೆಂಗಳೂರು ಮತ್ತು ಹುಬ್ಬಳ್ಳಿಯಲ್ಲಿ ಚುನಾವಣಾ ಪ್ರಾದೇಶಿಕ ಕೇಂದ್ರಗಳೆಂದು ಪರಿಗಣಿಸಿ, ಅಲ್ಲಿ ಹಿರಿಯ ಸಚಿವರನ್ನು ನೇಮಕ ಮಾಡಲಾಗುವುದು. ಅವರ ಅಣತಿಯಂತೆ ರಾಜ್ಯ ನಾಯಕರು ಹಾಗೂ ಕೇಂದ್ರದಿಂದ ನಿಯೋಜನೆಗೊಳ್ಳುವ ಸಚಿವರು ಕಾರ್ಯನಿರ್ವಹಿಸಬೇಕು. ಇದಕ್ಕೆ ಎಲ್ಲ ಪೂರಕ ಸಿದ್ಧತೆಗಳನ್ನು ಇಂದಿನಿಂದಲೇ ಮಾಡಿ. ನಾವು ಹೇಳಿದ್ದನ್ನು ಬಿಜೆಪಿ ರಾಜ್ಯ ಘಟಕ ಮತ್ತು ನೀವು ಪಾಲಿಸಬೇಕೆಂದು ನಡ್ಡಾ ಮುಖ್ಯಮಂತ್ರಿ ಅವರಿಗೆ ಸೂಚಿಸಿದ್ದಾರೆ.

ರಾತ್ರಿ 1 ಗಂಟೆವರೆಗೆ ಮಾತ್ರ ಅವಕಾಶ

ಡಿ.31ರ ತಡರಾತ್ರಿ 1 ಗಂಟೆಯೊಳಗೆ ಕಡ್ಡಾಯವಾಗಿ ಮುಕ್ತಾಯಗೊಳಿಸಬೇಕು. ಈ ವೇಳೆ ಡಿಜೆ ಬಳಕೆಯನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ತಮ್ಮ ಪ್ರದೇಶಕ್ಕೆ ಮಾತ್ರ ಸೀಮಿತವಾಗುವಂತೆ ಬಾಕ್ಸ್ ಮಾದರಿ ಧ್ವನಿವರ್ಧಕ ಅಳವಡಿಸಿಕೊಳ್ಳಬಹುದಾದರೂ ಶಬ್ಧ ನಿರ್ದಿಷ್ಟ ಡೆಸಿಬಲ್ ಮೀರಬಾರದು. ಹೊಸ ವರ್ಷದ ಆಚರಣೆ ಆಯೋಜಿಸುವ ಹೋಟೆಲ್, ಕ್ಲಬ್, ಅಥವಾ ವಿಶೇಷ ಕೂಟಗಳ ವ್ಯವಸ್ಥಾಪಕರು ಸಂಭ್ರಮದ ವೇಳೆ ಯಾವುದೇ ಅಹಿತಕರ ಘಟನೆಗಳಾಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಸಾಂಸ್ಕೃತಿಕ ಕಾರ್ಯಕ್ರಮದ ನೆಪದಲ್ಲಿ ಅಶ್ಲೀಲ, ಅರಬೆತ್ತಲೆ, ಮಾದಕ ವಸ್ತುಗಳ ಸೇವನೆ, ಜೂಜಾಟಕ್ಕೆ ಆಸ್ಪದ ನೀಡಲೇಬಾರದು. ಹೋಟೆಲ್, ಪಬ್, ರೆಸ್ಟೋರೆಂಟ್ ಮತ್ತು ರೆಸಾರ್ಟ್‌ಗಳ ಒಳಾಂಗಣ ಪ್ರದೇಶದಲ್ಲಿನ ಕಾರ್ಯಕ್ರಮ ನಿಗದಿತ ಸಾಮರ್ಥ್ಯ ಮೀರಬಾರದು. ಸರ್ಕಾರ ನಿಗದಿಪಡಿಸಿದ ಸಮಯ ಮೀರಿ ಮದ್ಯ ಸರಬರಾಜು ಮಾಡಲು ಅಬಕಾರಿ ಇಲಾಖೆಯಿಂದ ಲಿಖಿತ ಅನುಮತಿ ಪಡೆಯುವುದು ಕಡ್ಡಾಯ. ಈ ಬಗ್ಗೆ ಪೊಲೀಸ್ ಆಯುಕ್ತರ ಕಚೇರಿಯಿಂದಲೂ ಅನುಮತಿ ಪಡೆಯಬೇಕು. ಹೊಸ ವರ್ಷಾಚರಣೆಗೆ ಅಬಕಾರಿ ಇಲಾಖೆಯಿಂದ ಒಂದು ದಿನದ ಮಟ್ಟಿಗೆ ಮದ್ಯಮಾರಾಟಕ್ಕೆ ಹಾಗೂ ಸರಬರಾಜಿಗೆ ಅನುಮತಿ ಪಡೆದವರೂ ಸಹ ಪೊಲೀಸ್ ಆಯುಕ್ತರ ಕಚೇರಿಯಿಂದ ಅನುಮತಿ ಪಡೆಯಬೇಕು. ಬೃಹತ್ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಹೊರಾಂಗಣದಲ್ಲಿ ಅದರಲ್ಲೂ ಹಗಲಲ್ಲಿ ಆಯೋಜನೆ ಮಾಡಬೇಕು.

ಕೊರೊನಾ ಮುನ್ನೆಚ್ಚರಿಕೆ: ಕಾರ್ಯಕ್ರಮದ ಸಂಘಟಕರು, ನಿರ್ವಾಹಕರು, ಸೇವಾ ಸಿಬ್ಬಂದಿಗಳು ಕೋವಿಡ್ ಬೂಸ್ಟರ್ ಡೋಸ್ ಇಲ್ಲವೇ 2 ಡೋಸ್ ಲಸಿಕೆಯನ್ನಾದರೂ ಪಡೆದಿರಬೇಕು. ಯಾವುದೇ ಕಾರ್ಯಕ್ರಮ ಹಾಗೂ ಪ್ರವೇಶ ದ್ವಾರದಲ್ಲಿ ಜನಸಂದಣಿಯಾಗದಂತೆ ಕ್ರಮ ವಹಿಸಬೇಕು. ಮುಂಜಾಗ್ರತಾ ಕ್ರಮವಾಗಿ ತುರ್ತು ಚಿಕಿತ್ಸಾ ವಾಹನದ ವ್ಯವಸ್ಥೆ ಮಾಡಿಕೊಂಡು ಸಂಬಂಧಿಸಿದ ಆಸ್ಪತ್ರೆಗಳೊಂದಿಗೆ ನಿಕಟ ಸಂಪರ್ಕ ಇಟ್ಟುಕೊಳ್ಳಬೇಕು. ಕಾರ್ಯಕ್ರಮದ ಸ್ಥಳಗಳಲ್ಲಿ ಕಡ್ಡಾಯವಾಗಿ ಮಾಸ್ಕ್ ಮತ್ತು ಫೇಸ್ ಶೀಲ್ಡ್ ಹಾಕಿಕೊಳ್ಳುವುದು, ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು ಕಡ್ಡಾಯ. ಕಾರ್ಯಕ್ರಮದ ಪ್ರವೇಶ ದ್ವಾರ/ಕಚೇರಿ/ಮಾಲ್‌ಗಳಲ್ಲಿ ಮಾಸ್ಕ್ ಇಲ್ಲದೇ ಪ್ರವೇಶ ಇಲ್ಲ ಎಂಬ ನಾಮಫಲಕ ಅಳವಡಿಸಬೇಕು. ಒಳಾಂಗಣ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಪ್ರತಿಯೊಬ್ಬರೂ ಹ್ಯಾಂಡ್ ಸ್ಯಾನಿಟೈಸರ್ ಉಪಯೋಗಿಸಬೇಕು. ಎಲ್ಲರಿಗೂ ಥರ್ಮಲ್ ಸ್ಕ್ರೀನಿಂಗ್ ಮಾಡಿ ದೇಹದ ತಾಪಮಾನವನ್ನು ಖಚಿತಪಡಿಸಿಕೊಳ್ಳಬೇಕು. ಜ್ವರ, ಉಸಿರಾಟದ ತೊಂದರೆ, ಕೆಮ್ಮು, ನೆಗಡಿ ಇರುವವರನ್ನು ಕಡ್ಡಾಯವಾಗಿ ವೈದ್ಯಕೀಯ ತಪಾಸಣೆಗೆ ಸೂಚಿಸಬೇಕು.

ತೊಂದರೆ ನೀಡಬೇಡಿ: ಹೊಸ ವರ್ಷ ಆಚರಣೆ ನೆಪದಲ್ಲಿ ಡಿ.31ರ ರಾತ್ರಿ ಯಾವುದೇ ಕಾರಣಕ್ಕೂ ರಸ್ತೆಗಳಲ್ಲಿ ಅಸಭ್ಯವಾಗಿ ವರ್ತಿಸಬಾರದು. ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರನ್ನು ಬಲವಂತವಾಗಿ ನಿಲ್ಲಿಸಿ ಅವರ ಇಚ್ಛೆಗೆ ವಿರುದ್ಧವಾಗಿ ಶುಭ ಕೋರುವ ನೆಪದಲ್ಲಿ ಕಿರಿಕಿರಿ ಮಾಡಬಾರದು. ವಾಹನಗಳ ವ್ಹೀಲಿಂಗ್ ಮತ್ತು ಡ್ರಾಗ್ ರೇಸ್ ಮೂಲಕ ಜನರಿಗೆ ತೊಂದರೆ ನೀಡಬಾರದು. ಸಾರ್ವಜನಿಕರ ನೆಮ್ಮದಿಗೆ ಭಂಗ ತರುವ ರೀತಿ ಪಟಾಕಿ ಸಿಡಿಮದ್ದುಗಳನ್ನು ಸಿಡಿಸಬಾರದು. ಮದ್ಯಪಾನ ಮಾಡಿ ವಾಹನ ಚಾಲಿಸಬಾರದು. ಸಾರ್ವಜನಿಕರು ಪೊಲೀಸರೊಂದಿಗೆ ಸಹಕರಿಸಿ ಕಾನೂನು ಬಾಹಿರವಾದ ಚಟುವಟಿಕೆಗಳಿಗೆ ಆಸ್ಪದ ನೀಡದೆ, ಯಾರಿಗೂ ತೊಂದರೆಯಾಗದಂತೆ ಸಂಭ್ರಮದಿಂದ ಹೊಸ ವರ್ಷ ಸ್ವಾಗತಿಸಬೇಕೆಂದು ಪೊಲೀಸ್ ಆಯುಕ್ತರು ಮನವಿ ಮಾಡಿದ್ದಾರೆ.

ಮುಡಾದಲ್ಲಿ ಪ್ರತಿ ತಿಂಗಳು ಕನಿಷ್ಠ ಒಂದೆರಡು ಸಭೆ ಮಾಡಲೇಬೇಕು

● ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್‌ಗೆ ಸಂಸದ ಪ್ರತಾಪ್‌ಸಿಂಹ ಸಲಹೆ ● ಖಾಸಗಿ ಬಡಾವಣೆ ನಿವೇಶನಗಳಿಗೆ ಸಂಬಂಧಿಸಿದ ಫೈಲ್‌ಗಳು ತ್ವರಿತವಾಗಿ ಕಾನೂನು ಪ್ರಕಾರ ವಿಲೇವಾರಿ ಆಗಬೇಕು ● ಕಾಲಕಾಲಕ್ಕೆ ಮುಡಾ ಸಭೆಗಳು ನಡೆದರೆ ಗ್ರಾಹಕರು, ಡೆವಲಪರ್‌ಗಳ ನಡುವಿನ ಅವಿಶ್ವಾಸ ತಪ್ಪುತ್ತದೆ



ಮೈಸೂರು, ಡಿ. 27(ಆರ್‌ಕೆಬಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಸಭೆಗಳು ವಿಳಂಬವಾಗುತ್ತಿದ್ದು, ಇದರಿಂದ ಡೆವಲಪರ್‌ಗಳು ಮತ್ತು ನಿವೇಶನಗಳ ಅರ್ಜಿದಾರರಿಗೆ ತೊಂದರೆಯಾಗುತ್ತಿದೆ ಎಂದು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಇಂದಿಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.

> ❝ ಗ್ರಾಹಕ ಅದಾಲತ್ ನಡೆಸಿ, ಯಾರಿಗೆ ಏನು ಸಮಸ್ಯೆಯಾಗಿದೆ ಎಂಬುದನ್ನು ಪರಿಶೀಲಿಸಿ, ಪರಿಹರಿಸಲು ಕ್ರಮ ಕೈಗೊಳ್ಳುವುದಾಗಿ ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ತಮ್ಮ ಭೇಟಿ ಸಂದರ್ಭದಲ್ಲಿ ಭರವಸೆ ನೀಡಿದ್ದಾರೆ.
> – ಪ್ರತಾಪ್‌ಸಿಂಹ, ಸಂಸದ

ಮೈಸೂರಿನ ಮುಡಾ ಕಚೇರಿಯಲ್ಲಿ ನೂತನ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಅವರನ್ನು ಅಭಿನಂದಿಸಿದ ಬಳಿಕ, ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಅನೇಕ ವರ್ಷಗಳಿಂದಲೂ ಮೈಸೂರಿಗೆ ಬರಲು ಬಹಳಷ್ಟು ಜನ ಕಾಯುತ್ತಿದ್ದಾರೆ. ನಿವೇಶನಕ್ಕಾಗಿ ಮುಂಗಡ ಹಣ ಕಟ್ಟಿರುವ ಗ್ರಾಹಕರು, ಡೆವಲಪರ್‌ಗಳ ಮೇಲೆ ವಿಶ್ವಾಸ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಗ್ರಾಹಕರು ಡೆವಲಪರ್‌ಗಳ ಮೇಲೆ ಗಲಾಟೆ ಮಾಡಿದ ನಿದರ್ಶನಗಳು ಇವೆ. ಮುಡಾದಲ್ಲಿ ನಿವೇಶನಗಳು ಬಿಡುಗಡೆಯಾಗಲು ವಿಳಂಬವಾದರೆ ಡೆವಲಪರ್‌ಗಳು ಏನು ಮಾಡಲು ಸಾಧ್ಯ. ಹೀಗಾಗಿ ಹಣ ಕಟ್ಟಿದ ಗ್ರಾಹಕರು, ಡೆವಲಪರ್‌ಗಳೇ ಸುಳ್ಳು ಹೇಳುತ್ತಿದ್ದಾರೆ ಎಂಬಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ಪರಿಸ್ಥಿತಿ ಹತ್ತಾರು ವರ್ಷಗಳಿಂದಲೂ ಇದೆ. ಇದು ಬದಲಾಗಬೇಕು. ವರ್ಷಗಟ್ಟಲೆ ನಿವೇಶನಕ್ಕಾಗಿ ಕಾಯುತ್ತಿರುವ ಸಾವಿರಾರು ಅರ್ಹ ನಿವೇಶನದಾರರಲ್ಲಿ ಆತ್ಮವಿಶ್ವಾಸ ಮೂಡಿಸುವ ರೀತಿಯಲ್ಲಿ ಮುಡಾ ಕಾರ್ಯ ನಿರ್ವಹಿಸುವ ಅಗತ್ಯವನ್ನು ಅವರು ಒತ್ತಿ ಹೇಳಿದರು.

ಡೆವಲಪರ್‌ಗಳ ಬಗ್ಗೆ ವಿಶ್ವಾಸ ಮೂಡಬೇಕು. ನಾವು ಕಟ್ಟಿದ ದುಡ್ಡು ಎಲ್ಲೂ ಹೋಗಲ್ಲ. ನಿವೇಶನ ಸಿಗುತ್ತದೆಂಬ ವಿಶ್ವಾಸ ಮೂಡಬೇಕು. ಗ್ರಾಹಕರು, ಡೆವಲಪರ್ಸ್ ನಡುವೆ ಉಂಟಾಗಿರುವ ಅಪನಂಬಿಕೆ ವಾತಾವರಣ ಹೋಗಬೇಕು. ಈ ಬಗ್ಗೆ ತಾವು ನೂತನ ಅಧ್ಯಕ್ಷರೊಂದಿಗೆ ಚರ್ಚಿಸಿದ್ದು, ಪ್ರತೀ ತಿಂಗಳು ಕನಿಷ್ಠ ಒಂದು ಅಥವಾ ಎರಡು ಸಭೆಗಳನ್ನಾದರೂ ಮಾಡಿ, ಮುಂಬರುವ ಮಾರ್ಚ್ ಒಳಗಾಗಿ ಅಂತಹ ಯಾವುದೇ ಫೈಲ್‌ಗಳು ಉಳಿಯದಂತೆ ಕಾನೂನಾತ್ಮಕವಾಗಿ ಪೂರ್ಣಗೊಳಿಸುವಂತೆ ತಾವು ನೂತನ ಅಧ್ಯಕ್ಷರಿಗೆ ಸಲಹೆ ನೀಡಿರುವುದಾಗಿ ತಿಳಿಸಿದರು.

ಹೊರ ಊರುಗಳಲ್ಲಿರುವ ಎಷ್ಟೋ ಜನ ಮೈಸೂರಲ್ಲಿ ನಿವೇಶನ, ಮನೆ ಇದೆ ಎಂದು ಮೈಸೂರಿಗೇ ವಾಪಸಾಗಲು ಉತ್ಸುಕರಾಗಿದ್ದಾರೆ. ಮೈಸೂರಿನಿಂದ ವಲಸೆ ಹೋದವರೂ ಮೈಸೂರಿಗೆ ಹಿಂದಿರುಗುವ ಆಶಯ ಹೊಂದಿದ್ದಾರೆ. ಅಂಥವರಿಗೆ ಅನುಕೂಲ ಆಗಬೇಕು. ಹೀಗಾಗಿ ಮೈಸೂರಿನಲ್ಲಿ ಹೊಸ ಕಟ್ಟಡ ಮತ್ತು ಹೊಸ ಬಡಾವಣೆಗಳನ್ನು ನಿರ್ಮಿಸುವ ಪ್ರಯತ್ನಗಳಿಗೆ ಅವಕಾಶವಾಗಬೇಕು. ಕಾಲ ಕಾಲಕ್ಕೆ ಸರಿಯಾಗಿ ಮುಡಾ ಸಭೆಗಳು ನಡೆದರೆ ಇಂತಹ ಸಮಸ್ಯೆಗಳೆಲ್ಲದಕ್ಕೂ ಪರಿಹಾರ ಸಿಗುತ್ತದೆ ಎಂದು ತಿಳಿಸಿದರು.

ಕೋವಿಡ್ ಆತಂಕ ಬೇಡ: ಸಂಸದ ಪ್ರತಾಪ್‌ಸಿಂಹ

ಮೈಸೂರು, ಡಿ. 27(ಆರ್‌ಕೆಬಿ)– ಕೋವಿಡ್ ಆತಂಕದ ಬಗ್ಗೆ ಪ್ರತಿಕ್ರಿಯಿಸಿದ ಸಂಸದ ಪ್ರತಾಪ್‌ಸಿಂಹ, ಮುನ್ನೆಚ್ಚರಿಕೆ ಮಾರ್ಗಸೂಚಿಗಳನ್ನು ರಾಷ್ಟ್ರೀಯ ಮಟ್ಟದಲ್ಲಿ ರೂಪಿಸಬೇಕಾಗಿದೆ. ಕಳೆದ ಎರಡು ವರ್ಷಗಳಲ್ಲಿ ಮಾಡಿದಂತೆ ಇಂತಹ ಸಂದರ್ಭಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸುವ ಅನುಭವ ಪ್ರಧಾನಿ ಮೋದಿಯವರಿಗಿದೆ. ಹೊಸ ಕೋವಿಡ್ ರೂಪಾಂತರದ ಬಗ್ಗೆ ಅನಗತ್ಯವಾಗಿ ಭಯಪಡುವ ಅಗತ್ಯವಿಲ್ಲ ಎಂದು ಜನರಲ್ಲಿ ಧೈರ್ಯ ತುಂಬಿದರು. ಚೀನಾದ ಆಸ್ಪತ್ರೆಗಳು ಮತ್ತು ಇತರ ವೈದ್ಯಕೀಯ ಸೌಲಭ್ಯಗಳ ದೃಶ್ಯಗಳನ್ನು ಪದೇ ಪದೆ ತೋರಿಸುವ ಮೂಲಕ ಮಾಧ್ಯಮಗಳು ಅನಗತ್ಯವಾಗಿ ಸಾಂಕ್ರಾಮಿಕ ರೋಗದ ಭೀತಿಯನ್ನು ಸೃಷ್ಟಿಸುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದ ಅವರು, ಕೋವಿಡ್ ಕುರಿತು ಸುದ್ದಿ ಅಥವಾ ದೃಶ್ಯಗಳನ್ನು ಪ್ರಸಾರ ಮಾಡುವಾಗ ಮಾಧ್ಯಮಗಳು ಹೆಚ್ಚು ಸಂವೇದನಾಶೀಲವಾಗಿರಬೇಕು. ಪ್ರಧಾನಿ ಮೋದಿ ಮತ್ತು ದೇಶದ ವೈದ್ಯರು, ವಿಜ್ಞಾನಿಗಳ ಮೇಲೆ ವಿಶ್ವಾಸವಿರಿಸಬೇಕು ಎಂದು ಹೇಳಿದರು.

ಚಾಮುಂಡಿಬೆಟ್ಟ ದೇವಸ್ಥಾನದಲ್ಲಿ 'ವಸ್ತ್ರ ಸಂಹಿತೆ'ಗೆ ಬೆಂಬಲ

ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನದಲ್ಲಿ 'ವಸ್ತ್ರ ಸಂಹಿತೆ' ಅನುಷ್ಠಾನಗೊಳಿಸುವ ಕುರಿತು ಆರಂಭವಾಗಿರುವ ಚರ್ಚೆಗೆ ಪ್ರತಿಕ್ರಿಯಿಸಿದ ಸಂಸದ ಪ್ರತಾಪ್‌ಸಿಂಹ, ನೆರೆಯ ಕೇರಳದಲ್ಲಿ ವಸ್ತ್ರ ಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದ್ದು, ಅಲ್ಲಿ ದೇವಸ್ಥಾನಗಳಿಗೆ ಭೇಟಿ ನೀಡಿದಾಗ ಮಹಿಳೆಯರು ಸಲ್ವಾರ್ ಮತ್ತು ಸೀರೆ ಧರಿಸಿದರೆ, ಪುರುಷರು ಪಂಚೆ ಮತ್ತು ಶಲ್ಯ ಧರಿಸುತ್ತಾರೆ. ಮೈಸೂರಿನಲ್ಲಿ ಇಂತಹ ವಸ್ತ್ರ ಸಂಹಿತೆಯ ಬಗ್ಗೆ ಚರ್ಚೆಯಾಗುತ್ತಿರುವುದು ಒಳ್ಳೆಯ ಬೆಳವಣಿಗೆ. ಇದಕ್ಕೆ ತಮ್ಮ ಬೆಂಬಲವಿದೆ ಎಂದು ಹೇಳಿದರು.

ವಾಮಮಾರ್ಗದಲ್ಲಿ ಚುನಾವಣೆ ಗೆಲ್ಲಲು ಬಿಜೆಪಿ ಹುನ್ನಾರ

● ಎಐಸಿಸಿ ಮಾಧ್ಯಮ ವಕ್ತಾರೆ ಐಶ್ವರ್ಯ ಮಹದೇವ್ ಆರೋಪ ● ಕಾಂಗ್ರೆಸ್ ಗೆಲ್ಲುವಂತಹ ಕಡೆ ಉದ್ದೇಶಪೂರ್ವಕವಾಗಿಯೇ ಮತದಾರರ ಹೆಸರು ಡಿಲೀಟ್

ಮೈಸೂರು, ಡಿ.27(ಎಂಟಿವೈ)– ಮುಂಬರುವ ಚುನಾವಣೆಯಲ್ಲಿ ಗೆಲುವು ಸಾಧಿಸಲು ಬಿಜೆಪಿಯವರು ವಾಮಮಾರ್ಗ ಅನುಸರಿಸುತ್ತಿದ್ದು, ಅದರ ಒಂದು ಭಾಗವಾಗಿ ಮತದಾರರ ಪಟ್ಟಿಯಿಂದ ಹೆಸರು ಡಿಲೀಟ್ ಮಾಡುವ ಹುನ್ನಾರ ನಡೆಸಿದ್ದಾರೆ ಎಂದು ಎಐಸಿಸಿ ಮಾಧ್ಯಮ ವಕ್ತಾರೆ ಐಶ್ವರ್ಯ ಮಹದೇವ್ ಆರೋಪಿಸಿದ್ದಾರೆ.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಚಾಮರಾಜ ವಿಧಾನಸಭಾ ಕ್ಷೇತ್ರದ ಬೂತ್ ಮಟ್ಟದ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಅವರು, ಬಿಜೆಪಿ ನಾಯಕರು ತಮಗೆ ಅನುಕೂಲವಾಗುವಂತೆ ಮತದಾರರ ಪಟ್ಟಿ ಪರಿಷ್ಕರಣೆ ಮಾಡಿದ್ದಾರೆ. ಈ ವೇಳೆ ಕಾಂಗ್ರೆಸ್ ಬೆಂಬಲಿಸುವ ಅಲ್ಪಸಂಖ್ಯಾತ, ಹಿಂದುಳಿದ ವರ್ಗಗಳ ಮತದಾರರನ್ನು ಪಟ್ಟಿಯಿಂದ ಕೈ ಬಿಟ್ಟಿದ್ದಾರೆ. ಇದರಿಂದ ಕಾಂಗ್ರೆಸ್ ಬೆಂಬಲಿಸುತ್ತಿದ್ದ ವರ್ಗಗಳ ಮತದಾನದ ಹಕ್ಕನ್ನು ಕಸಿದುಕೊಳ್ಳಲಾಗಿದೆ. ಮುನ್ನೆಚ್ಚರಿಕೆ ವಹಿಸಿದ್ದರೆ ಮತದಾರರ ಪಟ್ಟಿಯಲ್ಲಿ ಆಗಿರುವ ವ್ಯತ್ಯಾಸವನ್ನು ತಡೆಹಿಡಿಯಬಹುದಾಗಿತ್ತು ಎಂದು ಅಭಿಪ್ರಾಯಪಟ್ಟರು.

ರಾಜ್ಯದ 224 ಕ್ಷೇತ್ರಗಳಲ್ಲಿ 2018ರಿಂದ ಇದುವರೆಗೆ 86 ಲಕ್ಷ ಮತದಾರರ ಸೇರ್ಪಡೆ ಮಾಡಲಾಗಿದೆ. 61 ಲಕ್ಷ ಮತದಾರರನ್ನು ಡಿಲೀಟ್ ಮಾಡಲಾಗಿದೆ. ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ 244 ಬೂತ್‌ಗಳಿಂದ 39 ಸಾವಿರ ಸೇರ್ಪಡೆ, 16 ಸಾವಿರ ಡಿಲೀಟ್ ಮಾಡಲಾಗಿದೆ. ಬೆಂಗಳೂರಿನಲ್ಲಿ ಚಿಲುಮೆ ಎಂಬ ಖಾಸಗಿ ಸಂಸ್ಥೆಗೆ ಮತದಾರರ ಪಟ್ಟಿ ಪರಿಷ್ಕರಣೆ ಜವಾಬ್ದಾರಿ ನೀಡಿ ಅಕ್ರಮ ಎಸಗಲಾಗಿದೆ. ಖಾಸಗಿ ಸಂಸ್ಥೆಯ ಉದ್ಯೋಗಿಗಳು ಮನೆ ಮನೆಗೆ ಹೋಗಿ ಬಿಎಲ್‌ಎ ಎಂದು ಹೇಳಿಕೊಂಡು ಜಾತಿ, ಜನಾಂಗವಾರು, ಹಿಂದಿನ ಚುನಾವಣೆಯಲ್ಲಿ ಯಾರಿಗೆ ಮತ ಹಾಕಿದ್ದರು ಎಂಬ ಮಾಹಿತಿ ಕಲೆ ಹಾಕಿದ್ದಾರೆ. ಆ ಮೂಲಕ ವಿರೋಧ ಪಕ್ಷಗಳನ್ನು ಬೆಂಬಲಿಸುವ ಮತದಾರರ ಹೆಸರನ್ನು ಡಿಲೀಟ್ ಮಾಡುವ ಮೂಲಕ ತಮ್ಮ ಗೆಲುವಿನ ಹಾದಿ ಸುಗಮ ಮಾಡಿಕೊಳ್ಳಲು ಹುನ್ನಾರ ನಡೆಸಿದ್ದಾರೆ ಎಂದು ಕಿಡಿಕಾರಿದರು.

ಕೆಲವು ಮತದಾರರ ಹೆಸರನ್ನು ಬೇರೊಂದು ಬಡಾವಣೆಯಲ್ಲಿರುವ ಮತಗಟ್ಟೆ ವ್ಯಾಪ್ತಿಗೆ ಸೇರಿಸುವ ಸಂಚು ನಡೆಸಲಾಗಿದೆ. ಮನೆ ಪಕ್ಕ ಬೂತ್ ಇದ್ದರೂ 3–4 ಕಿ.ಮೀ. ದೂರ ಹೋಗಿ ಮತದಾನ ಮಾಡಬೇಕಾದ ಅನಿವಾರ್ಯತೆ ಸೃಷ್ಟಿಸಿ ಮತದಾನದಿಂದ ದೂರವುಳಿಯುವಂತೆ ಮಾಡಲಾಗಿದೆ. ಇದು ಮತದಾನದ ಪ್ರಮಾಣ ಕಡಿಮೆ ಮಾಡುವ ಸಂಚಾಗಿದೆ. ಈಗ ಬೂತ್ ಮಟ್ಟದ ಕಾರ್ಯಕರ್ತರ ಅವಶ್ಯಕತೆ ತುಂಬಾ ಇದೆ. ಬಿಎಲ್‌ಎ ನಮ್ಮ ಬೂತ್ ಯಾವುದು, ಎಷ್ಟು ಮತದಾರರಿದ್ದಾರೆ ಎಂಬ ಮಾಹಿತಿಯನ್ನು ತಿಳಿದುಕೊಳ್ಳಬೇಕು. ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ಡಿ.23ಕ್ಕೆ ಮುಗಿದಿದೆ. ಜನವರಿ ಎರಡನೇ ವಾರದಲ್ಲಿ ಅಂತಿಮ ಮತದಾರರ ಪಟ್ಟಿ ಬರುತ್ತದೆ ಆಗ ಬಿಎಲ್‌ಒಗಳು ಎಚ್ಚರಿಕೆಯಿಂದ ಪರಿಶೀಲನೆ ನಡೆಸಬೇಕು. ಈ ಬಗ್ಗೆ ಬಿಎಲ್‌ಒಗಳಿಗೆ ಹಂತ ಹಂತವಾಗಿ 224 ಕ್ಷೇತ್ರಗಳಲ್ಲೂ ತರಬೇತಿ ಕೊಡುತ್ತೇವೆ ಎಂದು ಹೇಳಿದರು.

ಇದೇ ವೇಳೆ ಮಾಜಿ ಶಾಸಕ ವಾಸು ಮಾತನಾಡಿ, ನಗರ ಪ್ರದೇಶದಲ್ಲಿ ಮತದಾರರ ಪಟ್ಟಿಗೆ ಸೇರ್ಪಡೆ ಮಾಡಬಹುದು. ಗ್ರಾಮಾಂತರ ಪ್ರದೇಶದಲ್ಲಿ ಸೇರ್ಪಡೆ ಕಷ್ಟ. ಬೇರೆ ಜಿಲ್ಲೆ, ಬೇರೆ ರಾಜ್ಯಗಳಿಂದ ನಗರ ಪ್ರದೇಶಕ್ಕೆ ಬಂದವರ ಹೆಸರನ್ನು ಮತದಾರರ ಪಟ್ಟಿಗೆ ಸೇರ್ಪಡೆ ಮಾಡುತ್ತಾರೆ. ಕಾಂಗ್ರೆಸ್ ಮತದಾರರು ಇರುವ ಕಡೆ ಹೆಚ್ಚು ಡಿಲೀಟ್ ಮಾಡಲಾಗಿದೆ. ನಮ್ಮ ಕ್ಷೇತ್ರದಲ್ಲಿ 39,169 ಸಾವಿರ ಮತದಾರನ್ನು ಸೇರಿಸಿದ್ದಾರೆ. 16,247 ಮತದಾರ ಡಿಲೀಟ್ ಮಾಡಿದ್ದಾರೆ. ಈ ಬಗ್ಗೆ ಬಿಎಲ್‌ಒಗಳಿಗೆ ಎಚ್ಚರಿಕೆಯಿಂದ ಪರಿಶೀಲನೆ ಮಾಡಬೇಕು ಎಂದು ಸಲಹೆ ನೀಡಿದರು.

ಸಭೆಯಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಮುಖಂಡರಾದ ಕೆ.ಹರೀಶ ಗೌಡ, ಶಿವಣ್ಣ, ಮಾಜಿ ಮೇಯರ್‌ಗಳಾದ ಮೋದಾಮಣಿ, ಪುಷ್ಪಲತಾ ಚಿಕ್ಕಣ್ಣ, ರಾಜೇಶ್ವರಿ ಪುಟ್ಟಸ್ವಾಮಿ, ಪುಷ್ಪಲತಾ ಜಗನ್ನಾಥ್, ನಗರ ಪ್ರಧಾನ ಕಾರ್ಯದರ್ಶಿ ಈಶ್ವರ್ ಚಕ್ಕಡಿ, ಕಾರ್ಪೊರೇಟರ್ ಉಷಾ ಕುಮಾರ್, ಮುಖಂಡರಾದ ಮಂಜುಳಾ ಮಾನಸ, ಲೋಕೇಶ್, ರಮೇಶ್, ಅನಂತ್, ಸಿದ್ದಪ್ಪ, ಶೌಕತ್ ಪಾಷ, ರವಿಶಂಕರ್, ರಘು, ನಾಗಭೂಷಣ್, ಪ್ರಶಾಂತ್ ಗೌಡ, ಸುಂದರ್ ಕುಮಾರ್, ಪುಷ್ಪವಲ್ಲಿ, ಹೇಮಾವತಿ, ಸುಶೀಲಾ ಮರೀಗೌಡ, ರೋಹಿತ್, ಶಿವಮಾದು ಪಾಲ್ಗೊಂಡಿದ್ದರು.

ಭಾಷಣ ಮಾಡುತ್ತಲೇ ಕುಸಿದು ಬಿದ್ದ ಐಶ್ವರ್ಯ

ಎಐಸಿಸಿ ಮಾಧ್ಯಮ ವಕ್ತಾರರಾದ ಐಶ್ವರ್ಯ ಮಹದೇವ್ ಅವರು ಭಾಷಣದ ವೇಳೆ ಕುಸಿದರು. ಮಾತನಾಡುತ್ತಿದ್ದ ವೇಳೆ ನೀರು ಕುಡಿದರು. ಬಳಿಕ ನಿತ್ರಾಣಗೊಂಡು, ಕುಸಿದರು. ಸ್ಥಳದಲ್ಲಿಯೇ ಇದ್ದ ವೈದ್ಯರು ಅವರ ತಪಾಸಣೆ ನಡೆಸಿದರು. ಟ್ರಾವೆಲ್ ಮಾಡಿ ಸುಸ್ತಾಗಿದ್ದಾರೆ. ಭಯಪಡುವ ಅಗತ್ಯವಿಲ್ಲ. ಐಶ್ವರ್ಯ ಅವರ ಬಗ್ಗೆ ನಾವು ನಿಗಾ ವಹಿಸುವುದಾಗಿ ಮಾಜಿ ಶಾಸಕ ವಾಸು ಹೇಳಿದರು.

ಗಾಂಜಾ ಮಾರಾಟ: ಒಬ್ಬನ ಬಂಧನ

ಮೈಸೂರು, ಡಿ. 27– ಗಾಂಜಾ ಮಾರಾಟ ಮಾಡುತ್ತಿದ್ದ ವ್ಯಕ್ತಿಯೋರ್ವನನ್ನು ಬಂಧಿಸಿರುವ ಸಿಸಿಬಿ ಪೊಲೀಸರು 2.710 ಕೆಜಿ ಒಣಗಿದ ಗಾಂಜಾ ಹೂವು, ಎಲೆ, ಕಾಂಡ ಬೀಜಗಳನ್ನು ವಶಪಡಿಸಿಕೊಂಡಿದ್ದಾರೆ.

ಮೂಲತಃ ಕೊಪ್ಪಳ ಜಿಲ್ಲೆಯವನಾಗಿದ್ದು, ಹಾಲಿ ಇಲವಾಲದಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿರುವ ಮಂಜುನಾಥ್(26) ಬಂಧನಕ್ಕೊಳಗಾದವನಾಗಿದ್ದು, ಖಚಿತ ಮಾಹಿತಿ ಮೇರೆಗೆ ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಸತ್ಯ ಪ್ರಮೋದ ಕಲ್ಯಾಣ ಮಂಟಪದ ಮುಂಭಾಗ ಈತನನ್ನು ವಶಕ್ಕೆ ಪಡೆದ ಸಿಸಿಬಿ ಇನ್ಸ್‌ಪೆಕ್ಟರ್ ಯು. ಶೇಖರ್ ಹಾಗೂ ಸಿಬ್ಬಂದಿ ಆತನ ಬಳಿ ಇದ್ದ ಬ್ಯಾಗ್‌ಗಳನ್ನು ಪರಿಶೀಲಿಸಿದಾಗ 2.170 ಕೆಜಿ ಗಾಂಜಾ ವಶಪಡಿಸಿಕೊಂಡು ಆತನನ್ನು ಬಂಧಿಸಿದ್ದಾರೆ. ತನಗೆ ರಾಯಚೂರು ಜಿಲ್ಲೆ ಲಿಂಗಸುಗೂರಿನ ಪರಸಪ್ಪ ಎಂಬಾತ ಗಾಂಜಾ ಮಾರಾಟ ಮಾಡಿರುವುದಾಗಿ ವಿಚಾರಣೆ ವೇಳೆ ಈತ ಹೇಳಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಸಿರು ನಮ್ಮ ಉಸಿರು



ಮೈಸೂರಿನ ಹೊಸಮಠದ ಆವರಣದಲ್ಲಿ ಚಾಮುಂಡಿಪುರಂ ಬಸವ ಬಳಗ ಸಂಘದ ನೂತನ ವರ್ಷದ ಕ್ಯಾಲೆಂಡರ್ ಅನ್ನು ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ ಬಿಡುಗಡೆ ಮಾಡಿದರು. ಚಿತ್ರದಲ್ಲಿ ಸಂಘದ ಅಧ್ಯಕ್ಷ ಸಂದೀಪ್ ಚಂದ್ರಶೇಖರ್, ಪದಾಧಿಕಾರಿಗಳಾದ ಅಂಬಳೆ ಶಿವಣ್ಣ, ಎಂ.ಬಸವರಾಜು, ಮಲ್ಲಪ್ಪ, ವಿ.ಬಸವರಾಜು, ಜಿ.ಮಹದೇವಪ್ಪ, ಕೆ.ಎಂ.ಸೋಮೇಶ್, ಎನ್.ಧರ್ಮೇಂದ್ರ, ವಿ.ಮಂಜುನಾಥ್, ಕೆ.ವಿ.ಯೋಗೇಶ್, ಡಿ.ಸಿ.ಮಂಜುಳಾ, ಬಸವರಾಜು, ಶಿವಮಲ್ಲಪ್ಪ, ಶಿವಪ್ರಸಾದ್, ಹೆಚ್.ಎನ್.ನವೀನ್ ಅವರನ್ನು ಕಾಣಬಹುದು.

ಸುವರ್ಣ ಸೌಧದ ಬ್ಯಾರಿಕೇಡ್ ಎಸೆದು ದ್ವಾರದ ಮೇಲೆ ಹತ್ತಿ ವಕೀಲರ ಪ್ರತಿಭಟನೆ

ಬೆಳಗಾವಿ, ಡಿ.27– ಬ್ಯಾರಿಕೇಡ್ ಎಸೆದು, ಮುಖ್ಯ ದ್ವಾರದ ಮೇಲೆ ವಕೀಲರು ಹತ್ತಿ ಹೈಡ್ರಾಮಾ ಮಾಡಿದ ಘಟನೆ ಸುವರ್ಣ ಆವರಣದಲ್ಲಿ ಮಂಗಳವಾರ ಮಧ್ಯಾಹ್ನ ನಡೆದಿದೆ. ವಕೀಲರ ರಕ್ಷಣಾ ಕಾಯ್ದೆ ಜಾರಿಗೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿದ್ದ ವಕೀಲರು ಇಂದು ನೇರವಾಗಿ ಸುವರ್ಣ ಸೌಧ ಒಳಗಡೆ ಪ್ರವೇಶಿಸಲು ಮುಂದಾಗಿದ್ದಾರೆ.

ಸುವರ್ಣ ಸೌಧ ಬಳಿ ಯಾವುದೇ ಪ್ರತಿಭಟನೆಗೆ ಅವಕಾಶ ಇಲ್ಲದ ಹಿನ್ನೆಲೆಯಲ್ಲಿ ಪೊಲೀಸರು ವಕೀಲರನ್ನು ತಡೆದಿದ್ದಾರೆ. ಈ ವೇಳೆ ಕೆಲ ವಕೀಲರು ದ್ವಾರದ ಮೇಲೆ ಹತ್ತಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ವಕೀಲರು ನುಗ್ಗುತ್ತಿದ್ದ ಹಿನ್ನೆಲೆಯಲ್ಲಿ ಸುವರ್ಣ ಸೌಧದ 4 ದ್ವಾರಗಳನ್ನು ಪೊಲೀಸರು ಬಂದ್ ಮಾಡಿದ್ದರು. ಅಗತ್ಯವಿದ್ದವರಿಗೆ ಮಾತ್ರ ಓಡಾಟಕ್ಕೆ ಅವಕಾಶ ನೀಡಿದ್ದರು.

ಮುಖ್ಯದ್ವಾರದಲ್ಲಿ ಪ್ರತಿಭಟನಾನಿರತ ವಕೀಲರ ಮನವಿ ಸ್ವೀಕರಿಸಿ ಮಾತನಾಡಿದ ಕಂದಾಯ ಸಚಿವ ಅಶೋಕ್, ಜನವರಿಯಲ್ಲಿ ಜಂಟಿ ಅಧಿವೇಶನ ನಡೆಯಲಿದ್ದು ಈ ವೇಳೆ ಸಾಧಕ ಬಾಧಕ ಚರ್ಚಿಸಿ ವಕೀಲರ ರಕ್ಷಣಾ ಕಾಯ್ದೆ ಜಾರಿಗೆ ತರಲಾಗುವುದು ಎಂದು ಭರವಸೆ ನೀಡಿದರು.

ವಕೀಲರು ನಡೆಸುತ್ತಿರುವ ಪ್ರತಿಭಟನೆಯಲ್ಲಿ ನ್ಯಾಯ ಇದೆ. ಅವರಿಗೆ ರಕ್ಷಣೆ ಕೊಡಬೇಕು ಎಂದು ನನಗೂ ಅನಿಸಿದೆ. ಈ ಕುರಿತು ಸಿಎಂ ಬೊಮ್ಮಾಯಿ ಜೊತೆಗೆ ಮಾತನಾಡಿದ್ದು, ವಕೀಲರಿಗೆ ರಕ್ಷಣೆ ಕೊಡಲು ನಮ್ಮ ಸರ್ಕಾರ ಬದ್ಧವಾಗಿದೆ. ವಕೀಲರಿಗೆ ಕೊಲೆ ಬೆದರಿಕೆ, ಹಲ್ಲೆ ಮೊದಲಾದವುಗಳು ನಡೆಯುತ್ತಿರುವುದು ನನ್ನ ಗಮನಕ್ಕೆ ಬಂದಿದೆ ಎಂದು ಹೇಳಿದರು. ಸಚಿವ ಅಶೋಕ್ ಅವರು ಭರವಸೆ ನೀಡಿದ ಬಳಿಕ ವಕೀಲರು ತಮ್ಮ ಪ್ರತಿಭಟನೆಯನ್ನು ಹಿಂದಕ್ಕೆ ಪಡೆದರು.

ಕೂಲಿ ಹೆಚ್ಚಳ ಸೇರಿ ವಿವಿಧ ಬೇಡಿಕೆ ಈಡೇರಿಸಲು ಪಡಿತರ ಹಮಾಲಿ ಕಾರ್ಮಿಕರ ಒತ್ತಾಯ

ಜ.2ರಿಂದ ಅನಿರ್ದಿಷ್ಟಾವಧಿ ಮುಷ್ಕರ

● ಬೇಡಿಕೆ ಈಡೇರಿಸಲು ಡಿ.31ರ ಗಡುವು ● ಜಿಲ್ಲಾ ಮಟ್ಟದ ಸಮಿತಿ ರಚಿಸಲು ಜಿಲ್ಲಾಧಿಕಾರಿಗಳಲ್ಲಿ ಆಗ್ರಹ

ಮೈಸೂರು,ಡಿ.27(ಪಿಎಂ)– ಕೂಲಿ ಹೆಚ್ಚಿಸಬೇಕೆಂಬುದೂ ಸೇರಿದಂತೆ ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸಲು ಡಿ.31ರ ಗಡುವು ನೀಡಿರುವ ಪಡಿತರ ಅನ್ನಭಾಗ್ಯ ಯೋಜನೆಯಡಿಯ ಹಮಾಲಿ ಕಾರ್ಮಿಕರು, ಇಲ್ಲವಾದರೆ ಜ.2ರಿಂದ ಜಿಲ್ಲೆಯಾದ್ಯಂತ ಆಹಾರ ಧಾನ್ಯಗಳ ಎತ್ತುವಳಿ ಸ್ಥಗಿತಗೊಳಿಸಿ, ಅನಿರ್ದಿಷ್ಟಾವಧಿ ಮುಷ್ಕರ ನಡೆಸುವುದಾಗಿ ಎಚ್ಚರಿಸಿದ್ದಾರೆ.



ಲೋಡಿಂಗ್ ಮತ್ತು ಅನ್‌ಲೋಡಿಂಗ್ ಎರಡೂ ಸೇರಿದಂತೆ ಕ್ವಿಂಟಾಲ್‌ಗೆ ಕನಿಷ್ಠ 25 ರೂ. ಕೂಲಿ ದರ ನಿಗದಿಪಡಿಸಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆ ಮುಂದಿಟ್ಟುಕೊಂಡು ಮುಷ್ಕರಕ್ಕೆ ಮುಂದಾಗಿದ್ದಾರೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕರ್ನಾಟಕ ರಾಜ್ಯ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕಾರ್ಮಿಕರ ಒಕ್ಕೂಟದ (ಕರ್ನಾಟಕ ಶ್ರಮಿಕ ಶಕ್ತಿಯ ಅಂಗಸಂಘಟನೆ) ಜಿಲ್ಲಾಧ್ಯಕ್ಷ ಕರಿನಾಯಕ, ಮೊದಲ ಹಂತದಲ್ಲಿ ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಮುಷ್ಕರ ನಡೆಸಲು ತೀರ್ಮಾನಿಸಲಾಗಿದೆ. ಬಳಿಕ ಮುಷ್ಕರ ಇಡೀ ರಾಜ್ಯಕ್ಕೆ ವಿಸ್ತಾರಗೊಳ್ಳಲಿದೆ ಎಂದು ತಿಳಿಸಿದರು.

ರಾಜ್ಯಾದ್ಯಂತ ಪಡಿತರ ಅನ್ನಭಾಗ್ಯ ಯೋಜನೆಯಡಿ ಆಹಾರ ನಿಗಮದ ಗೋದಾಮುಗಳಲ್ಲಿ ಆಹಾರ ಧಾನ್ಯಗಳ ಎತ್ತುವಳಿ ಕೆಲಸ ಮಾಡುವ (ಲೋಡಿಂಗ್ ಮತ್ತು ಅನ್‌ಲೋಡಿಂಗ್) ಹಮಾಲಿ ಕಾರ್ಮಿಕರಾದ ನಾವು ಹತ್ತಾರು ವರ್ಷಗಳಿಂದ ಈ ವೃತ್ತಿಯಲ್ಲಿ ನಿರತವಾಗಿದ್ದೇವೆ. ನಮ್ಮ ಪ್ರತಿಭಟನೆಗೆ ಮಣಿದು 2018ರಲ್ಲಿ ಕ್ವಿಂಟಾಲ್‌ಗೆ 14ರಿಂದ 16 ರೂ.ಗೆ ಕೂಲಿ ದರ ಹೆಚ್ಚಳ ಮಾಡಲಾಯಿತು. ಅಂದಿನಿಂದ ಈವರೆಗೆ ಕೂಲಿ ಹೆಚ್ಚಳ ಮಾಡಿಲ್ಲ. ಜೊತೆಗೆ ಹೆಚ್ಚಳಗೊಂಡ ಈ 2 ರೂ.ಗಳನ್ನು ಗುತ್ತಿಗೆದಾರರು ಕಾರ್ಮಿಕರ ಪಿಎಫ್ ನಿಧಿಗೆ ಪಾವತಿಸಲು ಬಳಸಿಕೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಹೆಚ್ಚಳಗೊಂಡ 2 ರೂ. ಪ್ರಯೋಜನವೂ ನಮಗೆ ದೊರೆಯುತ್ತಿಲ್ಲ ಎಂದು ದೂರಿದರು.

2 ರೂ. ಕೂಲಿ ಹೆಚ್ಚಿಸಿ 5 ವರ್ಷ ಕಳೆದಿದ್ದು, ಈ ಅವಧಿಯಲ್ಲಿ ಅಗತ್ಯ ವಸ್ತುಗಳ ಬೆಲೆ, ಪ್ರಯಾಣ ದರ, ಪೆಟ್ರೋಲ್–ಡೀಸೆಲ್ ದರದಲ್ಲಿ ಹೆಚ್ಚಳ ಉಂಟಾಗಿದೆ. ಜೊತೆಗೆ ಗುತ್ತಿಗೆದಾರರ ದರ ಮತ್ತು ನ್ಯಾಯಬೆಲೆ ಅಂಗಡಿ ಮಾಲೀಕರ ಕಮಿಷನ್ ಕೂಡ ಹೆಚ್ಚಳಗೊಂಡಿದೆ. ಆದರೆ ಹಮಾಲಿ ಕಾರ್ಮಿಕರಾದ ನಮ್ಮ ಕೂಲಿ ಮಾತ್ರ ಹೆಚ್ಚಳಗೊಂಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

2020ರ ಮಾರ್ಚ್‌ನಲ್ಲಿ ದೇಶದಾದ್ಯಂತ ಕೋವಿಡ್ ಲಾಕ್‌ಡೌನ್ ವಿಧಿಸಿದಾಗ ಸರ್ಕಾರ ಮತ್ತು ಜಿಲ್ಲಾಡಳಿತ ನಮಗೆ ಕನಿಷ್ಠ ಸೌಲಭ್ಯಗಳನ್ನು ನೀಡದೇ ದುಡಿಸಿಕೊಂಡಿತು. ಈ ಸಂದರ್ಭದಲ್ಲಿ ಪೊಲೀಸರ ಲಾಠಿ ಏಟು ಬಿದ್ದರೂ ಕೆಲಸ ಮಾಡಿದ್ದೇವೆ. ಸೋಂಕಿನ ಭೀತಿ ಇದ್ದರೂ ಪ್ರತಿ ಗ್ರಾಮಾಂತರ ಪ್ರದೇಶದಲ್ಲಿ ನ್ಯಾಯಬೆಲೆ ಅಂಗಡಿಗಳಿಗೆ ಆಹಾರ ಧಾನ್ಯ ಪೂರೈಕೆ ಮಾಡಿದ್ದೇವೆ. ನಮ್ಮನ್ನು ಕೋವಿಡ್ ವಾರಿಯರ್ಸ್ ಎಂದು ಘೋಷಿಸಬೇಕೆಂಬ ಬೇಡಿಕೆಯನ್ನೂ ಈಡೇರಿಸಲಿಲ್ಲ ಎಂದು ಕಿಡಿಕಾರಿದರು.

2018ರಲ್ಲಿ ಗ್ರಾಮಾಂತರ ಸಾಗಾಣಿಕೆ ಟೆಂಡರಿನಲ್ಲಿ ನಮೂದಿಸಿರುವ ನಿಯಮಾವಳಿಗಳನ್ನು ಗುತ್ತಿಗೆದಾರರು ಈವರೆಗೂ ಪಾಲಿಸಿಲ್ಲ. ಜೊತೆಗೆ ಇದಕ್ಕೆ ಅನುಗುಣವಾಗಿ ಇಎಸ್‌ಐ ಮತ್ತು ಪಿಎಫ್ ಪಾವತಿ ಮಾಡುತ್ತಿಲ್ಲ. ಈ ಸಂಬಂಧ ಈಗಾಗಲೇ ಹಲವು ಮನವಿಗಳನ್ನು ಜಿಲ್ಲಾಧಿಕಾರಿಗಳು ಹಾಗೂ ಆಹಾರ ಇಲಾಖೆ ಜಂಟಿ ನಿರ್ದೇಶಕರಿಗೆ ನೀಡಿದರೂ ಪ್ರಯೋಜನವಾಗಿಲ್ಲ ಎಂದು ದೂರಿದರು.

ಹಮಾಲಿ ಕಾರ್ಮಿಕರ ಸಮಸ್ಯೆ ಬಗೆಹರಿಸಲು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಆಯುಕ್ತರು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮಿತಿ ರಚಿಸಲು 2019ರ ಸೆ.25ರಂದು ಆದೇಶಿಸಿದ್ದರು. ಆದರೆ ಈವರೆಗೂ ಸಮಿತಿ ರಚಿಸಿಲ್ಲ. ಡಿ.31ರೊಳಗೆ ಜಿಲ್ಲಾಧಿಕಾರಿಗಳು ತಮ್ಮ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಸಭೆ ಕರೆದು ಬೇಡಿಕೆಗಳನ್ನು ಈಡೇರಿಸಲು ಕ್ರಮ ವಹಿಸಬೇಕು. ಇಲ್ಲವಾದರೆ ಜ.2ರಿಂದ ಜಿಲ್ಲೆಯಾದ್ಯಂತ ಆಹಾರ ಧಾನ್ಯಗಳ ಎತ್ತುವಳಿ ಕೆಲಸ ಸ್ಥಗಿತಗೊಳಿಸಿ, ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುವುದು ಎಂದು ಎಚ್ಚರಿಸಿದರು. ಒಕ್ಕೂಟದ ರಾಜ್ಯ ಜಂಟಿ ಕಾರ್ಯದರ್ಶಿ ಎನ್.ಸಿ.ಕುಮಾರ್, ಕಾರ್ಯದರ್ಶಿ ಮಹದೇವು, ಜಿಲ್ಲಾ ಉಪಾಧ್ಯಕ್ಷ ನರಸಿಂಹಮೂರ್ತಿ, ಪದಾಧಿಕಾರಿಗಳಾದ ಚೆಲುವರಾಜು, ಗೋವಿಂದರಾಜು ಗೋಷ್ಠಿಯಲ್ಲಿದ್ದರು.

ಮೈಸೂರು ಮಿತ್ರ ಬುಧವಾರ 28 ಡಿಸೆಂಬರ್ 2022

ವರುಣಾದಲ್ಲಿ ಯಾರೇ ಅಭ್ಯರ್ಥಿಯಾದರೂ ಅವರ ಗೆಲುವಿಗೆ ಶ್ರಮಿಸಿ

ಕಾರ್ಯಕರ್ತರಿಗೆ ರಾಜ್ಯ ಪ್ರವಾಸೋದ್ಯಮ ನಿಗಮದ ಅಧ್ಯಕ್ಷ ಕಾ.ಪು.ಸಿದ್ದಲಿಂಗಸ್ವಾಮಿ ಕರೆ



ತಿ.ನರಸೀಪುರ, ಡಿ.27– ವರುಣಾ ಹೈವೋಲ್ಟೇಜ್ ಕ್ಷೇತ್ರವಾಗಿದ್ದು, ಬಿಜೆಪಿ ಹೈಕಮಾಂಡ್ ಯಾರನ್ನೇ ಅಭ್ಯರ್ಥಿ ಮಾಡಿದರೂ ಅವರ ಗೆಲುವಿಗೆ ಶ್ರಮಿಸಬೇಕು ಎಂದು ರಾಜ್ಯ ಪ್ರವಾಸೋದ್ಯಮ ನಿಗಮದ ಅಧ್ಯಕ್ಷ ಕಾ.ಪು. ಸಿದ್ದಲಿಂಗಸ್ವಾಮಿ ಕಾರ್ಯಕರ್ತರಿಗೆ ಕರೆ ನೀಡಿದರು.

ವರುಣಾ ಕ್ಷೇತ್ರ ವ್ಯಾಪ್ತಿಯ ಕಾರ್ಯ ಗ್ರಾಮದಲ್ಲಿ ನಡೆದ ಬಿಜೆಪಿ ಮಹಾಶಕ್ತಿ ಕೇಂದ್ರದ ವಿಶೇಷ ಸಭೆಯಲ್ಲಿ ಮಾತನಾಡಿದ ಅವರು, ವರುಣಾದಿಂದ ಮಾಜಿ ಸಿಎಂ ಸಿದ್ದರಾಮಯ್ಯ ಸ್ಪರ್ಧಿಸುವುದರಿಂದ ಕ್ಷೇತ್ರ ರಾಜ್ಯದ ಗಮನ ಸೆಳೆದಿದೆ. ಕಳೆದ ಬಾರಿ ತಮ್ಮ ಮಗನ ಸ್ಪರ್ಧೆಗೆ ಅವಕಾಶ ಕಲ್ಪಿಸಿ ಮತ್ತೊಂದು ಕ್ಷೇತ್ರಕ್ಕೆ ಹೋಗಿದ್ದ ಸಿದ್ದರಾಮಯ್ಯ ಮತ್ತೆ ಇಲ್ಲಿಗೆ ಬರುತ್ತಿದ್ದಾರೆ. ಕ್ಷೇತ್ರದಲ್ಲಿ ಅವರು, ಅವರ ಮಗ ಯತೀಂದ್ರ ತಮ್ಮದೇ ಆದ ಕಾರ್ಯಕರ್ತರ ಪಡೆ ಕಟ್ಟಿದ್ದಾರೆ. ವರುಣಾದಿಂದ ಸಿದ್ದರಾಮಯ್ಯ ಅಥವಾ ಅವರ ಮಗ ಸ್ಪರ್ಧಿಸಬಹುದು. ಆದರೆ ನಮ್ಮ ಪಕ್ಷದ ಅಭ್ಯರ್ಥಿ ಘೋಷಣೆಯಾಗಿಲ್ಲ. ಯಾರಾಗುತ್ತಾರೆಂಬ ಸುಳಿವು ಇಲ್ಲ. ಹೀಗಾಗಿ ಹೈಕಮಾಂಡ್ ಯಾರನ್ನೇ ಅಭ್ಯರ್ಥಿ ಮಾಡಿದರೂ ಅವರ ಪರ ಕಾರ್ಯಕರ್ತರು ಕೆಲಸ ಮಾಡಲು ಟೊಂಕ ಕಟ್ಟಿ ನಿಲ್ಲಬೇಕು ಎಂದರು.

ಈ ಹಿಂದೆ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದ ವೇಳೆ ಸಾಮಾನ್ಯ ಕಾರ್ಯಕರ್ತನಾಗಿದ್ದ ನಾನು ಕೋಟ್ಯಾಂತರ ರೂ. ಅನುದಾನ ತಂದು ಕ್ಷೇತ್ರದ ಜನತೆಗೆ ಕೈಲಾದ ಸಹಾಯ ಮಾಡಿದ್ದೇ. ದೇವಸ್ಥಾನ ಜೀರ್ಣೋದ್ಧಾರ, ಚರಂಡಿ, ವಸತಿ ಸೇರಿದಂತೆ ವಿವಿಧ ಕಾಮಗಾರಿಗೆ ಸಹಾಯ ಮಾಡಿದ್ದೆ. ಗ್ರಾಮದ ಸಿದ್ದೇಶ್ವರ ದೇವಸ್ಥಾನದಿಂದ ಅಂಕನಾಥಸ್ವಾಮಿ ದೇವಸ್ಥಾನವರೆಗೂ ನೂರಾರು ದೇವಾಲಯಗಳ ಜೀರ್ಣೋದ್ಧಾರ ಮಾಡುವ ಮೂಲಕ ಕ್ಷೇತ್ರದ ಅಭಿವೃದ್ಧಿಗೆ ಕೊಡುಗೆ ನೀಡಿದ್ದೇನೆ ಎಂದರು.

ಜಿಲ್ಲಾ ಗ್ರಾಮಾಂತರ ಅಧ್ಯಕ್ಷೆ ಮಂಗಳಾ ಸೋಮಶೇಖರ್, ವರುಣಾ ಬ್ಲಾಕ್ ಅಧ್ಯಕ್ಷ ಕಲ್ಮಳ್ಳಿ ವಿಜಯ ಕುಮಾರ್ ಮಾತನಾಡಿ, ವರುಣಾದಲ್ಲಿ ಪಕ್ಷ ಸಂಘಟನೆಗೆ ಶ್ರಮಿಸಬೇಕು. ಪ್ರಧಾನಿ ಮೋದಿ, ಮಾಜಿ ಸಿಎಂ ಯಡಿಯೂರಪ್ಪ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರ ಜನಪರ ಕಾರ್ಯಕ್ರಮಗಳನ್ನು ಕ್ಷೇತ್ರದ ಮತದಾರರಿಗೆ ತಲುಪಿಸುವ ಕೆಲಸವನ್ನು ಕಾರ್ಯಕರ್ತರು ಮಾಡಬೇಕು. ಆ ಮೂಲಕ ಈ ಬಾರಿ ವರುಣಾದಲ್ಲಿ ಬಿಜೆಪಿ ಬಾವುಟ ಹಾರಿಸಲು ಕಾರ್ಯಕರ್ತರು ಕೊಡುಗೆ ನೀಡಬೇಕು ಎಂದರು.

ಸಭೆಯಲ್ಲಿ ಜಿಪಂ ಮಾಜಿ ಸದಸ್ಯ ಬಿ.ಎನ್. ಸದಾನಂದ, ವರುಣಾ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿ ಕುಪ್ಪರವಳ್ಳಿ ಶಿವಣ್ಣ, ಜಿಲ್ಲಾ ಉಪಾಧ್ಯಕ್ಷ ದೇವನೂರು ಪ್ರತಾಪ್, ಜಿಪಂ ಮಾಜಿ ಅಧ್ಯಕ್ಷ ಸಿದ್ದವೀರಪ್ಪ ಜಿಲ್ಲಾ ಕಾರ್ಯದರ್ಶಿ ವೆಂಕಟರಮಣಶೆಟ್ಟಿ, ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಸಿ.ಎಂ. ಮಹದೇವಯ್ಯ, ಪಕ್ಷದ ಹಿರಿಯ ಮುಖಂಡ ತೋಟದಪ್ಪ ಬಸವ ರಾಜು, ಎಸ್‌ಟಿ ಮೋರ್ಚಾ ಜಿಲ್ಲಾ ಕಾರ್ಯದರ್ಶಿ ಎ.ಎನ್.ರಂಗೂ ನಾಯಕ್, ಕೌಲಂದೆ ಶಕ್ತಿ ಕೇಂದ್ರದ ಅಧ್ಯಕ್ಷ ಮಲ್ಲಣ್ಣ, ಮಂಜುನಾಥ್, ಜಗದೀಶ್, ನಾಗಪ್ಪ, ಕುಮಾರ್, ರೇವಣ್ಣ, ಸುರೇಶ್, ಮಹದೇವಯ್ಯ, ಮಲ್ಲಣ್ಣ ಮತ್ತಿತರರಿದ್ದರು.

ನಾನೇ ಅಭ್ಯರ್ಥಿ ಎಂದು ಬಿಂಬಿಸಿಕೊಳ್ಳಬೇಡಿ!

ಪಕ್ಷದಲ್ಲಿ ಹಲವು ಟಿಕೆಟ್ ಆಕಾಂಕ್ಷಿಗಳಿದ್ದಾರೆ. ಕಾಂಗ್ರೆಸ್‌ನಲ್ಲಿ ಅಪ್ಪ ಮಕ್ಕಳು ಇಬ್ಬರೇ ಇದ್ದಾರೆ. ನಮ್ಮಲ್ಲಿ ಅಭ್ಯರ್ಥಿಯಾಗಿ ಯಾರನ್ನಾದರೂ ಮಾಡಲಿ. ನಾವು ಮೊದಲು ಪಕ್ಷ ಸಂಘಟನೆಯಲ್ಲಿ ನಮ್ಮನ್ನು ತೊಡಗಿಸಿಕೊಳ್ಳೋಣ. ನನಗೇ ಟಿಕೆಟ್ ಸಿಗುತ್ತದೆ. ನಾನೇ ಅಭ್ಯರ್ಥಿಯಾಗಲಿದ್ದೇನೆ ಎಂದು ಯಾರೂ ಬಿಂಬಿಸಿಕೊಳ್ಳುವ ಕೆಲಸಕ್ಕೆ ಮುಂದಾಗಬೇಡಿ. ವರಿಷ್ಠರ ತೀರ್ಮಾನಕ್ಕೆ ಬದ್ಧರಾಗಿರೋಣ.

ಮಾಜಿ ಸಿಎಂ ಸಿದ್ದರಾಮಯ್ಯ ಸ್ಪರ್ಧಿಸುವ ಹಿನ್ನಲೆಯಲ್ಲಿ ವರುಣಾ ಕ್ಷೇತ್ರ ರಾಜ್ಯದ ಗಮನ ಸೆಳೆಯುವುದರಿಂದ ಅವರ ವಿರುದ್ಧ ಸಮರ್ಥ ಅಭ್ಯರ್ಥಿ ಕಣಕ್ಕಿಳಿಸಬೇಕೆಂಬ ಚಿಂತನೆ ರಾಜ್ಯ, ರಾಷ್ಟ್ರ ನಾಯಕರಿಗಿದೆ. ಹೀಗಾಗಿ ಕ್ಷೇತ್ರದಲ್ಲಿ ಯಾರೇ ಅಭ್ಯರ್ಥಿಯಾದರೂ ಅವರ ಗೆಲುವಿಗೆ ಶ್ರಮಿಸಬೇಕು.

- ಕಾಪು ಸಿದ್ದಲಿಂಗಸ್ವಾಮಿ, ರಾಜ್ಯ ಪ್ರವಾಸೋದ್ಯಮ ನಿಗಮದ ಅಧ್ಯಕ್ಷ.


ಬೈಕ್‌ಗೆ ಕಾರು ಡಿಕ್ಕಿ: ಸವಾರ ಸಾವು



ತಿ.ನರಸೀಪುರ, ಡಿ.27– ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿ, ಮತ್ತೋರ್ವ ಗಾಯಗೊಂಡಿರುವ ಘಟನೆ ತಾಲೂಕಿನ ನರಗ್ಯಾತನಹಳ್ಳಿ ಗ್ರಾಮದ ಬಳಿ ಸಂಭವಿಸಿದೆ.

ಪಟ್ಟಣದ ತ್ರಿವೇಣಿ ನಗರದ ನಿವಾಸಿ ವೀರಾಚಾರಿ ಎಂಬುವರ ಪುತ್ರ ಅಭಿಷೇಕ್(21) ಸಾವನ್ನಪ್ಪಿದವರಾಗಿದ್ದು, ಹಿಂಬದಿ ಸವಾರ ಸಚಿನ್‌ಗೆ ಸಣ್ಣ ಪುಟ್ಟ ಗಾಯಗಳಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಅಭಿಷೇಕ್ ಮತ್ತು ಸಚಿನ್ ತಮ್ಮ ಬಜಾಜ್ ಡಿಸ್ಕವರ್ ಬೈಕ್(ಕೆ.ಎ.55, ಐ–7512)ನಲ್ಲಿ ತಿ.ನರಸೀಪುರಕ್ಕೆ ಬರುತ್ತಿದ್ದ ವೇಳೆ ವೇಗವಾಗಿ ಬಂದ ಕಾರು ನೆರಗ್ಯಾತನಹಳ್ಳಿ ಬಸ್ ನಿಲ್ದಾಣದ ಬಳಿ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಅಭಿಷೇಕ್ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಘಟನೆ ಬಳಿಕ ಕಾರು ಚಾಲಕ ಪರಾರಿಯಾಗಿದ್ದಾನೆ. ಮೃತನ ತಂದೆ ವೀರಾಚಾರಿ ಪಟ್ಟಣ ಪೊಲೀಸರಿಗೆ ದೂರು ನೀಡಿದ್ದು, ಎಸ್‌ಐ ಬಿ.ಅಶೋಕ್ ಕುಮಾರ್ ತನಿಖೆ ಕೈಗೊಂಡಿದ್ದಾರೆ.

ನಾಗರಹೊಳೆಯಲ್ಲಿ ಗುಂಡೇಟಿಗೆ ಕಾಡೆಮ್ಮೆ ಸಾವು



ಹುಣಸೂರು, ಡಿ.27– ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ಆನೆಚೌಕೂರು ವನ್ಯಜೀವಿ ವಲಯದ ದೇವಮಚ್ಚಿ ಶಾಖೆಯ ಸಿಂಗನೂರು ಗಸ್ತಿನ ಮೈಸೂರು–ಗೋಣಿಕೊಪ್ಪ ಹೆದ್ದಾರಿ ಬದಿ 8 ವರ್ಷದ ಕಾಡೆಮ್ಮೆ ಗುಂಡೇಟಿನಿಂದ ಸಾವನ್ನಪ್ಪಿದೆ.

ಸ್ಥಳಕ್ಕೆ ಹುಣಸೂರು ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ದಯಾನಂದ ಭೇಟಿ ನೀಡಿ ಪರಿಶೀಲಿಸಿದರು. ಪಶುವೈದ್ಯ ಅಧಿಕಾರಿ ರಮೇಶ್ ಕಾಡೆಮ್ಮೆ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಕಳೇಬರವನ್ನು ಅರಣ್ಯದೊಳಗೆ ಸುಡಲಾಯಿತು. ಕಾಡೆಮ್ಮೆ ಗುಂಡೇಟಿನಿಂದ ಸಾವನ್ನಪ್ಪಿದ್ದು, ಆರೋಪಿಗಳ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ದಯಾನಂದ ತಿಳಿಸಿದ್ದಾರೆ. ಆನೆ ಚೌಕೂರು ವಲಯ ಅರಣ್ಯಾಧಿಕಾರಿ ದೀಪಕ್, ಎಸ್‌ಟಿಪಿಎಫ್ ಸಿಬ್ಬಂದಿ ಹಾಗೂ ಅರಣ್ಯ ರಕ್ಷಕ ಸಿಬ್ಬಂದಿ ಇದ್ದರು.

ಬರಡನಪುರದಲ್ಲಿ ಸಾಧಕರಿಗೆ ಸನ್ಮಾನ



ಜಯಪುರ, ಡಿ.27– ಜಯಪುರ ಹೋಬಳಿಯ ಬರಡನಪುರ ಗ್ರಾಮದಲ್ಲಿ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿ ಕೆಎಸ್‌ಎಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ವಾಣಿಜ್ಯ ತೆರಿಗೆ ಅಧಿಕಾರಿಯಾಗಿ ಆಯ್ಕೆಯಾದ ಗ್ರಾಮದ ನಿವಾಸಿ ಬಿ.ಬಸವರಾಜು, ನಂಜನಗೂಡು ತಹಸೀಲ್ದಾರ್ ಬಿ.ಶಿವಮೂರ್ತಿ, ಅವರ ಪತ್ನಿ ಸುಧಾ ಶಿವಮೂರ್ತಿ, ಜಯಪುರ ಗ್ರಾಮದ ಉಪನ್ಯಾಸಕಿ ಮಹದೇವಮ್ಮ, ರಾಜ್ಯ ಲೆಕ್ಕಪತ್ರ ಇಲಾಖೆಯ ಅಧೀಕ್ಷಕ ಅರುಣ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು. ಗ್ರಾಮದ ಮುಖಂಡ ಕೆ.ಶಿವನಂಜಪ್ಪ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಕಾಂಪೌಂಡರ್ ಮಹದೇವಪ್ಪ ಸೇರಿದಂತೆ ಅಕ್ಕಪಕ್ಕದ ಗ್ರಾಮಸ್ಥರು ಹಾಜರಿದ್ದರು.



ಹೆಚ್.ಡಿ.ಕೋಟೆ ತಾಲೂಕಿನ ಕಂಚಮಳ್ಳಿ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ಮೈಸೂರು ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಹುಲ್ಲಹಳ್ಳಿ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ಎನ್‌ಎಸ್‌ಎಸ್ ಘಟಕದ ಸಂಯುಕ್ತಾಶ್ರಯದಲ್ಲಿ ಸ್ವಚ್ಛತಾ ಅಭಿಯಾನ ನಡೆಯಿತು. ಈ ವೇಳೆ ಮೈಮುಲ್ ನಿರ್ದೇಶಕ ಕೆ.ಈರೇಗೌಡ, ಕಂಚಮಳ್ಳಿ ಗ್ರಾಪಂ ಉಪಾಧ್ಯಕ್ಷ ರಂಗಸ್ವಾಮಿ, ಸದಸ್ಯರಾದ ಮಲ್ಲಿಗಮ್ಮ, ಶೇಖರ್, ಪಿಡಿಓ ನಿವೇದಿತಾ, ಶಿಬಿರಾರ್ಥಿಗಳಾದ ಎಂ.ಶಿವಕುಮಾರ ಸ್ವಾಮಿ, ಆರ್.ಬಿ.ಪುಟ್ಟಮಾದಪ್ಪ, ನಾಗೇಶ್, ಉಪನ್ಯಾಸಕರು ಇನ್ನಿತರರಿದ್ದರು.

ತಟ್ಟೆಕೆರೆಯಲ್ಲಿ ಪಶು ಚಿಕಿತ್ಸಾ ಕೇಂದ್ರ ಉದ್ಘಾಟನೆ



ಹನಗೋಡು, ಡಿ.27– ಇಲ್ಲಿಗೆ ಸಮೀಪದ ತಟ್ಟೆಕೆರೆ ಗ್ರಾಮದಲ್ಲಿ ಪಶು ವೈದ್ಯಕೀಯ ಇಲಾಖೆಯಿಂದ 34 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಪಶು ಚಿಕಿತ್ಸಾ ಕೇಂದ್ರವನ್ನು ಶಾಸಕ ಹೆಚ್.ಪಿ.ಮಂಜುನಾಥ್ ಉದ್ಘಾಟಿಸಿದರು.


ನಂತರ ಮಾತನಾಡಿದ ಅವರು, ತಾಲೂಕಿನಲ್ಲಿ 74 ಸಾವಿರಕ್ಕೂ ಹೆಚ್ಚು ಜಾನುವಾರುಗಳಿದ್ದು, ಪ್ರಸಕ್ತ ಸಾಲಿನಲ್ಲಿ ಜಾನುವಾರುಗಳಿಗೆ ನೀಡುವ ಲಸಿಕೆ ಕೊರತೆ ಉಂಟಾಗದಂತೆ ತಾಲೂಕು ಆಡಳಿತ ಮುನ್ನೆಚ್ಚರಿಕೆ ವಹಿಸಿದ್ದು, ಈಗಾಗಲೇ ಕಾಲುಬಾಯಿ ಜ್ವರ ಹಾಗೂ ಚರ್ಮ ಗಂಟು ರೋಗಗಳಿಗೆ ಶೇ.90ರಷ್ಟು ಲಸಿಕೆ ನೀಡಲಾಗಿದೆ. ಹೈನುಗಾರಿಕೆಗಾಗಿ ಇಲಾಖೆ ವತಿಯಿಂದ ನೀಡುವ ಸವಲತ್ತುಗಳನ್ನು ರೈತರಿಗೆ ತಲುಪಿಸಲು ವೈದ್ಯಾಧಿಕಾರಿ ಹಾಗೂ ಸಿಬ್ಬಂದಿಗಳ ಜೊತೆಗೆ ಜನಪ್ರತಿನಿಧಿಗಳು ಕೈ ಜೋಡಿಸಬೇಕು ಎಂದರು.

ಗ್ರಾಮದ ಈಶ್ವರ ದೇವಾಲಯದ ಮುಂಭಾಗದ ಅರಳಿ ಮರಕ್ಕೆ ಅಶ್ವತ್ಥ ಕಟ್ಟೆಯನ್ನು ನನ್ನ ತಾಯಿ ರತ್ನ ಪ್ರೇಮ್ ಕುಮಾರ್ ಹೆಸರಲ್ಲಿ ಕಟ್ಟಿಸಿ ಕೊಡುವುದಾಗಿ ಹಾಗೂ ಅರ್ಧಕ್ಕೆ ನಿಂತಿರುವ ಗರಡಿ ಮನೆ ಕಾಮಗಾರಿ ಪೂರ್ಣಗೊಳಿಸುವುದಾಗಿ ಭರವಸೆ ನೀಡಿದ ಅವರು ಗ್ರಾಮ ಪರಿಮಿತಿಯಲ್ಲಿ ಬಾಕಿ ಉಳಿದಿರುವ ರಸ್ತೆ ಕಾಮಗಾರಿ ಪೂರ್ಣಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷ ದೇವರಾಜ್, ಉಪಾಧ್ಯಕ್ಷೆ ಮಹದೇವಮ್ಮ, ತಾಪಂ ಮಾಜಿ ಸದಸ್ಯ ಶ್ರೀನಿವಾಸ್, ಗ್ರಾಪಂ ಸದಸ್ಯರಾದ ಕುಮಾರ್, ನವೀನ್ ಕುಮಾರ್, ಗೋವಿಂದೇಗೌಡ, ಮಂಜುಳ, ಪಾರ್ವತಮ್ಮ, ಭಾಗ್ಯಮ್ಮ, ಡೇರಿ ಅಧ್ಯಕ್ಷ ಚಂದ್ರಹಾಸ, ಮುಖಂಡರಾದ ನಾರಾಯಣ್, ಪ್ರಸನ್ನ ಕುಮಾರ್, ವೀರಭದ್ರೇಗೌಡ, ಹರೀಶ್, ದಿನೇಶ್, ಪಶುಪಾಲನಾ ಇಲಾಖೆ ಸಹಾಯಕ ನಿರ್ದೇಶಕ ಡಾ.ಚನ್ನಬಸಪ್ಪ, ಪಶುವೈದ್ಯರಾದ ಡಾ.ದರ್ಶನ್, ಡಾ.ನಾಗರಾಜ್ ಸೇರಿದಂತೆ ಇತರರಿದ್ದರು.

ಪಿರಿಯಾಪಟ್ಟಣದಲ್ಲಿ ದುಷ್ಕರ್ಮಿಗಳಿಂದ ಚರ್ಚ್ ಮೇಲೆ ದಾಳಿ

ಬಾಲ ಯೇಸು ಮೂರ್ತಿ ಭಗ್ನ, ಹೂವಿನ ಕುಂಡ, ಮೈಕ್ ಜಖಂ



ಪಿರಿಯಾಪಟ್ಟಣ, ಡಿ.27– ಕ್ರಿಸ್‌ಮಸ್ ಬೆನ್ನಲ್ಲೇ ದುಷ್ಕರ್ಮಿಗಳು ಚರ್ಚ್ ಮೇಲೆ ದಾಳಿ ನಡೆಸಿರುವ ಘಟನೆ ಪಟ್ಟಣದಲ್ಲಿ ಮಂಗಳವಾರ ಸಂಜೆ ನಡೆದಿದೆ.

ಪಟ್ಟಣದ ಸೆಂಟ್ ಮೇರಿಸ್ ಚರ್ಚ್ ಮೇಲೆ ದಾಳಿ ನಡೆಸಿರುವ ದುಷ್ಕರ್ಮಿಗಳು ಒಳನುಗ್ಗಿ, ಕ್ರಿಸ್‌ಮಸ್ ಹಿನ್ನೆಲೆಯಲ್ಲಿ ಟೇಬಲ್ ಮೇಲಿನ ಬುಟ್ಟಿಯಲ್ಲಿ ಮಲಗಿಸಿದ್ದ ಬಾಲ ಏಸುವಿನ ಮೂರ್ತಿ, ತೊಟ್ಟಿಲು, ಹೂವಿನ ಕುಂಡ, ಮೇಣದ ಬತ್ತಿ ಸ್ಟ್ಯಾಂಡ್ ಧ್ವಂಸಗೊಳಿಸಿದ್ದು, ಚರ್ಚ್‌ನಲ್ಲಿದ್ದ 8 ಮೈಕ್‌ಗಳ ಪೈಕಿ 2 ಮೈಕ್‌ಗಳನ್ನು ನಾಶ ಮಾಡಿದ್ದಾರೆ. ಉಳಿದ 6 ಮೈಕ್‌ಗಳು ಹಾಗೂ ಚರ್ಚ್ ಹೊರಗೆ ಇದ್ದ 3 ಕಾಣಿಕೆ ಹುಂಡಿಗಳನ್ನು ಕಳವು ಮಾಡಿ ಪರಾರಿಯಾಗಿದ್ದಾರೆ. ಅಲ್ಲದೇ ಘಟನೆಯಿಂದ ಸುಮಾರು 50 ರಿಂದ 60 ಸಾವಿರ ರೂ. ನಷ್ಟ ಸಂಭವಿಸಿದೆ ಎನ್ನಲಾಗಿದೆ. ಚರ್ಚ್ ಫಾದರ್ ಜಾನ್‌ಪೌಲ್ ಅವರ ಸಹಾಯಕ ರಾಜು ಎಂಬುವವರು ಸಂಜೆ ಚರ್ಚ್‌ಗೆ ತೆರಳಿದಾಗ ಪ್ರಕರಣ ಬೆಳಕಿಗೆ ಬಂದಿದೆ. ಚರ್ಚ್‌ನಲ್ಲಿ ಯಾರೂ ಇಲ್ಲದ ವೇಳೆ ಈ ಘಟನೆ ನಡೆದಿದೆ.

ಕಾರ್ಯ ನಿಮಿತ್ತ ಮೈಸೂರಿಗೆ ತೆರಳಿದ್ದ ಫಾದರ್ ಜಾನ್ ಪೌಲ್ ಈ ಸಂಬಂಧ ಪಟ್ಟಣದ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಸರ್ಕಲ್ ಇನ್ಸ್‌ಪೆಕ್ಟರ್ ಕೆ.ವಿ.ಶ್ರೀಧರ್, ಸಬ್ ಇನ್ಸ್‌ಪೆಕ್ಟರ್ ಪುಟ್ಟಸ್ವಾಮಿ ಅವರು ಚರ್ಚ್‌ಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ.

ಇದಕ್ಕೂ ಮುನ್ನಾ ಇಂದು ಮಧ್ಯಾಹ್ನ ಪಟ್ಟಣದ ಮಷ್ಟಾ ಆಶ್ರಮಕ್ಕೆ ನುಗ್ಗಿದ್ದ ದುಷ್ಕರ್ಮಿಗಳು ಆಶ್ರಮದಲ್ಲಿದ್ದ ಕಾರು ಕಳವಿಗೆ ಯತ್ನಿಸಿದ್ದರು. ಈ ವೇಳೆ ಅಲ್ಲಿನ ಮೇಲ್ವಿಚಾರಕ ಆಂಟೋನಿ ಎಂಬುವರು ಕೂಗಿಕೊಂಡಿದ್ದರಿಂದ ದುಷ್ಕರ್ಮಿಗಳು ಕಾರನ್ನು ಅಲ್ಲೇ ಬಿಟ್ಟು ಪರಾರಿಯಾಗಿದ್ದರು. ಈ ಸಂಬಂಧ ಯಾವುದೇ ದೂರು ದಾಖಲಾಗಿರಲಿಲ್ಲ.



ತಿ.ನರಸೀಪುರ ವಾಟಾಳು ಮಠಾಧ್ಯಕ್ಷ ಡಾ.ಶ್ರೀಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಹಾಗೂ ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಮಂಜುನಾಥ್ ಪಟ್ಟಣದ ಪೂಜಿತ್ ಮೆಡಿಕಲ್‌ನ ನೂತನ ದಿನದರ್ಶಿಕೆ ಬಿಡುಗಡೆಗೊಳಿಸಿದರು. ಈ ವೇಳೆ ವಾಟಾಳು ಮಠದ ಶ್ರೀಕಿರಣ್ ಸ್ವಾಮೀಜಿ, ಚುಂಚನಹಳ್ಳಿ ಮಠದ ಶ್ರೀಚನ್ನಬಸವ ಸ್ವಾಮೀಜಿ, ಹೊಸಮಠಹುಂಡಿ ಮಠದ ಶ್ರೀರಾಜಶೇಖರ ಸ್ವಾಮೀಜಿ, ಪೂಜಿತ್ ಮೆಡಿಕಲ್ ಕುಮಾರ್, ಹೋಟೆಲ್ ಮಹೇಶ್, ನಾಗಪ್ಪ, ಪೆಟ್ರೋಲ್ ಬಂಕ್ ಚಂದ್ರಪ್ಪ ಹಾಜರಿದ್ದರು.

ನಂ.ಗೂಡಿನ 7 ವಾರ್ಡ್‌ಗಳು ಸ್ಲಂಬೋರ್ಡ್ ವ್ಯಾಪ್ತಿಗೆ ಸೇರ್ಪಡೆ

ಜನರಿಗೆ ಸರ್ಕಾರಿ ಸೌಲಭ್ಯ ಕಲ್ಪಿಸಲು ಮಂಡಳಿಗೆ ಪತ್ರ: ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ



ನಂಜನಗೂಡು, ಡಿ.27– ನಗರದ ಹಳ್ಳದಕೇರಿ, ತೋಪಿನ ಬೀದಿ, ಕುರುಬಗೇರಿ ಸೇರಿದಂತೆ 7 ವಾರ್ಡ್‌ಗಳನ್ನು ಕೊಳಚೆ ನಿರ್ಮೂಲನಾ ಮಂಡಳಿ ವ್ಯಾಪ್ತಿಗೆ ಸೇರಿಸಲಾಗಿದ್ದು, ಇಲ್ಲಿನ ಜನರಿಗೆ ಸರ್ಕಾರಿ ಸೌಲಭ್ಯಗಳನ್ನು ಕಲ್ಪಿಸುವಂತೆ ಮಂಡಳಿಯವರಿಗೆ ಪತ್ರ ಬರೆಯಲಾಗಿದೆ ಎಂದು ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ ತಿಳಿಸಿದರು.

ನಗರದ ನಗರಸಭೆ ಸಭಾಂಗಣದಲ್ಲಿ ಮಂಗಳವಾರ ನಡೆದ ಸಾಮಾನ್ಯ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ 7 ವಾರ್ಡ್‌ಗಳ ವ್ಯಾಪ್ತಿಯ ಬಡವರಿಗೆ ಮನೆ ಸೇರಿದಂತೆ ಇನ್ನಿತರ ಸವಲತ್ತುಗಳನ್ನು ಕಲ್ಪಿಸುವಂತೆ ಸ್ಲಂ ಬೋರ್ಡ್‌ಗೆ ಪತ್ರ ಬರೆಯಲಾಗಿದೆ ಎಂದರು.

ಸದಸ್ಯ ಕಪಿಲೇಶ್ ಮಾತನಾಡಿ, ನನ್ನ ವಾರ್ಡ್‌ನಲ್ಲಿ ರಸ್ತೆ, ಚರಂಡಿ ಕಾಮಗಾರಿ ಆರಂಭವಾಗಿ 6 ತಿಂಗಳು ಕಳೆದರೂ, ಗುತ್ತಿಗೆದಾರ ಇನ್ನೂ ಕಾಮಗಾರಿ ಪೂರ್ಣಗೊಳಿಸಿಲ್ಲ. ನಗರಸಭೆಯಲ್ಲಿ ಸಾರ್ವಜನಿಕರು ಖಾತೆ ಮಾಡಿಸಿಕೊಳ್ಳಲು ಪರದಾಡುವ ಪರಿಸ್ಥಿತಿ ಇದೆ. ದಾಖಲೆಗಳು ಸಮರ್ಪಕವಾಗಿದ್ದರೂ, ಅಧಿಕಾರಿಗಳು ಇಲ್ಲಸಲ್ಲದ ಸಬೂಬು ಹೇಳಿ ಜನರನ್ನು ಅಲೆಯುವಂತೆ ಮಾಡುತ್ತಿದ್ದಾರೆ. ನಗರಸಭೆಯನ್ನು ಜನ ನರಕಸಭೆ ಎಂದು ಹಳಿಯುತ್ತಿದ್ದಾರೆ. 45 ದಿನದೊಳಗೆ ಖಾತೆ ಮಾಡಿಕೊಡಬೇಕೆಂಬ ನಿಯಮವಿದ್ದರೂ, ಅಧಿಕಾರಿಗಳು ನಿಯಮದಂತೆ ಖಾತೆ ಮಾಡಿಕೊಡುತ್ತಿಲ್ಲ ಎಂದು ದೂರಿದರು.

ಸದಸ್ಯ ಗಂಗಾಧರ್ ಮಾತನಾಡಿ, ಆರ್.ಪಿ.ರಸ್ತೆ ಗುಂಡಿಗಳನ್ನು ಮುಚ್ಚುವಂತೆ ಮನವಿ ಸಲ್ಲಿಸಿ 2 ವರ್ಷವಾದರೂ ಗುಂಡಿ ಮುಚ್ಚಲು ಮುಂದಾಗಿಲ್ಲ. ಮುಖ್ಯಮಂತ್ರಿಗಳು ಬಂದಾಗ ಮಾತ್ರ ಗುಂಡಿ ಮುಚ್ಚಿ ತೇಪೆ ಹಾಕಲಾಗಿದೆ. ತೆರಿಗೆ ಕಟ್ಟುತ್ತಿರುವ ಜನರಿಗೆ ಸಮರ್ಪಕ ಮೂಲ ಸೌಕರ್ಯ ಒದಗಿಸಲು ಮುಂದಾಗಿಲ್ಲ ಎಂದು ಆರೋಪಿಸಿದರು.

ಸದಸ್ಯೆ ಗಾಯಿತ್ರಿ ಮಾತನಾಡಿ, 27 ಲಕ್ಷ ವೆಚ್ಚದಡಿ ನಗರದ ಮನೆಮನೆಗೆ ವಿತರಿಸಿರುವ ಕಸದ ಬುಟ್ಟಿಗಳು ಕಳಪೆ ಗುಣಮಟ್ಟ ಕೂಡಿದೆ. ನಗರದ ಹಳೇ ಟೌನ್ 10 ವಾರ್ಡ್ ಜನ ಶುದ್ಧ ಕುಡಿಯುವ ನೀರು ಸಿಗದೆ ಪರಿತಪಿಸುತ್ತಿದ್ದಾರೆ. ಅಲ್ಲದೇ 10 ವಾರ್ಡ್‌ಗಳಿಗೆ ನಿರಂತರ ನೀರು ಸರಬರಾಜು ಯೋಜನೆ ಪೈಪ್‌ಲೈನ್ ಅಳವಡಿಸಲಾಗಿದ್ದು, ಸಂಪರ್ಕ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಆಯುಕ್ತ ರಾಜಣ್ಣ ಪ್ರತಿಕ್ರಿಯಿಸಿ ಈ ಬಗ್ಗೆ ಕ್ರಮ ವಹಿಸಲಾಗಿದೆ. ನಾಳೆಯಿಂದ ಹಳೇ ಟೌನ್ ವ್ಯಾಪ್ತಿಯಲ್ಲಿ ಧ್ವನಿವರ್ಧಕದ ಮೂಲಕ ಪ್ರಚಾರ ನಡೆಸಿ, ಸಂಪರ್ಕ ಪಡೆದುಕೊಳ್ಳುವಂತೆ ಮನವಿ ಮಾಡಲಾಗುವುದು ಎಂದರು.

ಸದಸ್ಯೆ ಮೀನಾಕ್ಷಿ ಮಾತನಾಡಿ, ನಗರದ ಕೆಹೆಚ್‌ಬಿ ಕಾಲೋನಿಯಿಂದ ಊಟಿ ರಸ್ತೆಗೆ ಸಂಪರ್ಕ ಕಲ್ಪಿಸುವ ಹನುಮಂತಪ್ಪ ಮಿಲ್ ಬಳಿ ರಸ್ತೆ ವಿಸ್ತೀರ್ಣ ಕಾಮಗಾರಿಗೆ ಭೂಮಿ ಪೂಜೆ ನಡೆಸಿ 6 ತಿಂಗಳಾದರೂ ಕೆಲಸ ಆರಂಭಗೊಂಡಿಲ್ಲ ಎಂದು ದೂರಿದರು.

ಎಸ್.ಪಿ.ಮಹೇಶ್, ಮಂಗಳಮ್ಮ ಮಾತನಾಡಿ, ವಾರ್ಡ್‌ಗಳಲ್ಲಿ ಬೀದಿ ದೀಪಗಳು ಕೆಟ್ಟು ನಿಂತಿವೆ. ಕಳೆದ 6 ತಿಂಗಳಿನಿಂದ ಬೀದಿ ದೀಪ ಅಳವಡಿಸುವಂತೆ ಮನವಿ ಮಾಡಿ ಸಾಕಾಗಿದೆ. ರಸ್ತೆ ಹಾಗೂ ಚರಂಡಿ ನಿರ್ಮಾಣ ಸೇರಿದಂತೆ ಗುತ್ತಿಗೆ ಪಡೆದ ಗುತ್ತಿಗೆದಾರ ನಂದೀಶ್ ಅವಧಿ ಮುಗಿಯುತ್ತಿದ್ದರೂ ಕಾಮಗಾರಿ ಆರಂಭಿಸಿಲ್ಲ. ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಿ, ಮತ್ತೆ ಕಾಮಗಾರಿ ನಿರ್ವಹಣೆಗಾಗಿ ಟೆಂಡರ್ ಕರೆಯಿರಿ ಎಂದು ಒತ್ತಾಯಿಸಿದರು.

ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ ಬೀದಿ ದೀಪಗಳ ಸರಬರಾಜಿಗೆ ಕರೆದಿದ್ದ ಟೆಂಡರ್ ಒಪ್ಪಿಗೆಯಾಗಿದ್ದು, ಶೀಘ್ರದಲ್ಲಿ ಬೀದಿ ದೀಪ ಅಳವಡಿಕೆಗೆ ಕ್ರಮವಹಿಸಲಾಗುವುದು. ಅಭಿವೃದ್ಧಿ ಕಾಮಗಾರಿಗಳನ್ನು ಕಾಲಮಿತಿಯಲ್ಲಿ ನಿರ್ವಹಿಸುವಂತೆ ಗುತ್ತಿಗೆದಾರರಿಗೆ ತಾಕೀತು ಮಾಡಲಾಗುವುದು ಎಂದರು.

ಸಭೆಯಲ್ಲಿ ಆಯುಕ್ತ ರಾಜಣ್ಣ, ಎಇಇ ಸುರೇಶ್, ಉಪಾಧ್ಯಕ್ಷೆ ನಾಗಮಣಿ, ಮಹದೇವಪ್ರಸಾದ್, ದೇವ, ಎನ್.ಎಸ್.ಯೋಗೇಶ್, ಗಿರೀಶ್ ಕುಮಾರ್, ಖಾಲೀದ್ ಅಹಮ್ಮದ್, ಮಹದೇವಮ್ಮ, ನಂದಿನಿ, ರೆಹೆನಾ ಬಾನು, ಶ್ವೇತ ಲಕ್ಷ್ಮಿ, ಪ್ರದೀಪ್, ವಿಜಯಲಕ್ಷ್ಮಿ, ವಸಂತ, ಮಂಜುಳ, ಅಧಿಕಾರಿಗಳಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ವೇದ (ಕ): ಬೆ.7ಕ್ಕೆ, ಬೆ.10.05ಕ್ಕೆ, ಮ.1.05ಕ್ಕೆ, ಕಾಂತಾರ (ಕ): ಸಂ.4.15ಕ್ಕೆ, ಧಮಾಕ (ತೆ): ರಾ.7.10ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.9.50ಕ್ಕೆ, ಕನೆಕ್ಟ್ (ತ): ಮ.1.40ಕ್ಕೆ, 18 ಪೇಜಸ್ (ತೆ): ಸಂ.4.05ಕ್ಕೆ, ವೇದ (ಕ): ರಾ.7.05ಕ್ಕೆ, ಕಾಪ (ಮ): ರಾ.10.05ಕ್ಕೆ.
ಸ್ಕ್ರೀನ್ 3	ಹೊಸ ದಿನಚರಿ (ಕ): ಬೆ.10.45ಕ್ಕೆ, ಸರ್ಕಸ್ (ಹಿಂ): ಮ.1.20ಕ್ಕೆ, ರಾ.7.05ಕ್ಕೆ, ರಾ.9.55ಕ್ಕೆ, ವಿಶಾಲ್ ಇನ್ ಲಾಠಿ (ತ): ಸಂ.4.10ಕ್ಕೆ.
ಸ್ಕ್ರೀನ್ 4	ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.10.55ಕ್ಕೆ, ಮ.2.35ಕ್ಕೆ, ಸಂ.6.15ಕ್ಕೆ, ರಾ.9.50ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ವೇದ (ಕ): ಬೆ.9.55ಕ್ಕೆ, ಮ.1.05ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ, 18 ಪೇಜಸ್ (ತೆ): ಸಂ.4.15ಕ್ಕೆ.
ಸ್ಕ್ರೀನ್ 2	ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.11ಕ್ಕೆ, ಮ.2.50ಕ್ಕೆ, ಸಂ.6.40ಕ್ಕೆ, ರಾ.10.30ಕ್ಕೆ,
ಸ್ಕ್ರೀನ್ 3	ಕಾಂತಾರ (ಕ): ಬೆ.11.10ಕ್ಕೆ, ಡಾ.56 (ಕ): ಮ.2.05ಕ್ಕೆ, ವಿಜಯಾನಂದ (ಕ): ಸಂ.4.25ಕ್ಕೆ, ಮೈಸೂರು ಡೈರಿಸ್ (ಕ): ರಾ.7.40ಕ್ಕೆ, ಪಂಚತಾರಂ (ತೆ): ರಾ.10.10ಕ್ಕೆ.
ಸ್ಕ್ರೀನ್ 4	ಗುರುತುಂದ ಸೀತಾಕಾಲಂ (ತೆ): ಬೆ.10.25ಕ್ಕೆ, ರಾ.7.20ಕ್ಕೆ, ನೈ ಸೇಕರ್ ರಿಟರ್ನ್ಸ್ (ತ): ಮ.1.15ಕ್ಕೆ, ಕಾಂತಾರ (ಕ): ಸಂ.4.15ಕ್ಕೆ, ವರಲಾಕು ಮುಕ್ಕಿಯಂ (ತ): ರಾ.10.20ಕ್ಕೆ,

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲ್ಯಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವೇದ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಾಂತಾರ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವೇದ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಟೆಂಪರ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ವೇದ (ಕ)	4 ಪ್ರದರ್ಶನಗಳು
ಸಂಗಂ	
ಲಾಠಿ (ತ)	4 ಪ್ರದರ್ಶನಗಳು
ಲಿಡೋ	
ಸರ್ಕಸ್ (ಹಿ)	4 ಪ್ರದರ್ಶನಗಳು
ತಿಬ್ಬಾದೇವಿ	
ವೇದ (ಕ)	4 ಪ್ರದರ್ಶನಗಳು
ಪ್ರಭಾ	
ಕಾಂತಾರ (ಕ)	4 ಪ್ರದರ್ಶನಗಳು

ಮೈಸೂರು ಚಳಿಗಾಲದ ರೇಸುಗಳು

7ನೇ ದಿನ, ಬುಧವಾರ 28-12-2022

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 12.30 ಗಂಟೆಗೆ)

I. ವರುಣ ಪ್ಲೇಟ್–1200 ಮೀ. ರೇಟೆಡ್ 20 ರಿಂದ 45. ಮ.12.30ಕ್ಕೆ
1. NRI ಬ್ಲೂ 2. ಕಾಪರ್ ಸನ್‌ರೈಸ್ 3. ಮಿಸ್ಟಿಕಲ್ ಮರ್ಲಿನ್

II. ಪೋರ್ಟಿಗಲ್ ಬಿ ಪ್ಲೇಟ್–1200 ಮೀ. 2 ವರ್ಷದ (ಟರ್ಮ್ಸ್). ಮ.1.00ಕ್ಕೆ
1. ಕೋಲಾ 2. ಸ್ವಾಗತಂ 3. ಲಿವಿಂಗ್ ಡಾಲ್

III. ಸ್ಪ್ಲಾಷ್ ಪ್ಲೇಟ್– 1200 ಮೀ. ರೇಟೆಡ್ 00 ರಿಂದ 25. ಮ.1.30ಕ್ಕೆ
1 ಜಾಗುರ 2 ಥಿಯಾಸ್ ಗಿಫ್ಟ್ 3. ಶೂಟಿಂಗ್ ವೀನಸ್

IV. ಕುಟ್ಟ ಪ್ಲೇಟ್ ಡಿ3– 1200 ಮೀ. ರೇಟೆಡ್ 20 ರಿಂದ 45. ಮ.2.00ಕ್ಕೆ
1. ಟವರ್ ಕ್ವೆಸ್ಟ್ 2. ಕಂಟ್ರೀಸ್ ಟ್ಯಾಲೆಂಟ್ 3. ವಾರ್ ಸಾಂಗ್

V. ಆ್ಯಂಟೆ ಕ್ವೇರಾ ಪ್ಲೇಟ್ ಡಿ2–1200 ಮೀ. ರೇಟೆಡ್ 40 ರಿಂದ 65. ಸಂ.2.30ಕ್ಕೆ
1. ಜಂಗ್ ಪ್ರೋ ಜೋಚ್ 2. ಇಂಡಿಯನ್ ಗ್ಲೋರಿ 3. ತೆನಾಲಿ

VI. ನಂದಿ ದುರ್ಗ ಪ್ಲೇಟ್–1400 ಮೀ. ರೇಟೆಡ್ 40 ರಿಂದ 65. ಸಂ.3.00ಕ್ಕೆ
1. ಪ್ರಿನ್ಸ್ ಕಾರ್ಪೊರೇಟ್ 2. ಫಸ್ಟ್ ಇಂಪ್ರೆಷನ್ 3. ಡಿ ಜಾನಿ

VII. ಕುಟ್ಟ ಪ್ಲೇಟ್ ಡಿ2– 1200 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1. ಆಸ್ತಾರ್ 2. ಅನ್ ಇಮ್ಯಾಜಿನಬಲ್ 3. ಕಮ್ ಅಲೈವ್

VIII. ಡಾ. ಆರ್.ರಾಜೇಂದ್ರ ಪ್ರಸಾದ್ ಮೆಮೋರಿಯಲ್ ಟ್ರೋಫಿ– 1400 ಮೀ. ರೇಟೆಡ್ 80 ಮತ್ತು ಮೇಲ್ವರ್ಗ. ಸಂ.4.00ಕ್ಕೆ
1. ಮೊಗಲ್ 2. ಸೆಗೇರಾ 3. ಹ್ಯಾವ್ ಲಾಕ್ ಕ್ರೂಜ್

IX. ಆ್ಯಂಟೆ ಕ್ವೇರಾ ಪ್ಲೇಟ್ ಡಿ1–1200 ಮೀ. ರೇಟೆಡ್ 40 ರಿಂದ 65. ಸಂ.4.30ಕ್ಕೆ
1. ರಿಯಲ್ ಶೋ 2. ಎವರ್ಲಿ 3. ಅಮೇಜಿಂಗ್ ಸಫಾರಿ

X. ಕುಟ್ಟ ಪ್ಲೇಟ್ ಡಿ1– 1200 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1. ಐ ದ ಮೈಂಡ್ 2. ಓಕರೇ 3. ಫನ್ ಅಂಡ್ ಲ್ಯಾಫ್ಟರ್

ದಿನದ ಅತ್ಯುತ್ತಮ	: ಕೋಲಾ
ಡಬ್ಬಲ್	: ರಿಯಲ್ ಶೋ, ಐ ದ ಮೈಂಡ್
ಜಾಕ್‌ಪಾಟ್	: 6, 7, 8, 9 ಮತ್ತು 10
I ಟ್ರಿಬಲ್	: 2, 3 ಮತ್ತು 4
II ಟ್ರಿಬಲ್	: 5, 6 ಮತ್ತು 7
III ಟ್ರಿಬಲ್	: 8, 9 ಮತ್ತು 10
ಎಕ್ಸ್‌ಆಕ್ಸ್	: 9 ಮತ್ತು 10

ಟಿಪ್‌ಸ್ಟರ್ ಪಿಜಿಸಿ

ಕಡಕೊಳ ಬಳಿ ಪ್ರಧಾನಿ ಮೋದಿ ಸಹೋದರ ಪ್ರಹ್ಲಾದ್ ಮೋದಿ, ಕುಟುಂಬ ಸದಸ್ಯರಿದ್ದ ಕಾರು ಅಪಘಾತ




ಪ್ರಹ್ಲಾದ್ ಮೋದಿ ಅವರ ಸೊಸೆ ಜಿನಲ್ ಮೋದಿ, ಮೊಮ್ಮಗ ಮಹಾರ್ಥನ ಆರೋಗ್ಯ ವಿಚಾರಿಸಿದ ಸುತ್ತೂರು ಶ್ರೀಗಳು



ಶಾಸಕ ಜಿ.ಟಿ.ದೇವೇಗೌಡರು ಪ್ರಹ್ಲಾದ್ ಮೋದಿ, ಕುಟುಂಬದವರ ಆರೋಗ್ಯ ವಿಚಾರಿಸಿದರು.



ಚಾಲಕ ಸತ್ಯನಾರಾಯಣ



ಸಚಿವ ಕೆ.ಸಿ.ನಾರಾಯಣಗೌಡ ಅವರು ಪ್ರಹ್ಲಾದ್ ಮೋದಿ ಪುತ್ರ ಮೆಹುಲ್‌ರವರಿಂದ ಘಟನೆ ಬಗ್ಗೆ ಮಾಹಿತಿ ಪಡೆಯುತ್ತಿರುವುದು.



ಆಸ್ಪತ್ರೆಗೆ ತೆರಳುತ್ತಿರುವ ಸಂಸದ ಪ್ರತಾಪ್‌ಸಿಂಹ

ಒಂದನೇ ಪುಟದಿಂದ

ಮುಂದೆ ಪೈಲಟ್ ಮತ್ತು ಹಿಂದೆ ಎಸ್ಕಾರ್ಟ್ ವಾಹನದ ಮಧ್ಯೆ ತೆರಳುತ್ತಿದ್ದ ಬೆನ್ಜ್ ಕಾರು, ಬೆಂಗಳೂರು–ನೀಲಗಿರಿ ಹೆದ್ದಾರಿಯಲ್ಲಿ ಕಡಕೊಳ ಬಳಿ ಮಧ್ಯಾಹ್ನ 1.30ರಲ್ಲಿ ರಸ್ತೆ ವಿಭಜಕ (ಮೀಡಿಯನ್)ಕ್ಕೆ ಡಿಕ್ಕಿ ಹೊಡೆದಿದೆ. ಪರಿಣಾಮ ಕಾರಿನ ಮುಂದಿನ ಸೀಟಿನಲ್ಲಿದ್ದ ಪ್ರಹ್ಲಾದ್ ಮೋದಿ, ಹಿಂದೆ ಕುಳಿತಿದ್ದ ಮಗ ಮೆಹುಲ್ ಪ್ರಹ್ಲಾದ್ ಮೋದಿ, ಸೊಸೆ ಜಿನಲ್ ಮೋದಿ, ಮೊಮ್ಮಗ ಮಹಾರ್ಥ್ ಮೆಹುಲ್ ಮೋದಿ ಹಾಗೂ ಕಾರು ಚಾಲನೆ ಮಾಡುತ್ತಿದ್ದ ಬೆಂಗಳೂರಿನ ಸತ್ಯನಾರಾಯಣ ಅವರು ಗಾಯಗೊಂಡರು.

ಮೆಹುಲ್ ಮೋದಿ ಅವರಿಗೆ ತರಚಿದ ಗಾಯಗಳಾಗಿದ್ದು, ಜಿಲಾಲ್ ಅವರಿಗೆ ಕಣ್ಣಿನ ಬಳಿ ಗಾಯಗಳಾಗಿವೆ. ಆದರೆ ಮಹಾರ್ಥ್ ಮೆಹುಲ್ ಮೋದಿಯ ಎಡ ಮೊಣಕಾಲಿನ ಮೂಳೆ ಮುರಿದಿದೆ. ಉಳಿದಂತೆ ಪ್ರಹ್ಲಾದ್ ಮೋದಿ ಮತ್ತು ಚಾಲಕ ಸತ್ಯನಾರಾಯಣ ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಅವರು ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಆಸ್ಪತ್ರೆ ವೈದ್ಯರು ತಿಳಿಸಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಎಸ್ಪಿ ಸೀಮಾ ಲಾಟ್ಕರ್, ಅಡಿಷನಲ್ ಎಸ್ಪಿ ನಂದಿನಿ, ಡಿವೈಎಸ್ಪಿ ಪೂರ್ಣಚಂದ್ರ ತೇಜಸ್ವಿ ಹಾಗೂ ಇತರ ಪೊಲೀಸ್ ಅಧಿಕಾರಿಗಳು ಘಟನಾ ಸ್ಥಳಕ್ಕೆ ಧಾವಿಸಿ, ಗಾಯಗೊಂಡ ಮೋದಿ ಕುಟುಂಬದ ಸದಸ್ಯರನ್ನು ಆಂಬುಲೆನ್ಸ್‌ನಲ್ಲಿ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ಕರೆತಂದು, ದಾಖಲು ಮಾಡಿದರು.

ಸುತ್ತೂರು ಮಠಾಧೀಶರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಚಿವ ಕೆ.ಗೋಪಾಲಯ್ಯ, ಕೆ.ಸಿ.ನಾರಾಯಣ ಗೌಡ, ಸಂಸದ ಪ್ರತಾಪ್‌ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಜಿ.ಟಿ.ದೇವೇಗೌಡ, ಮಾಜಿ ಶಾಸಕ ಬಾಲರಾಜ್ ಸೇರಿದಂತೆ ಹಲವು ಗಣ್ಯರು ಆಸ್ಪತ್ರೆಗೆ ತೆರಳಿ ಪ್ರಹ್ಲಾದ್ ಮೋದಿ ಕುಟುಂಬದವರ ಆರೋಗ್ಯ ವಿಚಾರಿಸಿದರು.

ಅಪಘಾತಕ್ಕೀಡಾದ ಬೆನ್ಜ್ ಕಾರಿನ ಎಲ್ಲಾ ಏರ್ ಬ್ಯಾಗ್‌ಗಳು ತೆರೆದುಕೊಂಡಿದ್ದರಿಂದ ಪ್ರಯಾಣಿಸುತ್ತಿದ್ದವರೆಲ್ಲರೂ ಪಾರಾಗಿದ್ದಾರೆ. ಅಪಘಾತಕ್ಕೀಡಾದ ಬೆನ್ಜ್ ಕಾರಿಗೆ ಹಿಂದೆ ಬರುತ್ತಿದ್ದ ಕಿಯಾ ಕಾರು ಡಿಕ್ಕಿ ಹೊಡೆದು ಅದರ ಮುಂಭಾಗವೂ ಸ್ವಲ್ಪ ಜಖಂಗೊಂಡಿದೆ. ಇದರಲ್ಲಿ ಪ್ರಹ್ಲಾದ್ ಮೋದಿ ಅವರ ಮಗಳು, ಅಳಿಯ ಇದ್ದರೆಂದು ಹೇಳಲಾಗಿದ್ದು, ಅವರು ಸುರಕ್ಷಿತವಾಗಿದ್ದಾರೆ.


ನಿದ್ರೆ ಮಂಪರಿನಲ್ಲಿದ್ದ ಚಾಲಕನ ನಿಯಂತ್ರಣ ತಪ್ಪಿದ ಕಾರು ಮೀಡಿಯನ್‌ಗೆ ಡಿಕ್ಕಿ ಹೊಡೆದಿದೆ ಎಂದು ಹೇಳಲಾಗುತ್ತಿದ್ದರೂ, ಘಟನೆ ಹೇಗಾಯಿತು ಎಂಬುದೇ ತಿಳಿಯುತ್ತಿಲ್ಲ ಎಂದು ಕಾರು ಚಾಲಕ ಸತ್ಯನಾರಾಯಣ ಅವರು ಆಸ್ಪತ್ರೆಯಲ್ಲಿ ಪೊಲೀಸರಿಗೆ ಹೇಳಿಕೆ ನೀಡಿದ್ದಾರೆ.

ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಶಶಿಕುಮಾರ್ ಘಟನಾ ಸ್ಥಳ ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಅಪಘಾತ ಸಂಭವಿಸಿರುವುದು ಗಣ್ಯರ ವಾಹನ ಎಂದು ತಿಳಿಯುತ್ತಿದ್ದಂತೆಯೇ ಕಡಕೊಳ ಬಳಿ ಸಾರ್ವಜನಿಕರು ಜಮಾಯಿಸಲೆತ್ನಿಸಿದಾಗ ಪೊಲೀಸರು ಅವರನ್ನು ಚದುರಿಸಿ ವಾಹನ ಸಂಚಾರಕ್ಕೆ ಅವಕಾಶ ಮಾಡಿಕೊಟ್ಟರು.

ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿಗಳಾದ ಎಂ.ಮುತ್ತುರಾಜ್, ಎಂ.ಎಸ್.ಗೀತಾ ಪ್ರಸನ್ನ, ಕೆ.ಆರ್. ಉಪ ವಿಭಾಗದ ಎಸಿಪಿ ಎಸ್.ಇ.ಗಂಗಾಧರಸ್ವಾಮಿ, ಕೆ.ಆರ್. ಠಾಣೆ ಇನ್ಸ್‌ಪೆಕ್ಟರ್ ಮಹೇಶ್, ಕೆ.ಆರ್. ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಮಂಜುನಾಥ್ ಹಾಗೂ ಇತರ ಅಧಿಕಾರಿಗಳು ಜೆಎಸ್‌ಎಸ್ ಆಸ್ಪತ್ರೆಗೆ ಭೇಟಿ ನೀಡಿದ್ದರು.

ಮುಂಜಾಗ್ರತಾ ಕ್ರಮವಾಗಿ ಜೆಎಸ್‌ಎಸ್ ಆಸ್ಪತ್ರೆ ಬಳಿ ಕೆ.ಆರ್. ಠಾಣೆ ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ ಸಿಬ್ಬಂದಿಗಳನ್ನು ನಿಯೋಜಿಸಲಾಗಿದ್ದು, ಭದ್ರತೆ ಒದಗಿಸಲಾಗಿದೆ. ಅಪಘಾತದ ವಿಷಯ ತಿಳಿಯುತ್ತಿದ್ದಂತೆಯೇ ಬಿಜೆಪಿ ಹಿರಿಯ ಮುಖಂಡರು, ಕಾರ್ಯಕರ್ತರು, ವಿವಿಧ ನಿಗಮ ಮಂಡಳಿ ಅಧ್ಯಕ್ಷರು ಆಸ್ಪತ್ರೆಗೆ ಭೇಟಿ ನೀಡುತ್ತಿದ್ದಾರೆ. ಸುತ್ತೂರು ಶ್ರೀಗಳು, ಶಾಸಕ ಎಸ್.ಎ.ರಾಮದಾಸ್ ಹಾಗೂ ಸಂಸದ ಪ್ರತಾಪ್ ಸಿಂಹ ಗಾಯಾಳುಗಳ ಆರೋಗ್ಯ ವಿಚಾರಿಸಿದ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಎಲ್ಲರೂ ದೈವವಶಾತ್ ಪಾರಾಗಿದ್ದಾರೆ. ಎಲ್ಲರಿಗೂ ಸಣ್ಣಪುಟ್ಟ ಗಾಯಗಳಾಗಿದ್ದು, ಸದ್ಯ ವಾರ್ಡ್‌ಗೆ ಶಿಫ್ಟ್ ಮಾಡಲಾಗಿದೆ. ಇನ್ನೆರಡು ದಿನದಲ್ಲಿ ಡಿಸ್ಚಾರ್ಜ್ ಆಗಬಹುದು ಎಂದು ತಿಳಿಸಿದರು.

ಬೆಂಗಳೂರು ಮಹಾನಗರ ಭೂ ಸಾರಿಗೆ ಪ್ರಾಧಿಕಾರ ಅಸ್ತಿತ್ವಕ್ಕೆ



ಬೆಂಗಳೂರು, ಡಿ.27(ಕೆಎಂಶಿ)–ದೇಶದಲ್ಲಿಯೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಬೆಂಗಳೂರು ಮಹಾನಗರದ ಭೂಸಾರಿಗೆ ಸಮಸ್ಯೆಗಳಿಗೆ ವೈಜ್ಞಾನಿಕ ಪರಿಹಾರ ಕಂಡುಕೊಳ್ಳಲು, ಹಲವು ಮಾದರಿಗಳ ಪ್ರಾಧಿಕಾರ, ಇಲಾಖೆಗಳ ಬದಲಾಗಿ ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ಅಸ್ತಿತ್ವಕ್ಕೆ ತರಲಾಗುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿಂದು ಹೇಳಿದ್ದಾರೆ.

ಬೆಂಗಳೂರು ಮಹಾನಗರಕ್ಕೆ ಸುತ್ತಮುತ್ತಲಿನ ಪುರಸಭೆ, ನಗರಸಭೆಗಳು ಹಾಗೂ ಸುಮಾರು 110 ಹಳ್ಳಿಗಳು ಸೇರ್ಪಡೆಯಾಗಿವೆ. ಮಹಾನಗರದ ಮೂಲಸೌಕರ್ಯಗಳಿಗೂ ಗ್ರಾಮೀಣ ಮೂಲಸೌಕರ್ಯಗಳಿಗೂ ವ್ಯತ್ಯಾಸ ಇರುತ್ತದೆ. ಕಳೆದ ಸುಮಾರು 25 ವರ್ಷಗಳಿಂದ ಬೆಂಗಳೂರಿನ ರಸ್ತೆಗಳ ಅಗಲೀಕರಣವಾಗಿಲ್ಲ. ಪ್ರತಿನಿತ್ಯ ಸುಮಾರು 5 ಸಾವಿರಕ್ಕೂ ಹೆಚ್ಚು ಹೊಸ ವಾಹನಗಳು ರಸ್ತೆಗಿಳಿಯುತ್ತಿವೆ. ಮಹಾನಗರದಲ್ಲಿ ಸುಮಾರು 1 ಕೋಟಿ 25 ಲಕ್ಷ ಜನಸಂಖ್ಯೆ ಇದೆ, ಸುಮಾರು 1 ಕೋಟಿ 3 ಲಕ್ಷ ವಾಹನಗಳಿವೆ.ಬರುವ ದಿನಗಳಲ್ಲಿ ಜನಸಂಖ್ಯೆಗಿಂತ ವಾಹನಗಳ ಸಂಖ್ಯೆಯೇ ಅಧಿಕವಾಗಲಿದೆ.

ಇವುಗಳ ನಿರ್ವಹಣೆಯನ್ನು ಬಹುವಿಧದ ಸಂಸ್ಥೆಗಳು ನೋಡಿಕೊಳ್ಳುತ್ತಿವೆ. ಹೊಸ ರಸ್ತೆಗಳ ನಿರ್ಮಾಣಕ್ಕೆ ಭೂಸ್ವಾಧೀನ ಕಾರ್ಯದ ಜವಾಬ್ದಾರಿ ಹಾಗೂ ಸಮಗ್ರ ಪರಿಹಾರ ಕಂಡುಕೊಳ್ಳಲು ವಿಧೇಯಕ ತರಲಾಗುತ್ತಿದೆ.

ಗೊರಗುಂಟೆ ಪಾಳ್ಯದ ಬಳಿ ಬಹು ಹಂತದ ಪಥ, ಹೆಬ್ಬಾಳ ಮೇಲ್ಸೇತುವೆ ಅಗಲೀಕರಣ ಸೇರಿದಂತೆ ಬೇರೆ ಊರುಗಳಿಂದ ಪ್ರವೇಶಿಸುವ ಮಾರ್ಗಗಳ ವಿಸ್ತಾರಕ್ಕೆ ಕ್ರಮವಹಿಸಲಾಗಿದೆ. ಬೆಂಗಳೂರಿನ ಸಂಚಾರದ ವೈಜ್ಞಾನಿಕ ನಿರ್ವಹಣೆಗೆ ಅಧ್ಯಯನಕ್ಕೆ ಐಐಎಸ್‌ಸಿಗೆ ಕೋರಲಾಗಿದೆ. ಈ ಹಿಂದಿನ ವರದಿಗಳನ್ನು ಪುನರ್ ಪರಿಶೀಲನೆ ಮಾಡಲಾಗುವುದು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಶಾಂಘೈ, ಲಂಡನ್, ನ್ಯೂಯಾರ್ಕ್ ಮತ್ತಿತರ ನಗರಗಳ ಸಂಚಾರ ನಿರ್ವಹಣೆಯನ್ನೂ ಕೂಡ ಅಧ್ಯಯನ ಮಾಡಲಾಗುವುದು.

ಸಂಚಾರ ನಿರ್ವಹಣೆಗೆ ಎಡಿಜಿಪಿ ಹಂತದ ಅಧಿಕಾರಿ ನೇಮಿಸಿ ಇಲಾಖೆಯ ಸಾಮರ್ಥ್ಯ ಹೆಚ್ಚಿಸಲಾಗಿದೆ. ಐದು ಕಡೆ ಹೊಸ ಸಂಚಾರ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲಾಗಿದೆ. ಈಗ ಸಾಕಷ್ಟು ಸುಧಾರಣೆಗಳು ಕಂಡು ಬಂದಿವೆ. ಸಂಚಾರ್ ಕಮಾಂಡ್ ಕೇಂದ್ರ ಹಾಗೂ 7 ಸಾವಿರ ನಿರ್ಭಯ ಕ್ಯಾಮೆರಾಗಳನ್ನು ಕೂಡ ಸಂಚಾರ ನಿಗಾ ಉದ್ದೇಶಕ್ಕೂ ಕೂಡ ಬಳಕೆ ಮಾಡಲಾಗುತ್ತಿದೆ.ರಸ್ತೆ ನಿರ್ಮಾಣ, ಸಂಚಾರ ನಿರ್ವಹಣೆ ಸುಧಾರಣೆಗೆ ನಾಗರಿಕರ ಸಹಕಾರ ಅಗತ್ಯ.

ಸಾರಿಗೆ ಸಂಚಾರ ಲೋಪಗಳಿಗೆ ಖುದ್ದಾಗಿ ದಂಡ ಹಾಕುವ ಬದಲು ಕ್ಯಾಮೆರಾಗಳ ಮೂಲಕ ದಂಡ ವಿಧಿಸಲು ಪ್ರಾರಂಭವಾದ ನಂತರ ಹೆಚ್ಚು ದಂಡ ಸಂಗ್ರಹವಾಗುತ್ತಿದೆ ಎಂದರು. ಬೆಂಗಳೂರು ಮಹಾನಗರಕ್ಕೆ ರಿಂಗ್ ರಸ್ತೆ, ಪೆರಿಫೆರಲ್ ರಿಂಗ್ ರಸ್ತೆ ಮತ್ತಿತರ ಕಾಮಗಾರಿಗಳ ಭೂಸ್ವಾಧೀನ ಕಾರ್ಯ, ಮೆಟ್ರೋ ಮಾರ್ಗದ ವಿಸ್ತರಣೆ ಮೊದಲಾದ ಕಾರ್ಯಗಳನ್ನು ಕೈಗೊಳ್ಳಲಾಗುವುದು ವಿಧೇಯಕದ ಕುರಿತು ಸಲಹೆಗಳನ್ನು ಸ್ವಾಗತಿಸಲಾಗುವುದು ಎಂದು ಮುಖ್ಯಮಂತ್ರಿಯವರು ಹೇಳಿದರು.

ಇದಕ್ಕೂ ಮೊದಲು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಅವರು ಮಂಡಿಸಿದ್ದ ವಿಧೇಯಕವನ್ನು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಸದನದ ಪರ್ಯಾಲೋಚನೆಗೆ ಹಾಕಿ ವಿಧೇಯಕವು ಧ್ವನಿಮತದ ಮೂಲಕ ಸರ್ವಾನುಮತದ ಅಂಗೀಕಾರ ಪಡೆದಿದೆ ಎಂದು ಘೋಷಿಸಿದರು.